"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

(159ನೇ ಅಧಿವೇಶನ)

ಮಂಗಳವಾರ, 18ನೇ ಆಗಸ್ಟ್ 2026

## ವಿಷಯಾನುಕ್ರಮಣಿಕೆ (INDEX)

1. ಉಪ ಸಭಾಪತಿಯವರ ಚುನಾವಣೆ

2. ಅಭಿನಂದನೆ

"ವಿಧಾನ ಪರಿಷತ್ತಿನ ನೂತನ ಉಪ ಸಭಾಪತಿಗಳಾಗಿ ಡಾ: ಉಮಾಶ್ರೀ ಅವರು ಆಯ್ಕೆಯಾಗಿರುವ ಕುರಿತು."

- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಶರವಣ ಟಿ.ಎ.
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಯು.ಟಿ.ಖಾದರ್
- ಶ್ರೀ ಸಿ.ಟಿ.ರವಿ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀಮತಿ ಹೇಮಲತಾ ನಾಯಕ್
- ಡಾ: ಆರತಿ ಕೃಷ್ಣ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೆ.ಶಿವಕುಮಾರ್
- ಶ್ರೀ ಬಿ.ಎಸ್.ಶಿವಣ್ಣ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಡಿ.ಎಸ್.ಅರುಣ್
- ಡಾ: ಧನಂಜಯ ಸರ್ಜಿ
- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ರಘು ಆರ್.
- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**3. ಅಭಿನಂದನೆ ಸ್ವೀಕರಿಸಿದ ನೂತನ ಉಪ ಸಭಾಪತಿಯವರಿಂದ ಧನ್ಯವಾದ ಸಮರ್ಪಣೆ**

- ಡಾ: ಉಮಾಶ್ರೀ (ನೂತನ ಉಪ ಸಭಾಪತಿಯವರು)

**4. ಪ್ರಕಟಣೆ**

**ಅಧಿವೇಶನದ ಸಮಯದಲ್ಲಿ ಮಾನ್ಯ ಶಾಸಕರು ಹಾಗೂ ಸಚಿವರಿಗೆ ಉಪಹಾರ ಹಾಗೂ ಭೋಜನ ವ್ಯವಸ್ಥೆ ಮಾಡಿರುವ ಕುರಿತು.**

(ಭೋಜನ ವಿರಾಮ)

**5. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**220 - ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಬಗ್ಗೆ.**

- ಶ್ರೀ ಶಿವಕುಮಾರ್ ಕೆ.
- ಶ್ರೀ ಲಕ್ಷ್ಮಣ ಎಸ್.ಸವದಿ (ಸಹಕಾರ ಸಚಿವರು)

**247 - ಕರ್ನಾಟಕದಲ್ಲಿ ರೈತರು ಪಡೆದಿರುವ ಕೃಷಿ ಸಾಲದ ಕುರಿತು.**

- ಶ್ರೀ ಮಧು ಜಿ.ಮಾದೇಗೌಡ
- ಶ್ರೀ ಲಕ್ಷ್ಮಣ ಎಸ್.ಸವದಿ (ಸಹಕಾರ ಸಚಿವರು)

**262 - ಬೀದರ್ ಜಿಲ್ಲೆಯ ರೈತರ ಜೀವನಾಡಿ BSSK ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡಿಸುವುದರ ಕುರಿತು.**

- ಡಾ: ಚಂದ್ರಶೇಖರ ಬಸವರಾಜ ಪಾಟೀಲ
- ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಸಕ್ಕರೆ ಮತ್ತು ಜವಳಿ ಸಚಿವರು)

**201 - ಕ್ರೈಸ್ತ ಸಮುದಾಯದವರಿಗೆ ನೀಡುತ್ತಿರುವ ಸೌಲಭ್ಯಗಳ ಕುರಿತು.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು)

**237 - ಅಲ್ಪಸಂಖ್ಯಾತ ವಿದ್ಯಾರ್ಥಿ ವಸತಿ ನಿಲಯಗಳಲ್ಲಿನ ಮೂಲಸೌಕರ್ಯ ಕುರಿತು.**

- ಶ್ರೀ ಕೆ.ಅಬ್ದುಲ್ ಜಬ್ಬರ್
- ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

6. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು

ಅ) ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದೆಂಬ ದೃಷ್ಟಿಯಿಂದ 'ನಿರಂತರ ಆಪ್' ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಿಸುವ ಕುರಿತು.

– ಶ್ರೀ ರಾಮೋಜಿಗೌಡ
– ಡಾ: ಯತೀಂದ್ರ. ಎಸ್ (ಸಭಾನಾಯಕರು)

ಆ) SC/ST ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳ ವಿಲೇವಾರಿ ಮತ್ತು ತ್ವರಿತ ನ್ಯಾಯ ಒದಗಿಸುವ ಕುರಿತು.

– ಶ್ರೀ ತಿಪ್ಪಣ್ಣಪ್ಪ ಕಮಕನೂರ
– ಡಾ: ಯತೀಂದ್ರ. ಎಸ್ (ಸಭಾನಾಯಕರು)

ಇ) ಶಿಕ್ಷಕರ ಹುದ್ದೆಗಳ ನೇಮಕಾತಿಯಲ್ಲಿ ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳ ನಿರ್ಲಕ್ಷ್ಯತನ ಕುರಿತು.

– ಶ್ರೀ ಕೆ. ಅಬ್ದುಲ್ ಜಬ್ಬರ್
– ಶ್ರೀಮತಿ ಬಲ್ಕೀಸ್ ಬಾನು
– ಡಾ: ಯತೀಂದ್ರ. ಎಸ್ (ಸಭಾನಾಯಕರು)

ಈ) ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹ ಪಿಂಚಣಿದಾರರ ಪಿಂಚಣಿ ತಡೆಹಿಡಿದಿರುವುದು ಹಾಗೂ ದಾಖಲೆ ಸಲ್ಲಿಸಲು ಕಾಲಾವಕಾಶ ವಿಸ್ತರಿಸುವ ಕುರಿತು.

– ಶ್ರೀ ಐವನ್ ಡಿ'ಸೋಜಾ
– ಡಾ: ಯತೀಂದ್ರ. ಎಸ್ (ಸಭಾನಾಯಕರು)

ಉ) ರಾಜ್ಯದ ಮಲೆನಾಡು ಪ್ರದೇಶಗಳಲ್ಲಿನ ಜನವಸತಿ ಪ್ರದೇಶಗಳಾದ ನೂರಾರು ಗ್ರಾಮೀಣ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳನ್ನಾಗಿ ಘೋಷಿಸಿರುವುದರಿಂದ ಗ್ರಾಮೀಣ ಭಾಗದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವ ಕುರಿತು.

– ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ
– ಶ್ರೀ ರಾಮಲಿಂಗಾರೆಡ್ಡಿ (ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು)

ಊ) ಹುಬ್ಬಳ್ಳಿ ಮಹಾನಗರದ ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ನಡೆಯುತ್ತಿರುವ ಫ್ಲೈ ಓವರ್ ನಿರ್ಮಾಣ ಕಾಮಗಾರಿಯಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಉಂಟಾಗುತ್ತಿರುವ ತೊಂದರೆಗಳ ಕುರಿತು.

– ಶ್ರೀ ಎಫ್.ಹೆಚ್. ಜಕ್ಕಪ್ಪನವರ್
– ಡಾ: ಯತೀಂದ್ರ. ಎಸ್ (ಸಭಾನಾಯಕರು)

7. ಚುನಾವಣಾ ಪ್ರಸ್ತಾವಗಳು

ಅ) "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು."

– ಡಾ: ಯತೀಂದ್ರ ಎಸ್. (ಸಭಾನಾಯಕರು)

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

**ಆ) "ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು."**

– ಡಾ: ಯತೀಂದ್ರ ಎಸ್. (ಸಭಾನಾಯಕರು)

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)**

**8. ವಿಧೇಯಕವನ್ನು ಹಿಂಪಡೆಯುವ ಪ್ರಸ್ತಾವ**

**"ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2018**

– ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)

**(ವಿಧೇಯಕವನ್ನು ಹಿಂದಕ್ಕೆ ಪಡೆಯಲಾಯಿತು)**

~ ~ ~ ~ ~ ~ ~ ~

(733) 18.08.2026 11.00 TCH-RN (ಸಭಾಪತಿಯವರ ಉಪಸ್ಥಿತಿ)

# ಕರ್ನಾಟಕ ವಿಧಾನ ಪರಿಷತ್ತು

**ಮಂಗಳವಾರ, 18ನೇ ಆಗಸ್ಟ್ 2026**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ ಶ್ರೀ ಸಲೀಂ ಅಹ್ಮದ್ ಅವರು ಪೀಠದಲ್ಲಿ ಉಪಸ್ಥಿತರಾದರು**

**ಸಭಾಪತಿಯವರು:-** ಉಪ ಸಭಾಪತಿಯವರ ಸ್ಥಾನಕ್ಕೆ ಚುನಾವಣೆ ಸಂಬಂಧ ಒಟ್ಟು 5 ಪ್ರಸ್ತಾವಗಳು ಈಗಾಗಲೇ ಬಂದಿವೆ. ಇವುಗಳಲ್ಲಿ ಎಲ್ಲಾ 5 ಪ್ರಸ್ತಾವನೆಗಳು ಡಾ: ಉಮಾಶ್ರೀ ಅವರ ಹೆಸರನ್ನು ಸೂಚಿಸುತ್ತದೆ.

## 1. ಉಪ ಸಭಾಪತಿಯವರ ಚುನಾವಣೆ

### ಮೊದಲನೇ ಪ್ರಸ್ತಾವ

**ಡಾ: ಯತೀಂದ್ರ ಎಸ್. ಮಾನ್ಯ ಸಭಾನಾಯಕರು ಹಾಗೂ ನಗರಾಭಿವೃದ್ಧಿ ಸಚಿವರು:-** ಮಾನ್ಯ ಸಭಾಪತಿಯವರೇ, ಡಾ: ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಡಾ: ಯತೀಂದ್ರ ಎಸ್. ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ಎರಡನೇ ಪ್ರಸ್ತಾವ

**ಶ್ರೀ ಪಿ.ವಿ.ಮೋಹನ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಡಾ: ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಡಾ: ಡಿ. ತಿಮ್ಮಯ್ಯ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಶ್ರೀ ಬಸನಗೌಡ ಬಾದರ್ಲಿರವರ ಪರವಾಗಿ)** ಮಾನ್ಯ ಸಭಾಪತಿಯವರೇ ಶ್ರೀ ಪಿ.ವಿ.ಮೋಹನ್ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ಮೂರನೇ ಪ್ರಸ್ತಾವ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಡಾ: ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ಶ್ರೀ ರಾಮೋಜಿಗೌಡ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

## ನಾಲ್ಕನೇ ಪ್ರಸ್ತಾವ

**ಶ್ರೀ ಹೆಚ್.ಪಿ ಸುಧಾಮ್ ದಾಸ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಡಾ: ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಡಾ: ಆರತಿ ಕೃಷ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ ಶ್ರೀ ಹೆಚ್.ಪಿ ಸುಧಾಮ್ ದಾಸ್ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

## ಐದನೇ ಪ್ರಸ್ತಾವ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ), (ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಡಾ: ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಶ್ರೀ ಐವನ್ ಡಿ'ಸೋಜಾ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**ಸಭಾಪತಿಯವರು:–** ಈಗ ನಾನು ಮೊದಲನೆಯ ಪ್ರಸ್ತಾವವನ್ನು ಸದನದಲ್ಲಿ ಮತಕ್ಕೆ ಹಾಕುತ್ತೇನೆ.

**ಪ್ರಸ್ತಾವ ಏನೆಂದರೆ;**

"ಡಾ: ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸುವುದು"

**ಸಭಾಪತಿಯವರು:–** ಡಾ: ಯತೀಂದ್ರ ಎಸ್‌ರವರು, ಶ್ರೀ ಪಿ.ವಿ.ಮೋಹನ್, ಶ್ರೀ ರಾಮೋಜಿಗೌಡ, ಶ್ರೀ ಹೆಚ್.ಪಿ ಸುಧಾಮ್ ದಾಸ್, ಶ್ರೀ ಐವನ್ ಡಿ'ಸೋಜಾ (ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡರವರ ಪರವಾಗಿ) ರವರುಗಳು ಸೂಚಿಸಿರುವ ಹಾಗೂ ಶ್ರೀ ಎಫ್.ಹೆಚ್.ಜಕ್ಕಪ್ಪನವರ್, ಡಾ: ಡಿ. ತಿಮ್ಮಯ್ಯ (ಶ್ರೀ ಬಸನಗೌಡ ಬಾದರ್ಲಿರವರ ಪರವಾಗಿ), ಶ್ರೀ ರಾಜೇಂದ್ರ ರಾಜಣ್ಣ, ಡಾ: ಆರತಿ ಕೃಷ್ಣ, ಶ್ರೀ ಜಗದೇವ್ ಗುತ್ತೇದಾರ್‌ರವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ;

ಡಾ: ಉಮಾಶ್ರೀ ಅವರನ್ನು 29ನೇ ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸುವುದು"

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, unanimous ಇದೆ.

## ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು

**ಶ್ರೀಮತಿ ಉಮಾಶ್ರೀ ಅವರನ್ನು ವಿಧಾನ ಪರಿಷತ್ತಿನ ಉಪಸಭಾಪತಿಯವರನ್ನಾಗಿ ಚುನಾಯಿಸಲಾಗಿದೆಯೆಂದು ಘೋಷಿಸಲಾಯಿತು**

(ಸದನದ ಎಲ್ಲ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷ ವ್ಯಕ್ತಪಡಿಸಿದರು)

**ಸಭಾಪತಿಯವರು:-** ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಪ್ರಸ್ತಾವವನ್ನು ಮಂಡಿಸಿದವರು ಹಾಗೂ ಪ್ರಸ್ತಾವವನ್ನು ಅನುಮೋದಿಸಿದವರು ಡಾ: ಉಮಾಶ್ರೀ ಅವರನ್ನು ಉಪ ಸಭಾಪತಿಗಳ ಸ್ಥಾನಕ್ಕೆ ಕರೆತರಲು ಕೋರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಮಾನ್ಯ ಮುಖ್ಯ ಸಚೇತಕರು ಹಾಗೂ ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಉಪ ಸಭಾಪತಿಗಳ ಸ್ಥಾನಕ್ಕೆ ಆಯ್ಕೆಯಾದಂತಹ ಡಾ: ಉಮಾಶ್ರೀ ಅವರನ್ನು ಉಪ ಸಭಾಪತಿಯವರ ಸ್ಥಾನಕ್ಕೆ ಕರೆತಂದರು)**

**(ನೂತನ ಉಪ ಸಭಾಪತಿಗಳಾಗಿ ಆಯ್ಕೆಯಾದ ಡಾ: ಉಮಾಶ್ರೀ ಯವರು ಉಪ ಸಭಾಪತಿ ಸ್ಥಾನವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಮಾನ್ಯ ಮುಖ್ಯ ಸಚೇತಕರು ಹಾಗೂ ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಹಾಗೂ ಸದಸ್ಯರೆಲ್ಲರೂ ಉಪ ಸಭಾಪತಿಯವರಾದ ಡಾ: ಉಮಾಶ್ರೀಯವರಿಗೆ ಕೈ ಕುಲುಕಿ ಶುಭ ಕೋರಿದರು)**

(ಮುಂದು)

(734)18.8.2026/11.10/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**2. ಅಭಿನಂದನೆ**

**"ವಿಧಾನ ಪರಿಷತ್ತಿನ ನೂತನ ಉಪ ಸಭಾಪತಿಗಳಾಗಿ ಡಾ: ಉಮಾಶ್ರೀ ಅವರು ಆಯ್ಕೆಯಾಗಿರುವ ಕುರಿತು."**

- - - - -

**ಸಭಾಪತಿಯವರು:-** ಡಾ: ಉಮಾಶ್ರೀಯವರು ಉಪಸಭಾಪತಿಗಳಾಗಿ ನೇಮಕವಾಗಿದ್ದಾರೆ, ಅವರಿಗೆ ಶುಭ ಕೋರುತ್ತಾ ಸಭಾನಾಯಕರಾದ ಡಾ: ಯತೀಂದ್ರ. ಎಸ್‌ರವರು ಮಾತನಾಡಬೇಕು. ಈಗ ಸಮಯ 11.10 ಗಂಟೆಯಾಗಿದೆ. ಶುಭ ಕೋರುವವರು ಸಮಯ 12.10 ಗಂಟೆಯವರೆಗೂ ಮಾತನಾಡಬಹುದು. ನಾನು 12.15 ಗಂಟೆಗೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ನಾವೇ ಸಮಯವನ್ನು ನಿಯಂತ್ರಣ ಮಾಡಿಕೊಳ್ಳಬೇಕು. ಆದ್ದರಿಂದ ಇದರ ಬಗ್ಗೆ ಒಂದು ಗಂಟೆಗಳ ಕಾಲ ಚರ್ಚೆಗೆ ಸಮಯ ಕೊಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ 8 ಜನ ಸಚಿವರಲ್ಲಿ ಸಚಿವರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಒಬ್ಬರನ್ನು ಬಿಟ್ಟರೆ ಉಳಿದವರು ಕಾಣಿಸುತ್ತಿಲ್ಲ. ಸಚಿವರಾದ ಬಾಲಕೃಷ್ಣರವರು ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಬಂದಿದ್ದಾರೆ. ಇಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಎಂದು ಲಿಖಿತವಾಗಿ ತಿಳಿಸಿದ ಮೇಲೆ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಯಾರ್ಯಾರು ಎಂಬುದನ್ನು ತಿಳಿಸಿ.

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರುಗಳು ಬರುತ್ತಾರೆ. ಎಲ್ಲರಿಗೂ ಫೋನ್ ಮಾಡಿ ತಿಳಿಸಿದ್ದೇವೆ. ಚುನಾವಣೆ ಆದಮೇಲೆ ಪ್ರಶ್ನೋತ್ತರ ವೇಳೆಗೆ ಎಲ್ಲರೂ ಬರುತ್ತಾರೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಇದು ಸಂತೋಷದ ಸಮಯ. ಡಾ: ಉಮಾಶ್ರೀಯವರು ಉಪಸಭಾಪತಿಯಾಗಿ ಆಯ್ಕೆಯಾಗಿದ್ದಾರೆ. ಎಲ್ಲರೂ ಅಭಿನಂದನೆ ಮಾಡುತ್ತಾರೆ. ಆಮೇಲೆ ನೋಡುತ್ತೇವೆ.

**ಡಾ: ಯತೀಂದ್ರ. ಎಸ್:-** ಕೆಳಮನೆಯಲ್ಲಿ ಉಪಸಭಾಧ್ಯಕ್ಷರ ಚುನಾವಣೆ ನಡೆಯುತ್ತಿದೆ. ಹಾಗಾಗಿ ಸಚಿವರುಗಳು busy ಆಗಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆ ಸಂತೋಷವನ್ನು ಉಳಿದ ಏಳು ಸಚಿವರೂ ಹಂಚಿಕೊಳ್ಳಲಿ ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಆಯಿತು, ಕರೆಸುತ್ತೇನೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ನೂತನವಾಗಿ ನಮ್ಮ ವಿಧಾನ ಪರಿಷತ್ತಿಗೆ ಉಪಸಭಾಪತಿಗಳಾಗಿ ಆಯ್ಕೆಯಾಗಿರುವಂತಹ ಡಾ: ಉಮಾಶ್ರೀ ಅವರಿಗೆ ಶುಭಾಶಯಗಳನ್ನು ಹೇಳುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳು. ಮೊದಲಿಗೆ ನಮ್ಮೆಲ್ಲರ ನೆಚ್ಚಿನ ವಿಧಾನ ಪರಿಷತ್ತಿನ ಸದಸ್ಯರು, ನಮಗೆಲ್ಲರಿಗೂ ಸಹೋದರಿ ಸಮಾನರಾದಂತಹ ಡಾ: ಉಮಾಶ್ರೀಯವರಿಗೆ ಇಡೀ ಸದನದ ಪರವಾಗಿ, ನಮ್ಮ ಪಕ್ಷದ ಪರವಾಗಿ ಮತ್ತು ವೈಯಕ್ತಿಕವಾಗಿ ಶುಭಾಶಯಗಳನ್ನು ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಡಾ: ಉಮಾಶ್ರೀ ಅವರು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ನೊಣವಿನಕೆರೆ ಗ್ರಾಮದವರು. ಅವರು 1957ರಲ್ಲಿ ಜನಿಸಿದ್ದಾರೆ. ಅವರಿಗೆ ಬಾಲ್ಯದಲ್ಲಿ ಎಸ್.ಎಸ್.ಎಲ್.ಸಿ.ವರೆಗೆ ಮಾತ್ರ ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಾಯಿತು. ಕಡು ಬಡತನದ ಹಿನ್ನೆಲೆಯಿಂದ ಬಂದವರವರು. ಹಾಗಾಗಿ ಹೊಟ್ಟೆಪಾಡಿಗೋಸ್ಕರ ಅವರು ರಂಗಭೂಮಿಯ ಮೊರೆ ಹೋಗಬೇಕಾಯಿತು. ನಟನೆಯನ್ನು ಅವರು ಕೇವಲ ಜೀವನೋಪಾಯಕ್ಕೋಸ್ಕರ ತೆಗೆದುಕೊಂಡರೂ ಕೂಡ ಅದನ್ನು ಅವರು ಕೇವಲ ಹೊಟ್ಟೆಹೊರೆಯುವಂತಹ ವೃತ್ತಿ ಎಂದು ಮಾತ್ರ ಭಾವಿಸದೇ, ಚಿತ್ರರಂಗದಲ್ಲಿ ಮತ್ತು ನಟನಾವೃತ್ತಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಈ ದೇಶ ಕಂಡಂತಹ ಒಬ್ಬ ಅತ್ಯುತ್ತಮ ನಟಿಯಾಗಿ ಅವರು ಹೊರಹೊಮ್ಮಿದರು. ಇವತ್ತು ನಮ್ಮ ಕನ್ನಡ ಚಿತ್ರರಂಗ ಮಾತ್ರವಲ್ಲ, ಇಡೀ ಭಾರತೀಯ ಚಿತ್ರರಂಗದಲ್ಲಿರುವಂತಹ ಅತ್ಯದ್ಭುತ ನಟ-ನಟಿಯರಲ್ಲಿ ಅವರು ಕೂಡ ಮೊದಲನೆ ಸಾಲಿನಲ್ಲಿ ನಿಲ್ಲುತ್ತಾರೆ. ಅವರ ನಟನೆಗೆ ಬಹಳಷ್ಟು ಪ್ರಶಸ್ತಿಗಳು ಮುಡಿಯೇರಿವೆ. ಅವರಿಗೆ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ 6 ಬಾರಿ ಸಿಕ್ಕಿದೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ಕೂಡ ಅವರು ದೊರಕಿಸಿಕೊಂಡಿದ್ದಾರೆ. ಅವರ 'ಗುಲಾಬಿ ಟಾಕೀಸ್' ಚಿತ್ರದ ನಟನೆಗೆ ರಾಷ್ಟ್ರ ಪ್ರಶಸ್ತಿ ಕೂಡ ಸಿಕ್ಕಿದೆ. ಹಾಗಾಗಿ ಅವರು ನಮ್ಮ ಚಿತ್ರರಂಗದ ಮೇರು ನಟಿಯಾಗಿದ್ದಾರೆ. ನಟಿಯಾಗಿ ಅವರು ಯಶಸ್ವಿಯಾದ ನಂತರ ಅವರ ಆಸಕ್ತಿ ರಾಜಕೀಯ ಕ್ಷೇತ್ರದ ಕಡೆಗೆ ಹೊರಳಿತು. 2001ರಲ್ಲಿ ಅವರು ಮೊದಲ ಬಾರಿಗೆ ವಿಧಾನ ಪರಿಷತ್ತಿಗೆ ನೇಮಕವಾಗಿ 2001 ರಿಂದ 2007ರ ತನಕ ವಿಧಾನ ಪರಿಷತ್ತಿನ ಶಾಸಕರಾಗಿದ್ದರು. ಬಹುತೇಕ ಕಲಾವಿದರು ಈ ರೀತಿ ನೇಮಕವಾದಾಗ ತಮ್ಮ ರಾಜಕೀಯ ವೃತ್ತಿಯನ್ನು ಅಲ್ಲಿಗೇ ನಿಲ್ಲಿಸಿ ಬಿಡುತ್ತಾರೆ. ಆದರೆ ಡಾ: ಉಮಾಶ್ರೀಯವರು ಹಾಗಲ್ಲ, ರಾಜಕೀಯಕ್ಕೆ ಬಂದ ಮೇಲೆ ಜನಪರವಾದಂತಹ ಕೆಲಸ ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು, ತಮ್ಮನ್ನು ತಾವು ರಾಜಕೀಯ ಪಯಣದಲ್ಲಿ ತೊಡಗಿಸಿಕೊಂಡರು. 2007ರ ನಂತರ 2008ರಲ್ಲಿ ತೇರದಾಳ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿದರು, ದುರಾದೃಷ್ಟವಶಾತ್ ಆ ಚುನಾವಣೆಯಲ್ಲಿ ಅವರು ಸೋಲಬೇಕಾಯಿತು. ಆದರೂ ಕೂಡ ಅವರು ಧೃತಿಗೆಡಲಿಲ್ಲ. ಈಗಾಗಲೇ ಹೇಳಿದ ಹಾಗೆ ಕಲಾವಿದರಾಗಿ ಎಷ್ಟೋ ಜನ ನೇಮಕವಾದವರು, ರಾಜಕೀಯ ಜೀವನವನ್ನು ಅಲ್ಲಿಗೇ ಮುಗಿಸಿಕೊಂಡು ಬಿಡುತ್ತಾರೆ. ಅದರಲ್ಲೂ ಚುನಾವಣಾ ರಾಜಕೀಯದಂತಹ ಕಷ್ಟಕರವಾದಂತಹ ಫೀಲ್ಡ್‌ಗೆ ಅವರು ಬರುವುದು ಕಷ್ಟ. ಆದರೆ ಡಾ: ಉಮಾಶ್ರೀಯವರು ಚುನಾವಣಾ ರಾಜಕೀಯಕ್ಕೂ ಧುಮುಕಿದರು. ಚುನಾವಣಾ ರಾಜಕೀಯದಲ್ಲಿ ಮತ್ತೆ 2013ರಲ್ಲಿ ತೇರದಾಳ ಕ್ಷೇತ್ರದಿಂದ ಮತ್ತೊಮ್ಮೆ

ಅವರು ಗೆಲುವನ್ನು ಸಾಧಿಸಿ ಮೊದಲನೆ ಬಾರಿಗೆ ವಿಧಾನಸಭಾ ಶಾಸಕರಾಗುತ್ತಿದ್ದ ಹಾಗೆಯೇ ಶ್ರೀ ಸಿದ್ದರಾಮಯ್ಯನವರ ಕ್ಯಾಬಿನೆಟ್‌ನಲ್ಲಿ ಸಚಿವ ಸ್ಥಾನವನ್ನು ಕೂಡ ಪಡೆದುಕೊಂಡರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಾಗಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತಹ ಗುರುತರವಾದ ಇಲಾಖೆಯನ್ನು ಅವರು ನಿಭಾಯಿಸಿದರು. ಅಷ್ಟೇ ಅಲ್ಲ, ಅವರು ಆ ಇಲಾಖೆಯನ್ನು ಅತ್ಯುತ್ತಮವಾಗಿ ನಡೆಸಿದರೆಂದು, ಸಾಧನೆ ಮಾಡಿದ್ದಾರೆಂದು 2016ರಲ್ಲಿ ರಾಷ್ಟ್ರಪತಿಗಳಿಂದ ಇಲಾಖೆಯ ವತಿಯಿಂದ ಪ್ರಶಸ್ತಿಯನ್ನು ಸ್ವೀಕಾರ ಮಾಡಿದರು. ಒಬ್ಬ ಸಚಿವರಾಗಿ ಕೂಡ ಅವರು ಅತ್ಯುತ್ತಮವಾದ ಸಾಧನೆಯನ್ನು ಮಾಡಿದ್ದಾರೆ. ನಂತರ ಮತ್ತೆ ಅವರು ಚುನಾವಣೆಗೆ ನಿಂತು ಸೋತರು. ಈಗ 2023ರಲ್ಲಿ ಮತ್ತೆ ವಿಧಾನ ಪರಿಷತ್ತಿನ ಶಾಸಕರಾಗಿ ನಮ್ಮ ಜೊತೆ ಸದಸ್ಯರಾದರು. ವೈಯಕ್ತಿಕವಾಗಿ ಹೇಳಬೇಕೆಂದರೆ, ಬಹಳ ವಾತ್ಸಲ್ಯಮಯಿ ವ್ಯಕ್ತಿತ್ವ ಅವರದ್ದು. ಎಲ್ಲರನ್ನೂ ಕೂಡ ನಗುಮುಖದಿಂದ, ಪ್ರೀತಿಯಿಂದ ಮಾತನಾಡಿಸುತ್ತಾರೆ. ಇದುವರೆಗೂ ಅವರು ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡುವುದು ಅಥವಾ ಚರ್ಚೆಗಳಲ್ಲಿ ಬಿಟ್ಟರೆ ವೈಯಕ್ತಿಕವಾಗಿ ಯಾರ ಬಗ್ಗೆಯಾದರೂ ಕೋಪದಿಂದ ಮಾತನಾಡುವುದನ್ನು ನಾನು ನೋಡಿಯೇ ಇಲ್ಲ. ಅಂಥವರು ನಮ್ಮ ವಿಧಾನ ಪರಿಷತ್ತಿನಲ್ಲಿರುವುದು ನಮ್ಮೆಲ್ಲರಿಗೂ ಕೂಡ ಬಹಳ ಸಂತೋಷವಾದುದು. ಈಗಾಗಲೇ ಹೇಳಿದ ಹಾಗೆ ನಮ್ಮೆಲ್ಲರಿಗೂ ಕೂಡ ಅವರು ಸಹೋದರಿ ಸಮಾನರು. ಅವರು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದರೂ ಕೂಡ ತಮ್ಮ 54ನೇ ವಯಸ್ಸಿನಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಎಂ.ಎ., ಪದವಿಯನ್ನು ಕೂಡ ಪಡೆದುಕೊಂಡರು. ಹಾಗಾಗಿ ವಿದ್ಯಾರ್ಜನೆಗೆ, ಜ್ಞಾನಾರ್ಜನೆಗೆ ಯಾವುದೇ ವಯಸ್ಸಿನ ಮಿತಿ ಇಲ್ಲ ಎಂದು ತೋರಿಸಿಕೊಟ್ಟಂತಹ trailblazer ಮಹಿಳೆ ಅವರು. ಸಾಮಾನ್ಯವಾಗಿ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಸಾಧನೆ ಮಾಡಬೇಕಾದರೆ ಬಹಳ ಕಷ್ಟ ಪಡಬೇಕು ಹಲವಾರು ಸವಾಲುಗಳನ್ನು ಎದುರಿಸಬೇಕು. ಅದರಲ್ಲೂ ಡಾ: ಉಮಾಶ್ರೀಯವರು ಹಿಂದುಳಿದ ವರ್ಗಗಳ ಮಹಿಳೆಯಾಗಿ ಕಡುಬಡತನದ ಹಿನ್ನೆಲೆಯಿಂದ ಬಂದು, ಒಬ್ಬ ಏಕಾಂಗಿ ತಾಯಿಯಾಗಿ, ತಮ್ಮ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಇಟ್ಟುಕೊಂಡು, ವೈಯಕ್ತಿಕ ಜೀವನದಲ್ಲಿ ಬಹಳಷ್ಟು ಕಷ್ಟ ಕಾರ್ಪಣ್ಯಗಳನ್ನು ನೋಡಿದರೂ ಕೂಡ, ಅದನ್ನೆಲ್ಲಾ ಮೆಟ್ಟಿ ನಿಂತು, ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಒಬ್ಬ ಕಲಾವಿದೆಯಾಗಿ ಚಿತ್ರರಂಗದಲ್ಲೂ ಯಶಸ್ಸಯನ್ನು ಕಂಡರು, ರಾಜಕಾರಣಿಯಾಗಿ ಕೂಡ ಯಶಸ್ಸನ್ನು ಕಂಡಿದ್ದಾರೆ. ತಮ್ಮ ಎಲ್ಲಾ ಸಹೋದ್ಯೋಗಿಗಳ, ಜನರ ಪ್ರೀತಿಯನ್ನು ಪಡೆದುಕೊಂಡಿದ್ದಾರೆ. ಒಬ್ಬ ಮಹಿಳೆಯಲ್ಲಿ ಪ್ರತಿಭೆ, ಪರಿಶ್ರಮ ಮತ್ತು ಆತ್ಮವಿಶ್ವಾಸ ಇದ್ದರೆ ಏನನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ಡಾ: ಉಮಾಶ್ರೀಯವರು ಒಬ್ಬ ಮಾದರಿ ಮಹಿಳೆಯಾಗಿದ್ದಾರೆ. ಇಡೀ ದೇಶಕ್ಕೆ, ವಿಶ್ವಕ್ಕೆ ಅವರು ಸ್ಪೂರ್ತಿ ನೀಡುವಂತಹ ಮಹಿಳೆಯಾಗಿದ್ದಾರೆ. ಅಂತಹವರು ಇವತ್ತು ಉಪಸಭಾಪತಿ ಸ್ಥಾನವನ್ನು ಅಲಂಕರಿಸಿರುವುದು ನಮಗೆಲ್ಲರಿಗೂ ಬಹಳ ಸಂತೋಷವಾದಂತಹ ವಿಚಾರ. ಸಭಾಪತಿಗಳು ಇಲ್ಲದಿದ್ದ ಸಮಯದಲ್ಲಿ ಇವರು ಅವರ ಕರ್ತವ್ಯಗಳನ್ನು ನೆರವೇರಿಸಬೇಕಾಗುತ್ತದೆ. ಈಗಾಗಲೇ ಸಭಾಪತಿಯವರ ಕರ್ತವ್ಯ ಏನೆಂದು ಅವರಿಗೆ ಶುಭಾಶಯಗಳನ್ನು ತಿಳಿಸುವ ಸಮಯದಲ್ಲಿ ಎಲ್ಲಾ

ಸದಸ್ಯರೂ ಮಾತನಾಡಿದ್ದಾರೆ. ನೀವು ಕೂಡ ನಿಮ್ಮ ಕರ್ತವ್ಯಕ್ಕೆ ನ್ಯಾಯ ಒದಗಿಸುತ್ತೀರಿ, ಎಲ್ಲಾ ಸದಸ್ಯರನ್ನೂ ಕೂಡ ಸಮಾನ ರೀತಿಯಲ್ಲಿ ನೋಡುತ್ತೀರಿ, ಅದು ಒಂದು ನ್ಯಾಯಾಧೀಶರ ಪೀಠ ಇದ್ದ ಹಾಗೆ. ಹಾಗಾಗಿ ಯಾರು ನ್ಯಾಯದ ಮೊರೆಯಿಟ್ಟು ಬಂದಾಗ ಅದಕ್ಕೆ ನಿಷ್ಪಕ್ಷಪಾತವಾಗಿ ಕೆಲಸ ಮಾಡಿ ನ್ಯಾಯ ಒದಗಿಸಿಕೊಡುತ್ತೀರೆನ್ನುವ ನಂಬಿಕೆ ನಮಗಿದೆ. ಮತ್ತೊಮ್ಮೆ ಡಾ: ಉಮಾಶ್ರೀ ಅಂಥವರು ಈ ಪೀಠವನ್ನು ಅಲಂಕರಿಸಿರುವುದಕ್ಕೆ ಶುಭಾಶಯಗಳನ್ನು ತಿಳಿಸುತ್ತಾ ಹಾಗೂ ಇವರನ್ನು ಉಪಸಭಾಪತಿಗಳಾಗಿ ಆಯ್ಕೆ ಮಾಡಿದಂತಹ ನಮ್ಮ ಪಕ್ಷದ ವರಿಷ್ಠರಾದ ಶ್ರೀಮತಿ ಸೋನಿಯಾ ಗಾಂಧಿಯವರಿಗೆ, ಶ್ರೀ ರಾಹುಲ್ ಗಾಂಧಿಯವರಿಗೆ, ಎ.ಐ.ಸಿ.ಸಿ. ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ, ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರಿಗೂ, ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರಿಗೂ ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರೆಲ್ಲರಿಗೂ ಕೂಡ ನಾನು ಧನ್ಯವಾದಗಳನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು)

(735) 18-08-2026 11-20 KH/VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಮಾಶ್ರೀಯವರು ಈ ರಾಜ್ಯ ಕಂಡ ಅತ್ಯುತ್ತಮ ನಟಿ ಎಂದು ಹೆಸರು ಪಡೆದಂತಹವರು. ಅವರ ಬಗ್ಗೆ ಪ್ರತಿಯೊಬ್ಬ ಕನ್ನಡಿಗರಿಗೂ ಪರಿಚಯವಿದೆ. ನಾವು ಗುಣಗಾನ ಮಾಡುವಂತಹದ್ದು ಏನು ಉಳಿದಿಲ್ಲ. ಅವರ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಂಡಿರುವುದರಿಂದ, 3 ದಶಕಗಳ ಕಾಲ ರಾಜಕಾರಣದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು, ಜನರ ಸೇವೆಯನ್ನು ಮಾಡಿರುವಂತಹ ಡಾ॥ ಉಮಾಶ್ರೀಯವರು ನಮ್ಮ ಅಕ್ಕ. ಈಗ ನಮ್ಮ ಪಕ್ಕ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಹಾಗೆಂದು ಪದೇ ಪದೇ ಅವರನ್ನು ದಾರಿ ತಪ್ಪಿಸುವಂತಹ ಪ್ರಯತ್ನ ಮಾಡುವುದಕ್ಕೆ ಹೋಗಬೇಡಿ. ಅವರು ದಾರಿ ತಪ್ಪುವುದಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನೀವು ದಾರಿ ತಪ್ಪಿದರೂ ಅವರು ದಾರಿ ತಪ್ಪುವುದಿಲ್ಲ. ಅದಕ್ಕೆ ಅಕ್ಕ, ನಮ್ಮ ಪಕ್ಕ ಎಂದು ಹೇಳಿದೆ. ನಾವು ಮಹಿಳಾ ಮೀಸಲಾತಿಯ ಪರ. ಅದಕ್ಕೆ ನೀವು ಸಂಪುಟದಲ್ಲಿ ಸೇರಿಸಿಕೊಳ್ಳಲಿಲ್ಲ. ಇದು ಯಾವ ರೀತಿ ಇದೆಯೆಂದರೆ, ಮೊದಲನೇ ಬಹುಮಾನ ಇಲ್ಲ. ಎರಡನೇ ಬಹುಮಾನ ಇಲ್ಲ. ಕೊನೆಪಕ್ಷ ಮೂರನೇ ಬಹುಮಾನವೂ ಇಲ್ಲ. ಸಮಾಧಾನಕರವಾದ ಬಹುಮಾನ ಕೊಟ್ಟಿದ್ದೀರಲ್ಲವೇ? ಅದಕ್ಕೆ ಗೆಲುವು ನಮ್ಮದು. ಏಕೆಂದರೆ, ಅವರು ನಿಮ್ಮ ಕಡೆ ಇಲ್ಲ. ನಾವು ಈಗಾಗಲೇ ಅವರನ್ನು ತಂದು ನಮ್ಮ ಕಡೆ ಹಾಕಿಕೊಂಡಿದ್ದು ಆಯಿತು. ಅದರಿಂದಾಗಿ ಈಗ ಮಾನ್ಯ ಉಮಾಶ್ರೀ ಅಕ್ಕ ರವರು ಮೇಲಿನ ಸ್ಥಾನದಲ್ಲಿ ತಾವು ಇಲ್ಲದಿದ್ದಾಗ ಕುಳಿತು ಎಲ್ಲರಿಗೂ ನ್ಯಾಯ ಕೊಡಿಸುವಂತಹ

ಕೆಲಸ ಮಾಡಬೇಕಾಗಿದೆ. ಪ್ರಥಮವಾಗಿ ಅವರ ಈ ಆಯ್ಕೆಗೆ ನಾವು ಸಂಪೂರ್ಣವಾದ ಬೆಂಬಲವನ್ನು ಮತ್ತು ಗೌರವವನ್ನು ಕೊಟ್ಟಿದ್ದೇವೆ. ವಿಶೇಷವೇನೆಂದರೆ, ಅವರು ನಟನೆಯಲ್ಲಿ ಏನು ಕಡಿಮೆ ಇರಲಿಲ್ಲ. ಜನಮನ್ನಣೆ ಎಂದು ಅವರಿಗೆ ಕಡಿಮೆಯಾಗಿರಲಿಲ್ಲ. ಅವರು ಸಿನಿಮಾ ರಂಗದಲ್ಲಿಯೂ ಅತ್ಯುತ್ತಮವಾದ ಹೆಸರನ್ನು ಗಳಿಸಿದಂತಹ ಮಹಿಳೆ. ಆ ಸಂದರ್ಭದಲ್ಲಿಯೂ ಕೂಡ ರಾಜಕೀಯ ರಂಗಕ್ಕೆ ಪ್ರವೇಶ ಮಾಡಬೇಕೆಂದು ಅವರಿಗೆ ಯಾರು ಸಲಹೆ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆದರೆ, ಅಧಿಕಾರವಿಲ್ಲದ ಅಧಿಕಾರವನ್ನು ಕಳೆದುಕೊಂಡಿದ್ದ ದಿವಂಗತ ಬಂಗಾರಪ್ಪನವರು ಕರ್ನಾಟಕ ಕಾಂಗ್ರೆಸ್ ಪಕ್ಷ ಎಂದು ಕಟ್ಟಿದ್ದರು. ನಾವು ಆ ಕಾಲದಲ್ಲಿ ಕಾಂಗ್ರೆಸ್‌ನಲ್ಲಿ ಇದ್ದೆವು. ಕರ್ನಾಟಕ ಕಾಂಗ್ರೆಸ್ ಪಕ್ಷ (ಕೆ.ಸಿ.ಪಿ) ಎಂದು ಕಟ್ಟಿದ ಮೇಲೆ ನಾವೆಲ್ಲರೂ ಕೂಡ ಅವರ ಜೊತೆಯಲ್ಲಿ ಹೋದೆವು. 1993-94 ರಲ್ಲಿ ಮಾನ್ಯ ಉಮಾಶ್ರೀಯವರು ಅಲ್ಲಿ ಪ್ರತ್ಯಕ್ಷವಾದರು. ದಿವಂಗತ ಬಂಗಾರಪ್ಪನವರ ಜೊತೆಯಲ್ಲಿ ಬಂದು ನಾನು ರಾಜಕಾರಣಕ್ಕೆ ಪಾದಾರ್ಪಣೆ ಮಾಡಬೇಕೆಂದು ಬಂದರು. ಆಗ ನಾನು ಕೆಸಿಪಿ.,ಗೆ ಪ್ರಧಾನ ಕಾರ್ಯದರ್ಶಿಯಾಗಿದ್ದೆನು. ಆಗ ಬಂಗಾರಪ್ಪನವರು ನನಗೆ ಒಂದು ಮಾತನ್ನು ಹೇಳಿದರು. ನೋಡು, ಇವರು ಹೆಸರಾಂತ ಕಲಾವಿದೆಯಾಗಿದ್ದು, ಈಗ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ನಾವೆಲ್ಲರೂ ಕೂಡ ಅವರನ್ನು ಬೆಳೆಸಬೇಕು. ಅವರಿಗೆ ಶಕ್ತಿ ತುಂಬಬೇಕು. ಅವರು ಜನ-ಮನದಲ್ಲಿ ಇರುವಂತಹ ಒಬ್ಬ ಮಹಿಳೆಯಾಗಿದ್ದು, ಅವರಿಗೆ ನಾವು ಸಹಕಾರ ಕೊಡಬೇಕು. ವಿಶೇಷವಾಗಿ ನಿನಗೆ ಹೇಳುತ್ತೇನೆ. ಎಲ್ಲೇ ಸಭೆ-ಸಮಾರಂಭಗಳಿಗೆ ಹೋದರೂ ನೀವು ಅವರ ಜೊತೆಯಲ್ಲಿ ಇರಬೇಕು. ಏಕೆಂದರೆ, ನಟನೆ ಬೇರೆ. ಈ ರಾಜಕೀಯ ಬೇರೆ. ಎಲ್ಲಿಯೂ ಅಪ್ಪಿತಪ್ಪಿ ಮಾತಿನಲ್ಲಿ ವ್ಯತ್ಯಾಸ ಆಗಿಬಿಡಬಾರದು. ತಪ್ಪು ಮಾತನಾಡಿ ಬಿಡಬಾರದು. ಆ ಕಾರಣದಿಂದ ಇಂತಹವುಗಳನ್ನು ಅವರಿಗೆ ತಾವು ತಿದ್ದಿ ಹೇಳುವಂತಹದ್ದು ಮಾಡಬೇಕು ಎಂದು ಹೇಳಿದ್ದರು. ಸುಮಾರು ವರ್ಷಗಳ ಕಾಲ ನಾವು ಯಾವುದೇ ಸಭೆ-ಸಮಾರಂಭಗಳಿಗೆ ಹೋದರೆ ಜೊತೆಗೆ ಹೋಗುತ್ತಿದ್ದೆವು. ಹೀಗೆ ಆವತ್ತು ರಾಜಕೀಯ ಪ್ರವೇಶ ಮಾಡಿದವರು ಎಲ್ಲಿಯೂ ಕೂಡ ಎಡವಲಿಲ್ಲ. ಒಂದು ಉತ್ತಮವಾದ ಭಾಷಾ ಅನುಭವ ಇದ್ದು, ಯಾವುದೇ ಭೇದ-ಭಾವ ಇಲ್ಲದೇ ಎಲ್ಲರ ಜೊತೆಯಲ್ಲಿ ವಿಶ್ವಾಸದಿಂದ ಇವತ್ತು ಇಂತಹ ಮಟ್ಟಕ್ಕೆ ಏರಿದ್ದಾರೆ ಎಂದರೆ, ನಾವೆಲ್ಲರೂ ಕೂಡ ಒಂದು ರೀತಿಯಲ್ಲಿ ಸಂತೋಷಪಡುವಂತಹ ಸಂದರ್ಭ ಇದು. ಅನೇಕ ಮಾನ್ಯ ಸದಸ್ಯರುಗಳು ಮಾತನಾಡುವಂತಹ ಈ ಸಂದರ್ಭದಲ್ಲಿ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ತಮಗೆ ಭಗವಂತನು ಆಯಸ್ಸು, ಆರೋಗ್ಯ ಕೊಡಲಿ. ಇನ್ನಷ್ಟು ಎತ್ತರಕ್ಕೆ ಬೆಳೆಯುವಂತಹ ಮತ್ತು ಇನ್ನು ಜನರ ಸೇವೆಯನ್ನು ಮಾಡುವಂತಹ ಕಾರ್ಯವನ್ನು ಇನ್ನು ಹೆಚ್ಚಾಗಿ ಮಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇನ್ನು ಎತ್ತರಕ್ಕೆ ಬೆಳೆಯಲಿ ಎಂದರೆ ಅವರಿಗೆ ವಯಸ್ಸು ಆಗಿಹೋಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಇಲ್ಲಿ ಕುಳಿತಿರುವುದಕ್ಕಿಂತ ಎತ್ತರ ಯಾರು ಬೆಳೆಯುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅಧಿಕಾರದಲ್ಲಿ ಎತ್ತರ . . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಅಧಿಕಾರದಲ್ಲಿ ಎತ್ತರ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, . . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಆ ರೀತಿ ಬೆಳೆಯುವ ಆಗಿದ್ದರೆ ಎಲ್ಲರನ್ನೂ ಬಿಟ್ಟು ನೀನೇ ಬೆಳೆದು ಬಿಡುತ್ತಿದ್ದೆ. ಹಾಗೆ ಬೆಳೆಯುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಮಾನ್ಯ ಉಮಾಶ್ರೀಯವರು ಉಪ ಸಭಾಪತಿಗಳಾಗಿ ಬಂದಿದ್ದಾರೆ. ನನಗೆ ಬಹಳ ಖುಷಿಯಾಗಿದೆ. ಮಾನ್ಯ ಸಭಾಪತಿಯವರೇ ತಮ್ಮನ್ನು ಆ ಕಡೆಗೆ ಹಾಕಿಬಿಟ್ಟಿದ್ದಾರೆ. ಇಲ್ಲಿ ನೋಡಿ, ನಮ್ಮ ಅಕ್ಕನನ್ನು ನಮ್ಮ ಕಡೆಗೆ ಹಾಕಿಬಿಟ್ಟರು. ನಾನು ಹೊರಗಡೆ ಬರುವಾಗ ಮಾನ್ಯ ಉಮಾಶ್ರೀಯವರಿಗೆ ಹೇಳಿದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನನ್ನನ್ನು ಆ ಕಡೆಗೆ ಎಂದರೆ . . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಕಡೆಗೆ ಎಂದರೆ ಮೇಲಕ್ಕೆ ಎಂದು ಹೇಳಿದೆ. ನಾನು ಆಗಲೇ ಹೊರಗಡೆ ಬರುವಾಗ ಮಾನ್ಯ ಉಮಾಶ್ರೀಯವರಿಗೆ ಹೇಳಿದೆ. ಅರ್ಧ ಗಂಟೆಯಲ್ಲಿ ನಿಮ್ಮನ್ನು ಎತ್ತಿ ಹಾಕಿಕೊಂಡು ಹೋಗುತ್ತೇವೆ ಎಂದು ಹೇಳಿದೆ. ಅವರು ನನ್ನ ಅಕ್ಕ. ಯಾರು ತಪ್ಪಾಗಿ ತಿಳಿದುಕೊಳ್ಳಬಾರದು. ಅದಕ್ಕೆ ಹೇಗೆ ಎತ್ತಿಹಾಕಿಕೊಂಡು ಹೋಗುತ್ತೀರಿ ಎಂದು ಕೇಳಿದರು. ಅದಕ್ಕೆ ನೋಡುತ್ತೀರಿ ಹೇಗೆ ಎತ್ತಿ ಹಾಕಿಕೊಂಡು ಹೋಗುತ್ತೇವೆ ಎಂದು ಹೇಳಿದೆ. ಅವರನ್ನು ಕರೆದುಕೊಂಡು ಬಂದು ಇಲ್ಲಿ ಕೂರಿಸಿಕೊಂಡಿದ್ದೇವೆಯಲ್ಲವೇ ಅದಕ್ಕೆ ಹೇಳಿದೆ. ಆದ್ದರಿಂದ, ನಮ್ಮ ಅಕ್ಕನಿಗೆ ಖುಷಿಯಾಗಿದೆ. ನಮ್ಮ ಅಕ್ಕ ನಗುತ್ತಿದ್ದಾರೆ. ಇದೇ ರೀತಿ ಖುಷಿಯಾಗಿ ಸದನವನ್ನು ನಡೆಸಲಿ. ಶುಭವಾಗಲಿ. ಅವಕಾಶಕ್ಕಾಗಿ ಧನ್ಯವಾದಗಳು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತು ನಾವೆಲ್ಲಾ ತುಂಬಾ ಹತ್ತಿರದಿಂದ ಮಾನ್ಯ ಉಮಾಶ್ರೀಯವರನ್ನು ಸಿನಿಮಾ ರಂಗದಲ್ಲಿ ನೋಡಿದ್ದೇವೆ. ನಂತರದಲ್ಲಿ ಅವರು ಸಿನಿಮಾ ರಂಗದ ಜೊತೆ ಜೊತೆಯಲ್ಲಿಯೇ ರಾಜಕೀಯ ರಂಗಕ್ಕೆ ಬಂದಿರುವಂತಹದ್ದು ಆಗಿದೆ. ಇವತ್ತು ಕಾಂಗ್ರೆಸ್ ಪಕ್ಷ ಅವರನ್ನು ಗುರುತು ಮಾಡಿ, ಮಂತ್ರಿಯನ್ನಾಗಿ ಮಾಡಿರುವಂತಹ ದಿನಗಳು, ವಾಪಸ್ಸು ಈ ಸದನದಲ್ಲಿ ಈ ಮನೆಯಲ್ಲಿ ಅವರಿಗೆ ದೊಡ್ಡ ಜವಾಬ್ದಾರಿಯನ್ನು

ಕೊಟ್ಟಿರುವಂತಹದ್ದು. ಅವರು ಆ ಪಕ್ಷದಲ್ಲಿ ಮಾಡಿರುವಂತಹ ಸೇವೆ, ಆ ಪಕ್ಷದಲ್ಲಿ ಇಟ್ಟಿರುವಂತಹ ಹೆಜ್ಜೆ ಗುರುತುಗಳನ್ನು ನೋಡಿ ಇವತ್ತು ಉಪ ಸಭಾಪತಿ ಸ್ಥಾನವನ್ನು ಕೊಡಲಾಗಿದೆ. ಈ ಸ್ಥಾನವನ್ನು ಕೊಟ್ಟಿರುವಂತಹ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅವರ ಪಾದಾರ್ಪಣೆ ಸಾರ್ವತ್ರಿಕ ಜೀವನದಲ್ಲಿ ರಂಗಭೂಮಿಯಿಂದ ಪ್ರಾರಂಭವಾಗಿರುವಂತಹದ್ದು. ಇದನ್ನೆಲ್ಲಾ ನಾವೆಲ್ಲರೂ ಅತ್ಯಂತ ಹತ್ತಿರದಿಂದ ಅವರ ಸಿನಿಮಾಗಳನ್ನು ನೋಡಿ ಆನಂದಿಸಿದ್ದೇವೆ. ಪರಮಾನಂದಿಸಿದ್ದೇವೆ. ನಿಜ ಹೇಳಬೇಕೆಂದರೆ ಹೃದಯ ಅಂತರಾಳದಿಂದ ಈ ಮಾತನ್ನು ಹೇಳುತ್ತೇನೆ. ನೀವು ನಿಮ್ಮ ನಟನೆಯನ್ನು ಮಾಡುವಾಗ ಸಂಪೂರ್ಣವಾಗಿ ಯಾವ ರೀತಿ ಅದರಲ್ಲಿ involve ಆಗಿರುತ್ತೀರಿ ಎನ್ನುವುದನ್ನು ನೋಡಿದರೆ, ನಿಜವಾಗಿಯೂ ಕೂಡ ಆ ನಟನೆಗೆ ನಾವು ಕೂಡ involve ಆಗಬೇಕು. ನಮಗೆ ನಟನೆ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ involvement ಇರುವುದರಿಂದಲೇ ಇಷ್ಟೊಂದು ಜನ-ಮನ ಸೆಳೆಯುವುದಕ್ಕೆ ಸಾಧ್ಯವಾಯಿತು. ಮಾನ್ಯ ಸಭಾನಾಯಕರು ಜನ-ಮನ ಸೆಳೆಯುವಂತಹ ಸಂದರ್ಭದಲ್ಲಿ ಕಡು ಬಡತನದಿಂದ ಬಂದಂತಹವರು ಎನ್ನುವ ಮಾತನ್ನು ಹೇಳಿದರು. ಅದು ಸತ್ಯ. ಸಿರಿವಂತಿಕೆ, ಬಡತನ ಯಾರಿಗೂ ಶಾಶ್ವತವಲ್ಲ. ಅಧಿಕಾರ ಕೂಡ ಯಾರಿಗೂ ಶಾಶ್ವತವಲ್ಲ. ಅಂತಹ ಕುಟುಂಬದಿಂದ ಬಂದಂತಹ ಹೆಣ್ಣು ಮಗಳು, ಇವತ್ತು ಈ ರಾಜ್ಯದ ಮಂತ್ರಿಯಾಗಿ, ಈ ರಾಜ್ಯದಲ್ಲಿ ಇಂತಹ ಒಂದು ಸದನದಲ್ಲಿ ಉಪ ಸಭಾಪತಿಯಾಗಿ ಕೆಲಸ ಮಾಡುವಂತಹ ಒಂದು ಭಾಗ್ಯವನ್ನು ಆ ಭಗವಂತನು ಕರುಣಿಸಿ ಕೊಟ್ಟನಲ್ಲವೇ? ಅದು ಅವರ ಪ್ರಾಮಾಣಿಕತೆ, ದೃಢತೆಯ ಜೀವನವನ್ನು ಮಾಡಿರುವಂತಹ ಸಂಕಲ್ಪ ಇದೆಯಲ್ಲವೇ? ಆ ಸಂಕಲ್ಪಕ್ಕೆ ಕೊಟ್ಟಂತಹ ವರ ಎಂದು ನಾನಾದರೂ ಕೂಡ ಭಾವಿಸಿದ್ದೇನೆ.

(ಮುಂದು)

(736) 18.8.2026 11.30 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

ಡಾ: ಉಮಾಶ್ರೀಯವರ ಬಯೋಡೇಟಾ ಹೇಳುವುದಕ್ಕೆ ಹೋದರೆ ಹೆಚ್ಚು ಸಮಯ ಬೇಕಾಗುತ್ತದೆ. ಮಾನ್ಯ ಸಭಾಪತಿಯವರು ನನಗೆ ಮಾತನಾಡಲು 2 ನಿಮಿಷ ಮಾತ್ರ ಸಮಯ ಕೊಟ್ಟಿದ್ದಾರೆ.

**ಸಭಾಪತಿಯವರು:-** 2 ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ನಾನು ಯಾವಾಗ ನಿಮಗೆ ಹೇಳಿದೆ?

**ಶ್ರೀ ಎಸ್.ಎಲ್.ಭೋಜೇಗೌಡ:-** ನನಗೆ ಹೇಳಲಿಲ್ಲ, ಆದರೆ ಬೇರೆ ಸದಸ್ಯರಿಗೆ ಹೇಳಿದಾಗ ನಾವೂ ಕೂಡ ಅದನ್ನು ಅನುಸರಿಸಬೇಕಾಗುತ್ತದೆ.

**ಸಭಾಪತಿಯವರು:-** ನಿಮಗೆ ಸಮಯಪ್ರಜ್ಞೆ ಇದೆ ಎನ್ನುವುದು ನನಗೆ ಗೊತ್ತಿದೆ. ಅದು ಒಳ್ಳೆಯ ವಿಚಾರವಾಗಿದೆ. ಬೇರೆ ಸದಸ್ಯರಿಗೆ ನೀವು ಒಂದು ಸಂದೇಶ ಕೊಟ್ಟ ಹಾಗೆ ಆಯಿತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಡಾ: ಉಮಾಶ್ರೀಯವರ ಕುಟುಂಬದಲ್ಲಿ ಕಷ್ಟದ ಪರಿಸ್ಥಿತಿ ಇದ್ದರೂ ಒಬ್ಬ ಮಗಳನ್ನು ವೈದ್ಯರನ್ನಾಗಿ ಮಾಡಿದ್ದಾರೆ, ಒಬ್ಬ ಮಗನನ್ನು ಲಾಯರ್ ಆಗಿ ಮಾಡಿದ್ದಾರೆ. ಆ ಮೂಲಕ ಅವರು ಸಮಾಜದಲ್ಲಿ ಜವಾಬ್ದಾರಿಯುತವಾದ ಕೆಲಸ ನಿಭಾಯಿಸುವಂತಹ ಕಾರ್ಯ ಮಾಡಿದ್ದಾರೆ. ಅವರ ಪರಿಶ್ರಮಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಯಾವ ಹಿರಿಯರು, ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ ಮೇಲೆ, ಆ ಮಕ್ಕಳಿಗೆ, ತಂದೆ-ತಾಯಿಗಳು ಪಟ್ಟಂಥ ಪರಿಶ್ರಮ ಮತ್ತು ಕಷ್ಟದ ಅರಿವನ್ನು ಮಾಡಿಕೊಡುವುದಿಲ್ಲವೋ, ಆಗ ಅವರಿಂದ ಸಮಾಜಕ್ಕೆ ಉತ್ತಮ ಬೆಳಕು ನೀಡುವಂಥದ್ದಾಗಲಿ ಅಥವಾ ನಾಡಿಗೆ, ಮನೆಗೆ ಬೆಳಕು ನೀಡುವಂತಹ ಕಾರ್ಯ ಮಾಡಲು ಸಾಧ್ಯವಾಗುವುದಿಲ್ಲ. ಕಷ್ಟದ ಅರಿವನ್ನು ಮಾಡಿಕೊಡಬೇಕಾಗುತ್ತದೆ. ಡಾ: ಉಮಾಶ್ರೀಯವರು ಸುಮಾರು 450 ಚಲನಚಿತ್ರಗಳಲ್ಲಿ ನಟಿಸಿರುವುದು ಸಾಧಾರಣ ವಿಚಾರವಲ್ಲ. ಅವರು ಅಭಿನಯ ಮಾಡುವ ಸಂದರ್ಭದಲ್ಲಿ ಅನೇಕ ಎಡರು-ತೊಡರುಗಳನ್ನು ನೋಡಿದ್ದಾರೆ.

ಮಾನ್ಯ ಸಭಾಪತಿಗಳೆ, ಶ್ರೀ ಎನ್.ಎಸ್.ರಾವ್ ಜೋಡಿ ಎಂದರೆ ಅದು ಡಾ: ಉಮಾಶ್ರೀಯವರು; ಡಾ: ಉಮಾಶ್ರೀಯವರ ಜೋಡಿ ಎಂದರೆ ಅದು ಶ್ರೀ ಎನ್.ಎಸ್. ರಾವ್ ಅವರು ಎಂದು ಹೇಳುವ ಕಾಲವಿತ್ತು. ಇವರಿಬ್ಬರ ಕಾಲ್‌ಶೀಟ್ ತೆಗೆದುಕೊಂಡ ನಂತರವೇ ಹೀರೋ-ಹೀರೋಯಿನ್‌ಗಳ ಕಾಲ್‌ಶೀಟ್ ತೆಗೆದುಕೊಳ್ಳುತ್ತಿದ್ದರು. ಇವರಿಬ್ಬರ ಜೋಡಿ ಇದೆ ಎಂದರೆ, ಆ ಸಿನಿಮಾಗೆ ಒಂದು ಮಹತ್ವ ಇರುತ್ತಿತ್ತು, ಆ ಸಿನಿಮಾ ನೋಡುವುದಕ್ಕೆ ಹೆಚ್ಚು ಅಭಿಮಾನಿಗಳು ಸಹ ಬರುತ್ತಿದ್ದರು. ಶ್ರೀ ಎನ್.ಎಸ್.ರಾವ್‌ರವರು ತೀರಿ ಹೋದನಂತರ ಬಹಳ ಜನ, ಇನ್ನು ಡಾ: ಉಮಾಶ್ರೀಯವರಿಗೆ ಜೋಡಿಯೇ ಇಲ್ಲ ಎಂದು ಹೇಳಿದ್ದರು. ಅವರಿಗೆ ಮತ್ತೆ ಕಷ್ಟದ ಕಾಲ ಬರುತ್ತದೆ ಎಂದು ಹೇಳುವುಂಥದ್ದನ್ನು ನಾವು ಕೇಳಿದ್ದೇವೆ. ಶ್ರೀ ಎನ್.ಎಸ್.ರಾವ್ ಮತ್ತು ಡಾ: ಉಮಾಶ್ರೀಯವರು ಸಿನಿಮಾದಲ್ಲಿ ಇದ್ದಾರೆ, ಸ್ಕ್ರೀನ್ ಮೇಲೆ ಇದ್ದಾರೆ ಎಂದರೆ ನೋಡುವುದಕ್ಕೆ ನಮಗೆ ಖುಷಿ ಆಗುತ್ತಿತ್ತು. ಆ ನಂತರ, ಹಾಸ್ಯ ನಟರಾದ, ಶ್ರೀ ದೊಡ್ಡಣ್ಣ, ಶ್ರೀ ಉಮೇಶ್, ಶ್ರೀ ಧೀರೇಂದ್ರ ಗೋಪಾಲ್‌ರವರ ಜೊತೆಯಲ್ಲಿ ಅಭಿನಯ ಮಾಡುವ ಸಂದರ್ಭದಲ್ಲಿ ಡಾ: ಉಮಾಶ್ರೀಯವರೇ ನಮಗೆ ಮೊದಲು ಕಾಣುತ್ತಿದ್ದರು. ಒಂದು ಸಿನಿಮಾದಲ್ಲಿ ಶ್ರೀ ಧೀರೇಂದ್ರ ಗೋಪಾಲ್‌ರವರು ಡಾ: ಉಮಾಶ್ರೀಯವರನ್ನು, ಆ.. ನನ್ನ ಚಿನ್ನ, ಆ..ನನ್ನ ಬೆಳ್ಳಿ ಎಂದು ಹೇಳುತ್ತಾರೆ. ಆಗ ಡಾ:ಉಮಾಶ್ರೀಯವರು, ಏಯ್, ನೀನು ಚಿನ್ನ-ಬೆಳ್ಳಿ ಎಂದು ಬಾಯಿ ಮಾತಿನಲ್ಲಿ ಹೇಳುವುದನ್ನು ಬಿಡು; ನೀನು ನನ್ನನ್ನು ಹಾಗೆ ಕರೆಯಬೇಕಾದರೆ ಚಿನ್ನ ತಂದಿರಬೇಕು ಅಥವಾ ಬೆಳ್ಳಿ ತಂದಿರಬೇಕು ಎಂದು ಹೇಳುತ್ತಾರೆ. ಇದು ಬಹಳ ಸ್ವಾರಸ್ಯವಾಗಿದೆ.

ಇನ್ನೊಂದು ಸಿನಿಮಾದಲ್ಲಿ ಶ್ರೀ ದೊಡ್ಡಣ್ಣನವರು ಪೋಲೀಸ್ ಪೇದೆ ಆಗಿರುತ್ತಾರೆ. ಆ ಸಿನಿಮಾದಲ್ಲಿ ಡಾ: ಉಮಾಶ್ರೀಯವರು ಗರ್ಭಿಣಿಯಾಗಿ ನಟನೆ ಮಾಡಿದ್ದಾರೆ. ಶ್ರೀ ದೊಡ್ಡಣ್ಣನವರು ಡ್ಯೂಟಿಗೆ ಹೊರಟಾಗ, ಡಾ:ಉಮಾಶ್ರೀಯವರು, ಏಯ್ 840 ನಿಲ್ಲು ಎಂದು ಹೇಳುತ್ತಾರೆ. ಆಗ ಶ್ರೀ ದೊಡ್ಡಣ್ಣವರು, ನಾನು ಪೋಲೀಸ್ ಆಗಿದ್ದೇನೆ; ನನ್ನನ್ನೇ ನಿಲ್ಲು ಎಂದು ಹೇಳುತ್ತೀಯಾ ಎಂದು ಜೋರು ಮಾಡಿ ಕೇಳುತ್ತಾರೆ. ಶ್ರೀ ದೊಡ್ಡಣ್ಣವರು

ಪೋಲೀಸ್ ಆಗಿದ್ದರಿಂದ ಅವರ ನಂಬರ್ 840 ಆಗಿರುತ್ತದೆ. ಅವರು, ನನ್ನನ್ನೇ 840 ಎಂದು ಕರೆಯುತ್ತೀಯಾ, ಹೀಗೆ ನಮ್ಮ ಆಫೀಸರ್ ಕರೆದರೆ ಸರಿ. ಆದರೆ ನನ್ನನ್ನು 840 ಎಂದು ಕರೆಯುವುದು ಸರಿಯಲ್ಲ. ಹಾಗಾದರೆ ನೀನು 420, ಎಂದು ಡಾ: ಉಮಾಶ್ರೀಯವರಿಗೆ ಹೇಳುತ್ತಾರೆ. ನನ್ನನ್ನು ಏಕೆ 420 ಎಂದು ಕರೆದೆ ಎಂದು ಡಾ:ಉಮಾಶ್ರೀಯವರು ಕೇಳಿದಾಗ, ನೀನು ನನ್ನ ಅರ್ಧಾಂಗಿಯಲ್ಲವೇ ಅದಕ್ಕೆ ಹಾಗೆ ಕರೆದೆ ಎಂದು ಹೇಳುತ್ತಾರೆ. ನೀವು ಫುಲ್, ನಾನು ಅರ್ಧ ಎನ್ನುವುದಾದರೆ ನನ್ನ ಹೊಟ್ಟೆಯಲ್ಲಿರುವುದು 210 ಆಗುತ್ತದೆ ಎಂದು ಡಾ:ಉಮಾಶ್ರೀಯವರು ಹೇಳುತ್ತಾರೆ. ಅಲ್ಲದೇ, ಆ 210ಗೆ ಎರಡು ಕೆ.ಜಿ. ಹಲ್ವಾ ಬೇಕು ಎಂದು ಕೇಳುತ್ತಿದೆ ಎಂದು ಹೇಳುತ್ತಾರೆ. ಅದು ಗರ್ಭಿಣಿಯ ಬಯಕೆ ಆಗಿರುತ್ತದೆ. ಇಂತಹ ಒಂದು ಹಾಸ್ಯ ದೃಶ್ಯಗಳು ಇಂದೂ ಕೂಡ ನೆನಪಿಗೆ ಬರುತ್ತವೆ. ಈ ರೀತಿಯ ಅಭಿನಯ ಡಾ: ಉಮಾಶ್ರೀಯವರಿಗೆ ಇನ್‌ಬಿಲ್ಟ್ ಆಗಿ ಬಂದಿದೆ. 2 ಕೆ.ಜಿ.ಹಲ್ವಾ ತಂದು ಕೊಡುವವರೆಗೂ ಡಾ: ಉಮಾಶ್ರೀಯವರು ಶ್ರೀ ದೊಡ್ಡಣ್ಣನವರನ್ನು ಬಿಡುವುದಿಲ್ಲ. ಊರಿನಲ್ಲೆಲ್ಲಾ ಒಂದು ಸೀನ್ ಕ್ರಿಯೇಟ್ ಮಾಡಿ, ಅಕ್ಕಪಕ್ಕದ ಮನೆಯವರನ್ನು ಮತ್ತು ಊರಿನವರೆಲ್ಲರನ್ನೂ ಕರೆದು ಬಿಡುತ್ತಾರೆ, ದೊಡ್ಡ ಗಲಾಟೆ ಆಗುತ್ತದೆ. ನಿನ್ನ ಹೆಂಡತಿಯ ಬಯಕೆಯಂತೆ 2 ಕೆ.ಜಿ. ಹಲ್ವಾ ತಂದು ಕೊಡುವ ಯೋಗ್ಯತೆ ಇಲ್ಲದಿರುವ ನೀನು ಎಂತಹ ಗಂಡ ಎಂದು ಜನ ಕೇಳುತ್ತಾರೆ. " *ಅವಳಿಲ್ಲದೇ ಹಗಲಿಲ್ಲ, ಇರುಳಿಲ್ಲ, ಸೂರ್ಯ ಚಂದ್ರ ತಾರೆ ಇಲ್ಲ, ಸುಳಿಗಾಳಿ ಇಲ್ಲ, ಹೂಗಂಪು ಇಲ್ಲ, ಎದೆ ಏಕೋ ತಳಮಳಕೆ ಎಡೆಯಾಯಿತಲ್ಲ, ಹೋಗು ಮನಸೇ ಹೋಗು / ಅವಳಿದ್ದರೆ ಹೂವುಂಟು ಹಸಿರುಂಟು ಪ್ರೇಮ ಸುಧೆಯ ಕಾವ್ಯವುಂಟು, ಈ ಮನೆಯೆಲ್ಲಾ ನಂದನದ ವನವಾಗುವುದುಂಟು* "ಎನ್ನುವ ಒಂದು ರಚನೆ ಇದೆ. ಈ ಮನೆಯನ್ನೂ ಕೂಡ ನಂದನವನವನ್ನಾಗಿ ಮಾಡಬೇಕು, ಇದರ ಜೊತೆಗೆ ಈ ಮನೆಯಲ್ಲಿ ಎಲ್ಲರೂ ನಗು ನಗುತ್ತಾ ಇರುವ ಹಾಗೆ ಮಾಡಬೇಕು. ಈ ಮನೆಯ ಎಲ್ಲಾ ಮಕ್ಕಳನ್ನು, ಎಲ್ಲಾ ಸದಸ್ಯರನ್ನು ಒಂದುಗೂಡಿಸಿ ತೆಗೆದುಕೊಂಡು ಹೋಗುವಂತಹ ಸರ್ವಶಕ್ತಿ ನಿಮ್ಮಲ್ಲಿದೆ. ಉತ್ತಮವಾದ ಕಾರ್ಯ, ಸಮಾಜದ ಕಾರ್ಯ ನಿಮ್ಮಿಂದ ಆಗಲಿ, ಆ ಭಗವಂತ ನಿಮಗೆ ಆಯುರಾರೋಗ್ಯ ಐಶ್ವರ್ಯವನ್ನು ಕೊಟ್ಟು, ಇನ್ನೂ ಉತ್ತಮವಾದ ಅಧಿಕಾರವನ್ನು ಕೊಡಲಿ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಅಧಿಕಾರದ ದೃಷ್ಟಿಯಿಂದ ಎತ್ತರಕ್ಕೆ ಬೆಳೆಯಿರಿ ಎಂದು ಆಶಿಸಿ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಮಾತನಾಡುತ್ತಾರೆ. ಮಾನ್ಯ ಸದಸ್ಯರೇ, ಇನ್ನು 15 ಜನ ಜನ ಸದಸ್ಯರು ಮಾತನಾಡುವವರಿದ್ದಾರೆ. ನನ್ನ ಕೈಯಿಂದ ಬೆಲ್ ಹೊಡೆಸಿಕೊಳ್ಳುವ ಕೆಲಸ ಮಾಡುವುದಕ್ಕೆ ಹೋಗಬೇಡಿ. 2-3 ನಿಮಿಷದ ಒಳಗೆ ಮಾತನಾಡಿ ಮುಗಿಸಿ. ಇತರ ಸದಸ್ಯರೂ ಕೂಡ ಅವರ ಭಾವನೆಗಳನ್ನು ಹೇಳಬೇಕಿದೆ. ಸಮಯ ಪ್ರಜ್ಞೆ ಇರಲಿ. ನಾನು 12.20 ಗಂಟೆಗೆ ಪ್ರಶ್ನೋತ್ತರವನ್ನು ಪ್ರಾರಂಭ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಸಭಾಪತಿ ಕೆಲಸದಲ್ಲಿ ಬೆಲ್ ಹೊಡೆಯವುದು ದೊಡ್ಡ ಕೆಲಸವಾಗಿರುತ್ತದೆ.

**ಸಭಾಪತಿಯವರು:-** ನೀವು ನನ್ನ ಕೈಯನ್ನೇ ನೋಡುತ್ತಿರಬೇಕು. ನನ್ನ ಕೈ ಬೆಲ್ ಹತ್ತಿರ ಹೋದ ತಕ್ಷಣ ನಿಮ್ಮ ಮಾತುಗಳನ್ನು ಮುಗಿಸಬೇಕು.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಡಾ: ಉಮಾಶ್ರೀಯವರು ಉಪ ಸಭಾಪತಿಗಳಾಗಿ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ಅವರ ಬಗ್ಗೆ ಕೆಲವು ಮಾತುಗಳನ್ನು ಹೇಳಿ, ಅವರಿಗೆ ಶುಭ ಕೋರಲು ನಾನು ನಿಂತಿದ್ದೇನೆ. ಡಾ: ಉಮಾಶ್ರೀಯವರು ಇಲ್ಲಿ ಸೀಟ್ ನಂಬರ್ 22ರಲ್ಲಿ ಕುಳಿತುಕೊಳ್ಳುತ್ತಿದ್ದರು. ನಾನು ಸೀಟ್ ನಂಬರ್ 24ರಲ್ಲಿ ಕುಳಿತುಕೊಳ್ಳುತ್ತಿದ್ದೇನೆ. ಮಧ್ಯದಲ್ಲಿ ಮಾನ್ಯ ಅಬ್ದುಲ್ ಜಬ್ಬಾರ್‌ರವರು ಕುಳಿತುಕೊಳ್ಳುತ್ತಾರೆ. ಪ್ರತಿ ಸಂದರ್ಭದಲ್ಲಿ ಭಾಷಣ ಮಾಡುವಾಗ ಅಥವಾ ಯಾವುದೇ ವಿಚಾರಗಳು ಈ ಸದನದಲ್ಲಿ ಚರ್ಚೆಯಾದರೆ, ಅಲ್ಲಿಂದ ಇಲ್ಲಿಗೆ, ಮಧ್ಯದ ಸೀಟ್‌ಅನ್ನು ಬೈಪಾಸ್ ಮಾಡಿ, ಡಿಸೋಜಾರವರೇ, ಅದನ್ನು ಹೀಗೆ ಹೇಳಿದರೆ ಹೇಗೆ? ಒಂದು ಅಂಶ ಬಿಟ್ಟು ಹೋಯಿತು, ಅದನ್ನು ಸರಿ ಮಾಡಲಿಲ್ಲವಲ್ಲ, ಅವರು ಮಾತನಾಡಿದ್ದು ನ್ಯಾಯಯುತವಲ್ಲ ಅಲ್ಲವೇ? ನಾನು ಅದರ ಬಗ್ಗೆ ಮಾತನಾಡಲೇ, ಇದಕ್ಕೆ ನೀವೇನು ಹೇಳುತ್ತೀರಿ ಎಂದು ನನ್ನ ಹತ್ತಿರ ಸಲಹೆಗಳನ್ನು ಕೆಳುತ್ತಿದ್ದರು. ನಾನೂ ಕೂಡ ಅದೇರೀತಿ ಅವರ ಬಳಿ ಸಲಹೆಗಳನ್ನು ಕೇಳುತ್ತಿದ್ದೆ. ಮೊದಲನೆಯದಾಗಿ, ನಾನು ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂದು ಹೇಳಬಯಸುತ್ತೇನೆ. ಸೀಟ್ ನಂಬರ್ 22ರಲ್ಲಿ ಇದ್ದವರು ಮಿಸ್ ಆದರು.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಅವರು ವಿದೇಶಕ್ಕೆ ಹೋಗಿಲ್ಲ; ಇಲ್ಲೇ ಇದ್ದಾರೆ.

**ಶ್ರೀ ಐವನ್ ಡಿ'ಸೋಜಾ :-** ಮಾನ್ಯ ಸಭಾಪತಿಗಳೆ, ನೀವು ಅವಕಾಶ ಕೊಟ್ಟರೆ ಮಾತ್ರ ಅವರು ಪೀಠದ ಮೇಲೆ ಕುಳಿತುಕೊಳ್ಳುತ್ತಾರೆ ಅಷ್ಟೆ. ಮಾನ್ಯ ಸಭಾಪತಿಗಳೆ, ಅವರು ಜೀವನವನ್ನು ನಡೆಸಿಕೊಂಡ ಬಂದ ರೀತಿಯನ್ನು ನೋಡಿದರೆ, ನಾವು ಬಹಳಷ್ಟು ಸಲ ಹೇಳುವ ಹಾಗೆ, if you know the history, you can create a history. ನಡೆದುಕೊಂಡು ಬಂದ ದಾರಿ ಗೊತ್ತಿದ್ದರೆ, ಇನ್ನೊಂದು ದಾರಿಯನ್ನು ಹುಡುಕ ಬಹುದು, ಸೃಷ್ಟಿಸಬಹುದು. ಡಾ: ಉಮಾಶ್ರೀಯವರು ಕಷ್ಟದ ದಾರಿಯಲ್ಲಿ ಬಂದಂಥವರು. ಸುಗಮವಾದ ದಾರಿಯಲ್ಲಿ ಹೋಗುವುದಕ್ಕೆ ಏನೆಲ್ಲಾ ಸಾಧನೆಗಳು ಬೇಕೋ ಅವುಗಳನ್ನು ಅವರು ಬದ್ಧತೆ ಮೂಲಕ ಮಾಡಿದ್ದಾರೆ. ಮಾನ್ಯ ಸಭಾನಾಯಕರು ಮಾತನಾಡುತ್ತಾ, ಡಾ: ಉಮಾಶ್ರೀಯವರು ತಮ್ಮ involvement, commitment ಮತ್ತು ಅವರು ಕೊಟ್ಟಂಥ ಸಮಯದ ಮೂಲಕ ಇಷ್ಟು ಎತ್ತರಕ್ಕೆ ಬೆಳೆಯುವುದಕ್ಕೆ ಸಾಧ್ಯವಾಯಿತು ಎನ್ನುವ ಮಾತನ್ನು ಹೇಳಿದರು. ನಾನು ಅದನ್ನು ಅನುಮೋದಿಸುತ್ತೇನೆ. ಅವರ ದಾರಿ ಸುಗಮವಾಗಿರಲಿಲ್ಲ; ಕಷ್ಟದ ದಾರಿಯಾಗಿತ್ತು. ಆ ದಾರಿಯಲ್ಲಿ, ತಮ್ಮ ಬದ್ಧತೆ, involvement ತೋರಿಸಿ, ಅವರು ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ. 30 ವರ್ಷಗಳ ಕಾಲ ರಾಜಕೀಯ. 45 ವರ್ಷಗಳ ಕಾಲ ಸಾಂಸ್ಕೃತಿಕ ರಂಗ. ಈ 30 ವರ್ಷಗಳ ರಾಜಕೀಯ ಜೀವನದಲ್ಲಿ

ಎಂ.ಎಲ್.ಎ. ಚುನಾವಣೆಗೆ ನಿಂತು ಗೆದ್ದರು; ಮಂತ್ರಿಯಾದರು. ಈ ಸದನಕ್ಕೆ ಎರಡು ಬಾರಿ ಸದಸ್ಯರಾಗಿ ಬಂದರು. ಈಗ ಈ ಸದನದ ಉಪ ಸಭಾಪತಿಗಳಾಗಿ ಆಯ್ಕೆಯಾಗಿದ್ದಾರೆ. ಅದರ ಅರ್ಥ, ಅವರು ಪಟ್ಟಿರುವ ಶ್ರಮ ಮತ್ತು ಅವರ ಬದ್ಧತೆಯ ಕಾರಣ ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ, ಅವರಿಗೆ ಶುಭ ಕೋರುತ್ತೇನೆ.

(ಮುಂದು)

(737) 18-8-2026 11.40 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):**

ಅವರಿಗೆ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳು ಬಂದಿವೆ. ಅವರು ಸುಮಾರು 5 ಭಾಷೆಗಳಲ್ಲಿ ಸಿನಿಮಾದಲ್ಲಿ ನಟನೆ ಮಾಡಿದ್ದಾರೆ. ಅದರಲ್ಲಿ ನಮಗೆ ಸಂತೋಷ ಇದೆ. ನಮ್ಮ ಕರಾವಳಿ ಭಾಷೆಯ ಕೊಂಕಣಿ, ತುಳು ಭಾಷೆಯಲ್ಲಿ ನಟನೆ ಮಾಡಿದ್ದಾರೆ. ಅವರು ತುಳು ಭಾಷೆಯನ್ನು ಎತ್ತರಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ಹಾಗಾಗಿ ನಮ್ಮ ಕರಾವಳಿ ಭಾಗದ ಪರವಾಗಿ, ಕೊಂಕಣಿ ಮಾತನಾಡುವವರ ಪರವಾಗಿ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಒಂದು ಮಾತನ್ನು ನೆನಪಿಡಬೇಕು. ರಾಜಕೀಯ ನಿಂತ ನೀರು ಅಲ್ಲ, ಇದು ಹರಿಯುವ ನೀರು. ಅವರ ಜೀವನದಲ್ಲಿ ಸಾಂಸ್ಕೃತಿಕವಾಗಿ ಯಾವ ಮೂಲದಿಂದ ಈ ಎತ್ತರದ ಸ್ಥಾನಕ್ಕೆ ಬಂದಿದ್ದಾರೆಯೋ, 45 ವರ್ಷಗಳಿಂದ ಈ ಸಾಂಸ್ಕೃತಿಕ ಸೇವೆಯನ್ನು ಮಾಡಿ ರಂಗಭೂಮಿಯಲ್ಲಿ ನಾಟಕಗಳನ್ನು ಮಾಡಿ, ಕಿರು ನಾಟಕಗಳನ್ನು ಮಾಡಿ ಎತ್ತರಕ್ಕೆ ಬೆಳೆದಿದ್ದಾರೆಯೋ ಅದಕ್ಕೂ ನ್ಯಾಯ ಕೊಡಿ ಎಂದು ನಾನು ಹೇಳಬಯಸುತ್ತಿದ್ದೇನೆ. The fans of Karnataka, ಆರೂವರೆ ಕೋಟಿ ಜನರಿಗೂ ಡಾ॥ ಉಮಾಶ್ರೀ ಯಾರು ಎನ್ನುವ ಮಟ್ಟಕ್ಕೆ ಅವರು ಬೆಳೆಯಬೇಕಾದರೆ ಅವರ ಮೂಲ ಪರಿಶ್ರಮದ ಕೆಲಸ ಏನಿತ್ತು ಅದರ ಮೂಲಕ ಬೆಳೆಯುವುದಕ್ಕೆ ಸಾಧ್ಯವಾಯಿತು. ಅವರಿಗೆ ಅಂತರರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದಾಗಲೂ ನಾನು ಇದೇ ವೇದಿಕೆಯಲ್ಲಿ ಹೇಳಿದ್ದೆ. ಹಾಗಾಗಿ ಆ ರಂಗಕ್ಕೆ ಮತ್ತಷ್ಟು ನ್ಯಾಯ ಕೊಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಅವರು ಉಪ ಸಭಾಪತಿಗಳಾಗಿ ಮೇಲೆ ಕುಳಿತುಕೊಳ್ಳುವ ಸಂದರ್ಭದಲ್ಲಿ ಎಲ್ಲರಿಗೂ ನ್ಯಾಯ ಕೊಡಬೇಕಾಗುತ್ತದೆ. ಇವತ್ತು ಮೇಡಮ್‌ನವರು Treasury Bench ನಿಂದ ವಿರೋಧ ಪಕ್ಷದ ಬೆಂಚ್ ಕಡೆಗೆ ಹೋದರು ಎಂದು ಹೇಳಿದರು. ಅವರು ಎಲ್ಲಿಯೇ ಇರಲಿ, ನ್ಯಾಯ ಕೊಡುವುದಕ್ಕೆ ಬದ್ಧತೆ ಇರಬೇಕು. ಈಗಾಗಲೇ ಮಾನ್ಯ ಭೋಜೇಗೌಡರವರು, ನೀವು ಬೆಳೆದಿರುವುದು ಮಾತ್ರವಲ್ಲ, ನಿಮ್ಮ ಕುಟುಂಬವನ್ನು ಬೆಳೆಸಿದ್ದೀರಿ ಎಂದು ಉಲ್ಲೇಖ ಮಾಡುತ್ತಿದ್ದರು. We are all your family members. ಸಭಾಪತಿಯವರು ಮತ್ತು ಉಪ ಸಭಾಪತಿಯವರು ನಮ್ಮನ್ನು ರಕ್ಷಣೆ ಮಾಡುವಂಥವರು. ನಮ್ಮನ್ನು ಒಳ್ಳೆಯ ದಾರಿಗೆ ಕೊಂಡೊಯ್ಯುವಂಥವರು, ಬೆಲ್ ಹೊಡೆದು ನಮ್ಮನ್ನು ಕುಳಿತುಕೊಳ್ಳಿ ಎಂದು ಹೇಳತಕ್ಕಂಥವರು, ನಮಗೆ ಬುದ್ಧಿ ಹೇಳತಕ್ಕಂಥವರು. ನಮ್ಮಲ್ಲಿ 48 ವರ್ಷಗಳ ಅನುಭವ ಇರುವಂತಹ ಶಾಸಕರಾದ ಮಾನ್ಯ ಬಸವರಾಜ ಹೊರಟ್ಟಿಯವರು ನಮ್ಮ ಜೊತೆಯಲ್ಲಿ ಇದ್ದಾರೆ. ಅಂದರೆ, ಎಲ್ಲರನ್ನು ಎಲ್ಲಾ ಅನುಭವದ ಮೇಲೆ ಕೊಂಡೊಯ್ಯುವಂಥದ್ದು. ಅವರ ಅನುಭವ, ಅವರ ಸಲಹೆ

ನಮಗೆ ಇರಲಿ ಎಂದು ಹೇಳಿ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ. ಅವರಿಗೆ ಸಮಯವಿದ್ದಾಗೆಲ್ಲಾ ಒಮ್ಮೆ 22ನೇ ಸೀಟಿಗೆ ಬಂದು ನಮ್ಮನ್ನು ನೋಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶುಭವಾಗಲಿ, all the best.

**ಸಭಾಪತಿಯವರು:-** ಮಾನ್ಯ ಶರವಣರವರು ತುರ್ತಾಗಿ ಸಭೆಗೆ ಹೋಗಬೇಕಾಗಿರುವುದರಿಂದ ಅವರು ಈಗ ಮಾತನಾಡುತ್ತಾರೆ.

**ಶ್ರೀ ಶರವಣ ಟಿ.ಎ.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಉಮಾಶ್ರೀ ಅಕ್ಕರವರು 29ನೇ ಉಪ ಸಭಾಪತಿಯಾಗಿ ಆಯ್ಕೆಯಾಗಿರುವಂಥ ಈ ಶುಭ ಸಂದರ್ಭದಲ್ಲಿ ಅವರಿಗೆ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಚಿಂತಕರ ಛಾವಡಿ, ಹಿರಿಯರ ಮನೆ ಎಂದು ಏನು ಕರೆಯುತ್ತೇವೆ, ಅದರಲ್ಲಿ ಸಭಾಪತಿಗಳ ಸ್ಥಾನವನ್ನು ಅಲಂಕರಿಸುವಂತಹ ಈ ಒಂದು ಸಂದರ್ಭದಲ್ಲಿ ತಾವು ಈ ಪೀಠವನ್ನು ಅಲಂಕರಿಸಿದ್ದೀರಿ. ಅದೇ ತರಹ ಉಮಾಶ್ರೀ ಅಕ್ಕರವರು ರಾಜ್ಯದ ಮಹಿಳಾ ಕೋಟಾದಲ್ಲಿ ಸಚಿವರಾಗುತ್ತಾರೆಂದು ನಾವೆಲ್ಲಾ ಬಯಸಿದ್ದೆವು. ಆಗಲೇ ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಹಾಗೆ, first option, second option ಆಗಿ, 3ನೇ option ಸಮಾಧಾನಕರ ಬಹುಮಾನ ಎಂದು ಹೇಳಿದರು. ಅದು ಮೂರನೇ ಬಹುಮಾನ ಎಂದು ಹೇಳಬಹುದು. ಸಮಾಧಾನಕರ ಬಹುಮಾನ ಬರುವುದಿಲ್ಲ. ಇವತ್ತು ನಾವೆಲ್ಲಾ ಮಹಿಳಾ ಕೋಟಾದಲ್ಲಿ ಮಹಿಳೆಯರಿಗೆ ಆದ್ಯತೆ ಕೊಡುತ್ತಾರೆ ಎಂದು ಅದು ಮೇಲ್ಮನೆ ಇರಬಹುದು, ಕೆಳಮನೆ ಇರಬಹುದು, ನಾವು ತುಂಬಾ ಕಾತುರದಿಂದ ಕಾಯುತ್ತಿದ್ದೆವು. ಅದಕ್ಕೆ ಅವಕಾಶ ಸಿಕ್ಕಿಲ್ಲ. ಮುಂದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತೇವೆ ಎಂದು ಹೇಳಿದ್ದಾರೆ, ಇರಲಿ. ನಾವು ಉಮಾಶ್ರೀ ಅಕ್ಕರವರನ್ನು ಆ ಸ್ಥಾನದಲ್ಲಿ ನೋಡಬೇಕೆಂದು ಆಸೆ ಇತ್ತು. ಇವತ್ತು ಕೊನೆ ಪಕ್ಷ ನಮ್ಮ ಕಡೆ ಅವರನ್ನು ಕರೆದುಕೊಂಡು ಬಂದು ಕೂರಿಸಿದ್ದಾರೆ. ಅವರಿಗೆ ಮೂರು ದಶಕಗಳ ಕಾಲದಿಂದ ರಾಜಕೀಯದಲ್ಲಿ ಸಕ್ರಿಯವಾಗಿ ಕೆಳಮನೆ ಶಾಸಕರಾಗಿ, ಮೇಲ್ಮನೆಯಲ್ಲಿ ಎರಡನೇ ಬಾರಿ ಶಾಸಕರಾಗಿ, ಸಚಿವರಾಗಿ, ಈ ರಾಜ್ಯದ ಹಲವಾರು ಮಹಿಳೆಯರ ಬಗ್ಗೆ ಚಿಂತನೆ ಇಟ್ಟುಕೊಂಡು ಸಾಕಷ್ಟು ಚರ್ಚೆಗಳಲ್ಲಿ ಅವರು ಕೂಡ ಭಾಗವಹಿಸಿ ನ್ಯಾಯ ಕೊಡಿಸುವಂತಹ ಕೆಲಸವನ್ನು ಸುದೀರ್ಘವಾಗಿ ಮಾಡಿದ್ದಾರೆ. ಅವರಿಗೆ ಭಗವಂತ ಇನ್ನಷ್ಟು ಶಕ್ತಿಯನ್ನು ಕೊಡಲಿ. ಇಡೀ ನಮ್ಮ ಸದನಕ್ಕೆ ಒಂದು ದಾರಿ ದೀಪವಾಗಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸ ಮಾಡಲಿ. ಆ ಕಡೆ ಇರಬಹುದು, ಈ ಕಡೆ ಇರಬಹುದು, ಎಲ್ಲರನ್ನು ಸಮಾನವಾಗಿ ನೋಡುವಂತಹ ಕೆಲಸ ಆಗಲಿ. ವಿರೋಧ ಪಕ್ಷಗಳಿಗೆ ಯಾವಾಗಲೂ ನಾವು ಸಂವಿಧಾನದ ಜೀವಾಳ ಎಂದು ಕರೆಯುತ್ತೇವೆ. ಆ ಸಂವಿಧಾನದ ಜೀವಾಳ ವಿರೋಧ ಪಕ್ಷಕ್ಕೆ ಹೆಚ್ಚೆಚ್ಚು ಅವಕಾಶ ಕೊಟ್ಟು ಈ ಸದನಕ್ಕೆ ಇನ್ನು ಹೆಚ್ಚಿನ ಮೆರುಗನ್ನು ತಂದು ಕೊಡುವಂತಹ ಕೆಲಸವನ್ನು ಅವರ ಅವಧಿಯಲ್ಲಿ ಆಗಲಿ ಎಂದು ಹೇಳಿ ನಾನು ಮತ್ತೊಮ್ಮೆ ಅವರಿಗೆ ಅಭಿನಂದಿಸುತ್ತೇನೆ.

ಈ ಚಿತ್ರರಂಗದಲ್ಲೂ ಕೂಡ ಹಲವಾರು ಸಾಧನೆಗಳನ್ನು ಅವರು ಮಾಡಿದ್ದಾರೆ. ಬಹಳ ವರ್ಷಗಳಿಂದ ಒಂದು ಇತಿಹಾಸವನ್ನೇ ಸೃಷ್ಟಿ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅವರು ಹಿಂದಿನ ಮುಖ್ಯಮಂತ್ರಿಯಾಗಿದ್ದಂತಹ ಸನ್ಮಾನ್ಯ ಸಿದ್ದರಾಮಯ್ಯ ಸಾಹೇಬರನ್ನು ಮತ್ತು ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಅವರ ನಾಟಕ ಪ್ರದರ್ಶನವನ್ನು ತೋರಿಸಿದರು. ಅವತ್ತಿನ ದಿನ ನಾವು ಬಹಳ ಖುಷಿಪಟ್ಟೆವು. ಅವರಿಗೆ ಯಾವುದೇ ಪಾತ್ರ ಕೊಟ್ಟರೂ ಕೂಡ ಆ ಅಭಿಯನಯಕ್ಕೆ ಜೀವ ತುಂಬುವ ಕೆಲಸವನ್ನು ಅವರು ಮಾಡುತ್ತಾರೆ ಎನ್ನುವುದು ನಮಗೆಲ್ಲಾ ಗೊತ್ತಿರುವಂತಹ ವಿಚಾರವಾಗಿದೆ. ಅದೇ ಪಾತ್ರವನ್ನು ಇವತ್ತು ಉಪ ಸಭಾಪತಿಯಾಗಿ ನಿಭಾಯಿಸುತ್ತಿದ್ದಾರೆ. ಅವರು ಉಪ ಸಭಾಪತಿಗಳಾಗಿ ಹೆಚ್ಚೆಚ್ಚು ನಮಗೆಲ್ಲರಿಗೂ ಒಳ್ಳೆಯ ಕೆಲಸ ಮಾಡುವಂತಹ ಅವಕಾಶ, ಸುದೀರ್ಘ ಚರ್ಚೆ, ಆರೋಗ್ಯಕರ ಚರ್ಚೆಯಾಗುವಂಥದ್ದು, ರಾಜ್ಯದ ಜನರ ಹಿತವನ್ನು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತಹ ರೀತಿಯಲ್ಲಿ ಅವರು ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿದ್ದುಕೊಂಡು ಕೆಲಸ ಮಾಡೋಣ ಎಂದು ಹೇಳಬಯಸುತ್ತೇನೆ. ಅವರಿಗೆ ನಮ್ಮೆಲ್ಲರ ಸಂಪೂರ್ಣ ಸಹಕಾರ ಇದೆ. ಈ ಸಂದರ್ಭದಲ್ಲಿ ನಾನು ಅವರಿಗೆ ಶುಭವನ್ನು ಕೋರುತ್ತಿದ್ದೇನೆ, ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ, ನಮಸ್ಕಾರ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತು ಡಾ॥ ಉಮಾಶ್ರೀಯವರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಡಾ॥ ಉಮಾಶ್ರೀಯವರು ಶ್ರೀ ಬಂಗಾರಪ್ಪನವರು ಕೆ.ಸಿ.ಪಿ. ಪಕ್ಷವನ್ನು ಮಾಡಿದಾಗ ನಮ್ಮ ಜಿಲ್ಲೆ ಹುಬ್ಬಳ್ಳಿಯಲ್ಲಿ ಮೊದಲು ಎಂ.ಎಲ್.ಎ. ಚುನಾವಣೆಗೆ ಸ್ಪರ್ಧೆ ಮಾಡಿದರು. ಶ್ರೀ ಬೊಮ್ಮಾಯಿಯವರ ವಿರುದ್ಧ ಸ್ಪರ್ಧೆಗೆ ನಿಂತಿದ್ದರು. ನಾವು ವಿರೋಧ ಪಕ್ಷದಲ್ಲಿದ್ದೆವು. ಅವರು ನಮ್ಮ ಮನೆಗೆ ಬಂದರು. ಅವರು ಬಂದ ಕೂಡಲೇ ನಮ್ಮ ಮನೆಯವರೆಲ್ಲರೂ ಕುಳಿತುಕೊಂಡು ಏನ್ರೀ ಮೇಡಮ್ ವೋಟು ನಿಮಗೆ ಹಾಕುತ್ತೇವೆ ಎಂದು ಹೇಳಿದರು. ನಾನು ನಿಮಗೆ ಹಾಕುವುದಿಲ್ಲ ಎಂದು ಹೇಳಿದೆ. ಮತ್ತೆ ಅವರನ್ನು ಕರೆಯಿಸಿ ಸೀರೆ ಉಡಿಸಿ, ಅವರಿಗೆ ಸತ್ಕಾರ ಮಾಡಿ ಚುನಾವಣೆಯಲ್ಲಿ ಗೆದ್ದು ಬನ್ನಿ ಎಂದು ಹೇಳಿದರು. ನಮ್ಮ ಮನೆಯಲ್ಲಿ ನನ್ನ ವಿರುದ್ಧವೇ ಇಷ್ಟೆಲ್ಲಾ ನಡೆಯುತ್ತಿದೆ ಎಂದು ಹೇಳಿದೆ. ಇವರೆಲ್ಲರೂ ನನ್ನ ಪರವಾಗಿದ್ದಾರೆ, ನೀವೊಬ್ಬರೇ ನನ್ನ ವಿರುದ್ಧ ಎಂದು ಅವರು ಹೇಳಿದರು. ಅಲ್ಲಿ ಚುನಾವಣೆ ಮಾಡಿದರು. ಆನಂತರ ಬಾಗಲಕೋಟೆ ಜಿಲ್ಲೆ ತೇರದಾಳಕ್ಕೆ ಬಂದರು. ಅಲ್ಲಿ ಚುನಾವಣೆಗೆ ನಿಂತು ಸೋತರು. ಎರಡನೇ ಬಾರಿ ಗೆದ್ದರು. ಅಲ್ಲಿ ಬಹಳಷ್ಟು ಜನರ ಅಭಿಲಾಷೆ ಏನೆಂದರೆ, ಇವರು ಒಳ್ಳೆಯ ಹೆಣ್ಣುಮಗಳು, ಒಳ್ಳೆಯ ಕೆಲಸ ಮಾಡುತ್ತಾರೆ. ಜನರ ಜೊತೆಯಲ್ಲಿ ಬಹಳ ಆತ್ಮೀಯವಾಗಿರುತ್ತಾರೆ ಎನ್ನುವ ಭಾವನೆಯಿಂದ ಜನರೆಲ್ಲರೂ ಅವರಿಗೆ ಬಹಳಷ್ಟು ಬೆಂಬಲ ಕೊಟ್ಟರು. ಅವರ Bio Data ವನ್ನು ನೋಡಿದರೆ ಕರ್ನಾಟಕದಲ್ಲಿ ಒಬ್ಬ ಮಹಿಳೆ ಇಷ್ಟೆಲ್ಲಾ ಪ್ರಶಸ್ತಿಯನ್ನು ತೆಗೆದುಕೊಂಡಿದ್ದಾರೆ ಎಂದರೆ ಅದು ಕರ್ನಾಟಕಕ್ಕೆ ಅಭಿಮಾನ ಮತ್ತು ಹೆಮ್ಮೆ ಅನಿಸುತ್ತದೆ.

ಮಾನ್ಯ ಸಭಾಪತಿಯವರೇ, ಇದಕ್ಕಿಂತ ಮೊದಲು ಶ್ರೀಮತಿ ರಾಣಿ ಸತೀಶ್‌ರವರು, ಶ್ರೀಮತಿ ವಿಮಲಾಗೌಡರವರು ಉಪ ಸಭಾಪತಿಯವರಾಗಿದ್ದರು. ನಾನು ಸದಸ್ಯನಾಗಿ ಬಂದಾಗ ಶ್ರೀಮತಿ ಬಸವರಾಜೇಶ್ವರಿಯವರು ಸಭಾಪತಿಗಳಾಗಿದ್ದರು.

ಕೆಲವು ಸದಸ್ಯರುಗಳು ಮಾತನಾಡುವಾಗ ನೀವು ಮಂತ್ರಿಯಾಗಲಿಲ್ಲ, ಅದಕ್ಕೆ ಉಪ ಸಭಾಪತಿಗಳನ್ನಾಗಿ ಮಾಡಿದರು ಎಂದು ಡಾ॥ ಉಮಾಶ್ರೀಯವರಿಗೆ ಹೇಳಿದರು. ಇದು ನನಗೆ ಬಹಳ ವಿಚಿತ್ರ ಎಂದು ಅನಿಸುತ್ತಿದೆ. ಮಂತ್ರಿಯಾಗದಿರುವವರೆಲ್ಲರನ್ನು ಇಲ್ಲಿ ತಂದು ಕೂರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಂತ್ರಿಯಾಗದಿರುವವರು ಎಂದರೆ ಈ ಸ್ಥಾನಕ್ಕೇನು ಗೌರವ ಇದೆಯೋ, ಇಲ್ಲವೋ? ನಾನು ಈ ಸ್ಥಾನದಲ್ಲಿದ್ದಾಗ ಅದರಷ್ಟು ಸುಖ ಪಟ್ಟಿರುವಂಥದ್ದು ಯಾವುದು ಇಲ್ಲ. ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಸಭಾಪತಿಯಾಗಿ ಕೆಲಸ ಮಾಡಿದ್ದೇನೆ. ಸಭಾಪತಿಯಾಗಿ ಕೆಲಸ ಮಾಡುವಾಗ ಪ್ರೀತಿ, ವಿಶ್ವಾಸ, ಎಲ್ಲಾ ಜನರಿಗೆ ಮಾರ್ಗದರ್ಶನ ಮಾಡುವಂತಹ ಸ್ಥಾನ ಅದು. ಮಾನ್ಯ ಸಲೀಂ ಅಹ್ಮದ್ ರವರಿಗೆ ಮಂತ್ರಿ ಮಾಡಲಿಲ್ಲ ಅದಕ್ಕೆ ಅವರನ್ನು ಸಭಾಪತಿ ಮಾಡಿದರು. ಡಾ॥ ಉಮಾಶ್ರೀಯವರು ಮಂತ್ರಿಯಾಗಲಿಲ್ಲ ಅದಕ್ಕೆ ಉಪ ಸಭಾಪತಿ ಮಾಡಿದರು ಎಂದು ಹೇಳುತ್ತಿದ್ದಾರೆ. ಸಭಾಪತಿ ಸ್ಥಾನಕ್ಕಿಂತ ಮಂತ್ರಿ ಏಕೆ?

**ಸಭಾಪತಿಯವರು:-** ನಾನು ಸಂತೋಷದಿಂದ ಸಭಾಪತಿ ಸ್ಥಾನವನ್ನು ಒಪ್ಪಿಕೊಂಡಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನೀವು ಹೇಳಿಲ್ಲ. ನನ್ನ ಮುಂದೆ ಹೇಳಿದ್ದಾರೆ. ನನ್ನನ್ನು ಕರೆದು ಬಹಳ ದೊಡ್ಡ ದೊಡ್ಡ ಮಂದಿ ಹೇಳಿದ್ದು, ನಿಮ್ಮನ್ನು ರಾಜೀನಾಮೆ ಕೊಡಿಸುವುದಕ್ಕೆ ನಾವು ತಯಾರು ಇರಲಿಲ್ಲ. ಆದರೆ ಮಾನ್ಯ ಸಲೀಂ ಅಹ್ಮದ್‌ರವರಿಗೆ ಮಂತ್ರಿ ಮಾಡುತ್ತೇವೆಂದು ಮಾತು ಕೊಟ್ಟಿದ್ದೆವು, ಮಂತ್ರಿ ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ದಯಮಾಡಿ ನೀವು ತಪ್ಪು ತಿಳಿದುಕೊಳ್ಳಬೇಡಿ ಎಂದು ನನ್ನ ಮುಂದೆ ಹೇಳಿದ್ದಾರೆ.

(ಮುಂದು)

(738) 18/08/2026 11:50 ಎಸ್‌ಪಿಆರ್/ಬಿಎನ್‌ಎಸ್ **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ನಾನು ಏನು ಹೇಳಿದ್ದೇನೆ ಕೇಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದನ್ನು ನೀವು ಹೇಳಿಲ್ಲ.

**ಸಭಾಪತಿಯವರು:-** ನಾನು ಏನು ಹೇಳಿದ್ದೇನೆ ಎಂದರೆ, ಮಂತ್ರಿಗಿಂತ ದೊಡ್ಡ ಸ್ಥಾನ ನನಗೆ ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನೀವು ಏನೇ ಹೇಳಿದರೂ ನಾನು ನಿಮ್ಮ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ, ಸಭಾಪತಿಯವರ ಬಗ್ಗೆ ನಾನು ಮಾತನಾಡುವುದಿಲ್ಲ. But, ನನ್ನ ಎದುರಿಗೆ ಎರಡ್ಮೂರು ದಿವಸ ಚರ್ಚೆಯಾದ ನಂತರ, ನಾನು ಒಪ್ಪಿಕೊಂಡು, ರಾಜಿನಾಮೆ ಕೊಟ್ಟಿದ್ದು ನಿಜ. ಅಂದರೆ, ಸಭಾಪತಿ

ಮತ್ತು ಉಪ ಸಭಾಪತಿಗಳ ಸ್ಥಾನಗಳು ಎಂದರೆ, ಯಾರೂ ಇಲ್ಲ. ಅದೇ ರೀತಿಯಾಗಿ ಕೆಳಮನೆಯಲ್ಲಿಯೂ ಸಹ..., ನಾವು ಇಲ್ಲಿ, ನೀವು ಅಲ್ಲಿ.., but ಇದರಲ್ಲಿರುವ ಗೌರವ, ಘನತೆ..., ನಾವು ನಾಲ್ಕು ಜನರಿಗೆ ಮಾರ್ಗದರ್ಶನ ಮಾಡುವುದು, ಹಾಗೂ ಅವರಿಂದಲೂ ಅದನ್ನು ತೆಗೆದುಕೊಳ್ಳುವ ಕೆಲಸಗಳನ್ನು ಅನೇಕ ರೀತಿಯಲ್ಲಿ ನಾವು ಮಾಡಬಹುದು. ಇಂತಹ ಕೆಲಸವನ್ನು ಅವರು ಮಾಡುತ್ತಾರೆ. ಒಂದೇ ಒಂದು ಮಾತನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಶ್ರೀ ಎಸ್.ಎಲ್.ಭೋಜೇಗೌಡರು ಹೇಳಿದಂತೆ, ನಾನು ಅವರ ಮಗಳ ಮದುವೆಗೆ ಹೋಗಿದ್ದೆನು. ಆಗ ಅವರು ಮಗಳಿಗೆ ಧಾರೆಯನ್ನು ಎರಿಯಬೇಕಾಗಿತ್ತು. ನಾವುಗಳೆಲ್ಲರೂ ಅಲ್ಲಿಗೆ ಹೋಗಿ ಕುಳಿತುಕೊಂಡು, `ಲಘು ಮುಗಿಸಮ್ಮಾ ನಾನು ಹೋಗಬೇಕು' ಎಂದು ಹೇಳಿದೆ. `ಐದು ನಿಮಿಷ ಕುಂದ್ರೋ ಮಾರಾಯ' ಎಂದು ಹೇಳಿ, ನನ್ನನ್ನು physically ಕೂಡಿಸಿ, ಐದು ನಿಮಿಷ ಕೂಡಿ ಎಂದು ಹೇಳಿ ಹೋಗಿ, ಅವರ ಮನೆಯವರನ್ನು ಹಿಡಿದುಕೊಂಡು ಬಂದು, ಅವರನ್ನು ಕುಳ್ಳರಿಸಿದರು. ಆಗ ಇಬ್ಬರೂ ಕೂಡಿ ಧಾರೆಯೆರೆದರು. ಅಂದರೆ, ಇವರು ಅಷ್ಟೊಂದು ಗಟ್ಟಿ ಹೆಣ್ಣುಮಗಳು. ಎಂತಹುದೇ ಸಂದರ್ಭ ಬಂದರೂ ಸಹ, ಕಷ್ಟದಲ್ಲಿಯೂ ಸಹಿತ ತನ್ನ ಛಲವನ್ನು ಬಿಡುತ್ತಿರಲಿಲ್ಲ. ಇದಾದ ನಂತರ ಅವರು ಹೇಳಿದ್ದು ಏನೆಂದರೆ, "ನಾನು ಮೊದಲು ತಾಯಿ, ತಾಯಿಗಿಂತ ಶ್ರೇಷ್ಠವಾದ ವ್ಯಕ್ತಿ ಯಾರೂ ಇಲ್ಲ; ಮೊದಲು ನಾನು ತಾಯಿ, ಆಮೇಲೆ ಶಾಸಕಿ, ಆಮೇಲೆ ಎಲ್ಲಾ" ಎಂಬುದಾಗಿ ಅವರು ಹೇಳಿದರು. ಮುಂದುವರೆದು, ಅವರು ತಮ್ಮ ಮಗಳ ಮದುವೆಯನ್ನು ಮಾಡಬೇಕಾದರೆ, ಅವರು ತಮ್ಮ ಹೃದಯದಿಂದ ಮಂದಿಗೆ ಏನೇ ಇರಲಿ ನಾವು, ಗಂಡ-ಹೆಂಡತಿ ಎಲ್ಲರೂ ಕೂಡಿ ಮಾಡಬೇಕು ಎನ್ನುವ ಮಾತನ್ನು ಹೇಳಿದರು. ಇವರ ತಾಯಿ ಹೃದಯ ಹೇಗಿದೆ ಎನ್ನುವುದನ್ನು ನಾವು ಅವತ್ತಿಗೆ ತಿಳಿದುಕೊಂಡೆ. ಈ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ. ಅಕಸ್ಮಾತ್ತಾಗಿ, ಮುಂದೆ ಒಂದಾನೊಂದು ಕಾಲದಲ್ಲಿ ಯಾವಾಗಲಾದರೂ ಇವರಿಗೆ ಸಭಾಪತಿ ಸ್ಥಾನದಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾದರೆ, ಅವರು ಅಲ್ಲಿ ಕುಳಿತುಕೊಳ್ಳಲಿ ಎಂದು ನಾನು ಹೇಳುತ್ತೇನೆ. ಎಲ್ಲರ ಪರವಾಗಿ ನಾನು ಅವರಿಗೆ ಶುಭವನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸಭಾಪತಿಯಾಗಿ ಅವರು ಆ ಸ್ಥಾನದಲ್ಲಿ ಕುಳಿತುಕೊಳ್ಳುವ chance ಬಂದರೆ, ಅವರು ಕುಳಿತುಕೊಳ್ಳಲಿ; ಆದರೆ, ಯಾರನ್ನಾದರೂ ಎಬ್ಬಿಸಿ ಅವರು ಕುಳಿತುಕೊಳ್ಳುವುದು ಬೇಡ. ಅವರಿಗೆ ನಾನು ಶುಭವನ್ನು ಹಾರೈಸುತ್ತೇನೆ.

**ಶ್ರೀ ಯು.ಟಿ.ಖಾದರ್ (ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಇವತ್ತಿನ ದಿವಸ ಉಪಸಭಾಪತಿಯಾಗಿ ಆಯ್ಕೆಯಾದ ಡಾ॥ ಉಮಾಶ್ರೀ ರವರನ್ನು ಹಾಗೂ ಸಭಾಪತಿಯಾಗಿ ಆಯ್ಕೆಯಾದ ತಮ್ಮನ್ನು ಅಭಿನಂದಿಸುತ್ತೇನೆ. ಮೊನ್ನೆಯ ದಿನ ನಾನು ಇರಲಿಲ್ಲ. ಹೀಗಾಗಿ, ಸಭಾಪತಿಯಾಗಿ ಆಯ್ಕೆಯಾದ ತಮ್ಮನ್ನು ಎಲ್ಲರ ಪರವಾಗಿ ಅಭಿನಂದನೆ ಸಲ್ಲಿಸಲು ಬಯಸುತ್ತೇನೆ. ನಾನು ಇವತ್ತಿನ ದಿವಸ ಈ ಇಬ್ಬರನ್ನು ಅಭಿನಂದಿಸುತ್ತೇನೆ ಏಕೆಂದರೆ, ಇಬ್ಬರೂ ಸಹ ಭಾಗ್ಯಶಾಲಿಗಳಾಗಿದ್ದಾರೆ. ಯಾರು ಯಾವಾಗ ಬೇಕಾದರೂ ಮಂತ್ರಿಯಾಗಬಹುದು. ಅದಕ್ಕೇನೂ ಸಮಸ್ಯೆ ಇಲ್ಲ.

ಯಾರಿಗೆ ಬೇಕಾದರೂ ಮಂತ್ರಿಯಾಗುವುದಕ್ಕೆ ಅವಕಾಶವಿದೆ. ಆದರೆ, ಸಭಾಧ್ಯಕ್ಷ, ಸಭಾಪತಿ ಅಥವಾ ಉಪಸಭಾಪತಿಯಾಗಬೇಕಾದರೆ, ಆ ಸನ್ನಿವೇಶ ಬಂದರೆ ಮಾತ್ರವೇ ಅವರುಗಳನ್ನು ಆ ಸ್ಥಾನಗಳಲ್ಲಿ ಕುಳಿತುಕೊಳ್ಳುವ ಅವಕಾಶವಿರುತ್ತದೆಯೇ ಹೊರತು, ಬೇರೆ ಸಮಯದಲ್ಲಿ ಇಲ್ಲ. ಅದಕ್ಕಾಗಿ ಈ ಸಲ ದೇವರು, ಎಲ್ಲಾ ಜನರ ಪ್ರೀತಿ ಮತ್ತು ಆಶೀರ್ವಾದದ ಮುಖಾಂತರ ನಿಮಗೊಂದು ಆ ರೀತಿಯ ಅವಕಾಶವನ್ನು ಒದಗಿಸಿ ಕೊಟ್ಟಿದ್ದಾರೆ. ಈ ಇಬ್ಬರ ಸ್ಥಾನವು ಬಹಳ ಪಾವಿತ್ರ್ಯವುಳ್ಳ ಹಾಗೂ ಸಂವಿಧಾನ ಬದ್ಧವಾದ ಸ್ಥಾನಗಳಾಗಿವೆ. ಇದರ ಗೌರವವನ್ನು ತಾವುಗಳು ಖಂಡಿತವಾಗಿಯೂ ಸಹ ಉಳಿಸುತ್ತೀರೆಂಬ ವಿಶ್ವಾಸವು ಖಂಡಿತವಾಗಿಯೂ ನನಗೆ ಇದೆ. ಇದಕ್ಕೆ ಬೇಕಾದ ಸಹಕಾರವನ್ನು ಕೊಡುವ ಜವಾಬ್ದಾರಿಯು ಇಡೀ ಸದನದ ಜವಾಬ್ದಾರಿಯಾಗಿದೆ. ಈ ಸದನದ custodian ಆಗಿ ತಾವು ತಮ್ಮ ಕೆಲಸವನ್ನು ನಿರ್ವಹಿಸುತ್ತೀರಿ. ಇಲ್ಲಿನ ಸದಸ್ಯರ ಹಾಗೂ ಇನ್ನಿತರೆ ಸಮಸ್ಯೆಗಳು ಏನು ಎನ್ನುವುದನ್ನು ಕೇಳಿಕೊಂಡು ಅವರಿಗೆ ರಕ್ಷಣೆಯನ್ನು ಕೊಡುವ ಕೆಲಸವನ್ನು ಇವತ್ತಿನ ದಿವಸ ತಾವು ಮಾಡುವುದಾಗಿರುತ್ತದೆ. ಅದಕ್ಕಾಗಿ ನಾನು ಯಾವಾಗಲೂ ಒಂದು ಮಾತನ್ನು ಹೇಳುತ್ತಿರುತ್ತೇನೆ. ಅದೇನೆಂದರೆ, ಆ ಸ್ಥಾನದಲ್ಲಿ ಕುಳಿತುಕೊಳ್ಳುವ ತನಕ ತಾವು ಒಂದು ಪಕ್ಷಕ್ಕೆ ಸೇರಿದ ಸದಸ್ಯರಾಗಿರುತ್ತೀರಿ. ಆ ನಂತರದಲ್ಲಿ, ಇಬ್ಬರೂ ಸಹ ಯಾವುದೇ ಪಕ್ಷದ ಸದಸ್ಯರಾಗಿರುವುದಿಲ್ಲ. ಇವತ್ತಿನ ದಿವಸ ಯಾರು ಸಭಾಪತಿ ಮತ್ತು ಉಪಸಭಾಪತಿಯಾಗಿ ಇರುತ್ತಾರೆಯೋ, ಅವರು ಯಾವಾಗಲೂ ಸಹ they should be the friend of opposition ಎನ್ನುವಂತಿರಬೇಕು. ಆ ಸಂವಿಧಾನ ಬದ್ಧ ಸ್ಥಾನಗಳಲ್ಲಿ ಕುಳಿತವರು they should be the friend of opposition ಆಗಿರಬೇಕು. ಇದು ಏಕೆಂದು ಹೇಳಿದರೆ, opposition ರವರಿಗೆ ಏನಾಗುತ್ತದೆ ಎಂದು ಹೇಳಿದರೆ, ಈ ಕಡೆ ಸರ್ಕಾರವೂ ಇಲ್ಲ, ಸ್ಪೀಕರ್, ಸಭಾಪತಿ ಅಥವಾ ಉಪ ಸಭಾಪತಿಯೂ ಇಲ್ಲವೆಂದರೆ, ಅವರು completely collapse ಆಗುವಂತಹ ಪರಿಸ್ಥಿತಿಯಾಗುತ್ತದೆ. They get frustrated. ನಾವು ಹೇಳಿದ ಹಾಗೆ ಸರ್ಕಾರವು ಕೇಳಲಿಲ್ಲವೆಂದರೂ ಕೂಡ ನಮ್ಮ ಸಭಾಪತಿ ಮತ್ತು ಉಪ ಸಭಾಪತಿಯವರು ನಮ್ಮ ಜೊತೆಗೆ ಇದ್ದಾರೆಂದು ಎಲ್ಲರೂ ಸ್ವಲ್ಪ ಸಮಾಧಾನವಾಗುವ ವಿಚಾರವು ಆಗುತ್ತದೆ. ಇವರಿಗೆ ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟು ಬಹುಶಃ ಅವರು ಕೇಳುವ ವಿಚಾರಗಳಿಗೆ ಉತ್ತರವನ್ನು ಕೊಡುವ ಜವಾಬ್ದಾರಿ ನಮ್ಮ ಸರ್ಕಾರದ್ದು ಆಗಿರುತ್ತದೆ. ಜನರ ಪರವಾಗಿ ಇರುವ ವಿಚಾರದ ಬಗ್ಗೆ ಚರ್ಚೆ ಮಾಡುವ ಅಧಿಕಾರ ಅವರಿಗೆ ಇದೆ. ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಕೊಡುವ ಜವಾಬ್ದಾರಿ ನಮ್ಮದು ಆಗಿದೆ. ನಾವು ಆ ಕೆಲಸವನ್ನು ಖಂಡಿತವಾಗಿಯೂ ಸಹ ನಿಮ್ಮ ಮಾರ್ಗದರ್ಶನದಲ್ಲಿ ಮಾಡಿಕೊಂಡು ಹೋಗುತ್ತೇವೆ. ಕೆಲವೊಂದು ಸಂದರ್ಭಗಳಲ್ಲಿ ಸಭಾಪತಿ ಮತ್ತು ಉಪಸಭಾಪತಿಯವರು ಸರ್ಕಾರದ ಜೊತೆ ನಿಲ್ಲಬೇಕಾಗುತ್ತದೆ. ಏಕೆಂದರೆ, majority ಇರುವುದು ನಮಗೆ. ಅದಕ್ಕಾಗಿ ಸದನದ ಕಾರ್ಯಕಲಾಪಗಳು ನಡೆಯಲೇ ಬೇಕು. ಆ ಸಂದರ್ಭಗಳಲ್ಲಿ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಇಲ್ಲಿ ಸದನದ ಬಾವಿಗೆ ಬಂದರೂ ಕೂಡ ಬಿಲ್ಲುಗಳನ್ನು ಪಾಸ್ ಮಾಡಬೇಕಾಗುತ್ತದೆ. ಏಕೆಂದರೆ, majority ಇರುವ ನಮಗೆ ಬಿಲ್ಲು ಪಾಸಾಗಲೇಬೇಕು. ಬಿಲ್ ಪಾಸ್ ಆಗದೇ,

ಪಾಲಿಸಿಗಳು ಆಗದೇ, ಅದನ್ನು ಅನುಷ್ಠಾನ ಮಾಡುವುದಕ್ಕಾಗುವುದಿಲ್ಲ. ಆದಕಾರಣ, ಈ ಯೋಜನೆಗಳ ಮುಖಾಂತರ ಇಡೀ ಸದನವನ್ನು ಒಂದು ಉತ್ತಮ ರೀತಿಯಲ್ಲಿ ತೆಗೆದುಕೊಂಡು ಹೋಗುವ ಜವಾಬ್ದಾರಿ ಇವತ್ತಿನ ದಿವಸ ನಿಮ್ಮೆಲ್ಲರಿಗೂ ಇದೆ. ಇದು ಅಷ್ಟೇ ಕಷ್ಟದ ಸ್ಥಾನವೂ ಸಹ ಆಗಿದೆ. ಈ ಪೀಠದ ನಿರ್ವಹಣೆ ಅಷ್ಟು ಸುಲಭದ ಕೆಲಸವಲ್ಲ. ಇವತ್ತು ಒಂದು ದಿವಸ ನಾವು ಹೊಗಳುತ್ತೇವೆ; ಅವರೂ ಹೊಗಳುತ್ತಾರೆ. ಇವತ್ತು ಒಂದು ದಿವಸ ಮಾತ್ರ ತಮಗೆ ಹೊಗಳಿಕೆ ಸಿಗುವಂತಹ ದಿವಸವಾಗಿದೆ. ಇನ್ನುಳಿದ ಎಲ್ಲಾ ದಿವಸವೂ ಕೂಡ ಒಂದು ಅವರಿಂದ ಟೀಕೆಗೊಳಪಡಬೇಕು ಅಥವಾ ಇವರಿಂದ ಟೀಕೆಗೊಳಪಡಬೇಕು. ಒಮ್ಮೆ ಈ ಕಡೆಯಿಂದ ಆ ಕಡೆಗೆ ಜೋರು ಮಾಡುತ್ತಾರೆ ಹಾಗೆ ಮತ್ತೊಮ್ಮೆ ಆ ಕಡೆಯಿಂದ ಈ ಕಡೆಗೆ ಜೋರು ಮಾಡುತ್ತಾರೆ. ಕೊನೆಯದಾಗಿ ಇಬ್ಬರೂ ಸೇರಿ ನಿಮ್ಮ ಕಡೆಗೆ ನೀವು ಸರಿ ಇಲ್ಲ ಎಂದು ಜೋರು ಮಾಡುತ್ತಾರೆ. ಈ ರೀತಿಯ ಕೆಲಸಗಳು ಆಗುವಂತಹದ್ದಾಗಿವೆ. ಇದಕ್ಕಾಗಿ ನಾನು ಯಾವಾಗಲೂ ಹೇಳುತ್ತಿರುವುದೇನೆಂದರೆ, ಕ್ರಿಕೆಟ್ ಆಟವನ್ನು ಆಡುವಾಗ spectator ಯಾರು stadium ನಲ್ಲಿ ಕುಳಿತುಕೊಂಡಿದ್ದಾರೆ ಅವರು ಹಾಗೆ ಬ್ಯಾಟ್ ಮಾಡಬೇಕಾಗಿತ್ತು; ಹೀಗೆ ಹೊಡೆಯಬೇಕಿತ್ತು; ಹೀಗೆ ಮಾಡಬೇಕಾಗಿತ್ತು ಎಂದು ನೂರು ಜನರು ನೂರು ಕಾಮೆಂಟ್‌ಗಳನ್ನು ನೀಡುತ್ತಾರೆ. ಆದರೆ, ಅಲ್ಲಿನ ಕಷ್ಟ ಹಾಗೂ ಪರಿಸ್ಥಿತಿ ಬ್ಯಾಟ್ ಹಿಡಿದಿರುವವನಿಗೆ ಗೊತ್ತಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬಹುಶಃ ತಾವಿಬ್ಬರೂ ಕೂಡ ಇದ್ದೀರಿ. ಅದಕ್ಕಾಗಿ ನಮ್ಮೆಲ್ಲರ ಬೆಂಬಲ, ಸಹಕಾರಗಳು ನಿಮಗೆ ಇದೆ. ಅತ್ಯುತ್ತಮವಾದ ಸಭಾಪತಿ ಮತ್ತು ಉಪಸಭಾಪತಿಗಳಾಗಿ ನೀವುಗಳು ಕಾರ್ಯನಿರ್ವಹಿಸಿ. ಸಭಾಪತಿಯವರಿಂತಲೂ ಇನ್ನೂ ಕಷ್ಟಕರವಾದ ಕೆಲಸ ಉಪಸಭಾಪತಿಯವರದ್ದಾಗಿರುತ್ತದೆ. ಏಕೆಂದು ಹೇಳಿದರೆ, ಅವರು ಆಡಳಿತ ಪಕ್ಷದ ಕಡೆಗೆ ಕುಳಿತುಕೊಳ್ಳುವಂತಿಲ್ಲ. ವಿರೋಧ ಪಕ್ಷದ ಭಾಗದಲ್ಲಿ ಅವರು ಕುಳಿತುಕೊಳ್ಳಬೇಕು. ಇವರು silent ಆಗಿ ಇರಬೇಕು. ವಿರೋಧ ಪಕ್ಷದವರು ಆಡಳಿತ ಪಕ್ಷದವರಿಗೆ ಎಷ್ಟೇ ಬೈದರೂ ಕೂಡ ಕೋಪ ಬಂದರೂ ಕೂಡ, ಅದನ್ನು ತಡೆದುಕೊಂಡು, ಸಮಾಧಾನದ ರೀತಿಯಲ್ಲಿ ಕುಳಿತುಕೊಳ್ಳಲೇಬೇಕು. ಇವರಿಗೆ ಸಮಾಧಾನ ಮತ್ತು ತಾಳ್ಮೆ ತಪ್ಪಲ್ಲಿಕೆ ಇಲ್ಲ. ಏಕೆಂದರೆ, ಇವರು neutral ಇದ್ದಾರೆ. ಇವರು ಎಷ್ಟೇ, neutral ಇದ್ದರೂ ಕೂಡ ಮನಸ್ಸಿನಲ್ಲಿ ಒಂದು ಪ್ರೀತಿ ಇದ್ದೇ ಇರುತ್ತದೆ. ಪಕ್ಕದಲ್ಲಿಯೇ ಕುಳಿತುಕೊಂಡು ಟೀಕೆಗಳನ್ನು ಮಾಡುವಾಗ ಎಲ್ಲರಿಗೂ ಅದನ್ನು ಸಹಿಸಲಿಕ್ಕೆ ಆಗದಂತಹ ಪರಿಸ್ಥಿತಿ ಆಗುತ್ತದೆ. ಅದನ್ನೆಲ್ಲಾ ಸಹಿಸಿ, ಅವರು ಅಲ್ಲಿಗೆ ಕುಳಿತುಕೊಳ್ಳುವಂತಾಗಬೇಕು. ಸಭಾಪತಿಯವರು ಏನು ಮಾಡುತ್ತಾರೆ ಎಂದರೆ, ಕಷ್ಟಕಾಲ ಬಂದಾಗ ಉಪಸಭಾಪತಿಯವರನ್ನು ಪೀಠದಲ್ಲಿ ಕುಳ್ಳಿರಿಸಿ, ಇವರು ಒಳಗೆ ಹೋಗುತ್ತಾರೆ. ಇವರನ್ನು ಪೀಠದಲ್ಲಿ ಕೂಡಿಸುವಂತಹ ಒಂದು ಪರಿಸ್ಥಿತಿಯುಂಟಾಗುತ್ತದೆ. ಹೀಗಾಗಿ ದೊಡ್ಡ ಮಟ್ಟದಲ್ಲಿ ನಿಭಾಯಿಸುವ ಕೆಲಸ ಉಪಸಭಾಪತಿಯವರದ್ದಾಗಿರುತ್ತದೆ. ಇದಕ್ಕಾಗಿ ಇಬ್ಬರೂ ಸಹ ಸಮರ್ಥರಿದ್ದಾರೆ. ನಾನು N.S.U.I. (National Students' Union of India) ನ ಕಾರ್ಯದರ್ಶಿಯಾಗುವಾಗ ತಾವು ರಾಜ್ಯ ಮಟ್ಟದ ಅಧ್ಯಕ್ಷರಾಗಿದ್ದಿರಿ. ನಾನು ಜಿಲ್ಲಾ ಮಟ್ಟದ ಅಧ್ಯಕ್ಷನಾಗುವಾಗ, ಅವರು ರಾಷ್ಟ್ರ ಮಟ್ಟದ ಅಧ್ಯಕ್ಷರಾಗಿದ್ದರು. ನಾನು ಬೈ ಎಲೆಕ್ಷನ್‌ಗೆ ನಾಮಿನೇಷನ್ ಹಾಕಿದ ಮೊದಲ ದಿನವೇ ಉಪಸಭಾಪತಿಯವರು ನನ್ನ ಚುನಾವಣಾ ಪ್ರಚಾರಕ್ಕೆ ಬಂದು,

ಅವರೇ ಮೊದಲ ಚುನಾವಣಾ ಭಾಷಣವನ್ನು ಮಾಡಿದ್ದರು. ಇವರಿಬ್ಬರ ಬಗ್ಗೆ ನನಗೆ ವಿಶ್ವಾಸವಿದೆ. ತಾವು ಈ ಸದನದ ಮತ್ತು ಸಂವಿಧಾನ ಪೀಠದ ಗೌರವವನ್ನು ಉಳಿಸಿಕೊಂಡು, ಅದಕ್ಕನುಗುಣವಾಗಿ ತಮ್ಮ ಕೆಲಸವನ್ನು ನಿರ್ವಹಿಸಿಕೊಂಡು ನಡೆಯುತ್ತೀರಿ ಮತ್ತು ಗೌರವ ಉಳಿಯುತ್ತದೆ. ಇದಕ್ಕೆ ಬೇಕಾದ ಎಲ್ಲಾ ಸಹಕಾರವನ್ನು ನಾವು ಖಂಡಿತವಾಗಿಯೂ ಸಹ ಕೊಡುತ್ತೇವೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಬಹುಶಃ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪ್ರಸ್ತುತ ಸದನದಲ್ಲಿ ಇಲ್ಲ. ವಿಶೇಷವಾಗಿ ಅವರು ಇಲ್ಲಿ ಸಭಾಪತಿಯವರಾಗಿ ಹಾಗೂ ನಾನು ಅಲ್ಲಿ ಸಭಾಧ್ಯಕ್ಷನಾಗಿ, ಇಬ್ಬರೂ ಸೋದರರಂತೆ, ಜೊತೆ ಜೊತೆಯಾಗಿ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ಮಾಡಿಕೊಂಡೇ, ಸಹೋದರತ್ವದಿಂದಲೇ ನಾವು ಮುಂದೆ ಹೋಗುವುದಕ್ಕೆ ಅವಕಾಶವಾಯಿತು. ಅವರು ಎಲ್ಲಾ ರೀತಿಯ ಸಾಥ್ ಅನ್ನು ನನಗೆ ನೀಡಿದ್ದರು. ಇವರನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಲಿಕ್ಕೆ ಬಯಸುತ್ತೇನೆ. ನಮಸ್ಕಾರ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಡಾ॥ ಉಮಾಶ್ರೀ ಅಕ್ಕಾ ನಿಮಗೆ ಅಭಿನಂದನೆಗಳು. ಅವರು ಯಾವಾಗಲೂ ಬಾಯಿತುಂಬಾ ಮಾತನಾಡುತ್ತಾರೆ. ಅದೇ ಒಂದು ರೀತಿಯ ಸಂತೋಷ. ನಾನು ಅವರ ಪ್ರೊಫೈಲ್ ಅನ್ನು ನೋಡುತ್ತಿದ್ದೆ. ಬಹುಶಃ ಅವರು ಚಿನ್ನದ ಚಮಚವನ್ನಿಟ್ಟುಕೊಂಡು ಹುಟ್ಟಿದವರಲ್ಲ. ಬೆಂಕಿಯಲ್ಲಿ ಅರಳಿದ ಹೂವು ಎಂದು ಹೇಳಿದರೆ ತಪ್ಪಾಗಲಾರದು. 470 ಕ್ಕೂ ಹೆಚ್ಚು ಕನ್ನಡ ಚಲನಚಿತ್ರಗಳಲ್ಲಿ ಅವರು ನಟನೆ ಮಾಡಿದ್ದಾರೆ ಎಂದು ನಾನು ಅವರ ಪ್ರೊಫೈಲ್‌ನಲ್ಲಿ ಪ್ರಿಂಟ್ ಆಗಿರುವುದನ್ನು ನಾನು ನೋಡಿದ್ದೇನೆ. ಇದಲ್ಲದೇ ತಮಿಳು, ತೆಲುಗು, ತುಳು, ಕೊಂಕಣಿ ಮತ್ತು ಹಿಂದಿ ಭಾಷೆಗಳಲ್ಲಿಯೂ ಸಹ ಅವರು ಅಭಿನಯಿಸಿದ್ದಾರೆ. ಶ್ರೀ ಎಸ್.ಎಲ್.ಭೋಜೇಗೌಡರವರು ಮಾತನಾಡುವಾಗ ಬಹಳ ಚೆನ್ನಾಗಿ ಹೇಳಿದರು. ಇವರೊಬ್ಬ ಬಹುಮುಖ ಪ್ರತಿಭೆ ಇರುವ ಹುಟ್ಟು ಕಲಾವಿದೆ. ಯಾವುದೇ ಪಾತ್ರಕ್ಕೂ ಜೀವ ತುಂಬುವುದನ್ನು ಒಬ್ಬ ಕಲಾವಿದೆಯಾಗಿ ಅವರು ಮಾಡಿದ್ದಾರೆ. ಇನ್ನೂ ದಶಕಗಳ ಕಾಲವೂ ಇವರ ಹಳೆಯ ಚಲನಚಿತ್ರಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಇರುತ್ತದೆ ಎನ್ನುವುದನ್ನು ಅವರು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಿದ್ದರು. ಆ ಪಾತ್ರಗಳ ಒಂದೊಂದು ಡೈಲಾಗ್‌ಗಳನ್ನು ಕೂಡ ಅವರು ಹೇಳುತ್ತಿದ್ದರು. ಹೀಗಾಗಿ ಈ ಮನುಷ್ಯ ಆ ಚಿತ್ರಗಳನ್ನು ಎಷ್ಟು ಬಾರಿ ನೋಡಿರಬಹುದು ಎಂದು ನಾನು ಯೋಚನೆ ಮಾಡುತ್ತಿದ್ದೆ. ಅಂದರೆ, ಅವರು ಪಾತ್ರಗಳಲ್ಲಿ ಜೀವ ತುಂಬುತ್ತಿರುವ ಕಳೆಯು ಗೊತ್ತಾಗುತ್ತದೆ. ಮಹಿಳಾ ಮೀಸಲಾತಿಗೆ ಸಂಬಂಧಿತ ವಿಧೇಯಕವು ಸಂಸತ್ತಿನಲ್ಲಿ ಅನುಮೋದನೆಗೊಂಡಿದೆ. ಮುಂಬರುವ ದಿನಗಳಲ್ಲಿ ಯಾರು ಬೇಡ ಎಂದರೂ ಮೀಸಲಾತಿ ಕಾರಣಕ್ಕಾಗಿ ಶೇಕಡಾ 33 ರಷ್ಟು ಕನಿಷ್ಠ ಕೊಡಲೇಬೇಕಾಗುತ್ತದೆ. ನಾವು ಇಂತಹ ಸಂದರ್ಭಗಳಲ್ಲಿ, ನಾವು ಮಹಿಳೆಯರ ಪರ ಎಷ್ಟೇ ಮೀಸಲಾತಿ ಎಂದು ಮಾತನಾಡಿದರೂ ಕೂಡ ಸಂಪುಟ ವಿಸ್ತರಣೆಯಂತಹ ಸಂದರ್ಭ ಬಂದಾಗ ಒಬ್ಬೊಬ್ಬ ಮಹಿಳೆಯರು ಮಂತ್ರಿ ಸ್ಥಾನವನ್ನು ಪಡೆದುಕೊಳ್ಳುವುದು ಎಷ್ಟು ಕಷ್ಟ ಎನ್ನುವುದು ಅರಿವಿಗೆ ಬಂದಿರುವ ಸಂಗತಿಯಾಗಿದೆ. ಹಾಗಾದರೆ, ಮಹಿಳೆಯರಿಗೆ ಯೋಗ್ಯತೆ ಇಲ್ಲವೇ ಎಂದು ಹೇಳಿದರೆ, ಮಹಿಳೆಯರಿಗೆ

ಎಲ್ಲಾ ಯೋಗ್ಯತೆಯೂ ಇದೆ. ಗಾದೆ ಮಾತುಗಳು ಹುಟ್ಟಿರುವುದೂ ಕೂಡ 'ಗಂಡೊಂದು ಕಲಿತರೆ ಶಾಲೆಯೊಂದು ತೆರೆದಂತೆ'ಎಂಬ ಗಾದೆ ಮಾತು ಹುಟ್ಟಲಿಲ್ಲ. 'ಹೆಣ್ಣೊಂದು ಕಲಿತರೆ, ಶಾಲೆಯೊಂದು ತೆರೆದಂತೆ' ಎಂಬುದಾಗಿಯೇ ಹೇಳಿದರು. ಒಂದು ಹೆಣ್ಣು ಗಟ್ಟಿಯಾಗಿ ನಿಂತರೆ ಮಾತ್ರ ಆ ಮನೆ ಮುಂದುವರೆಯುವುದಕ್ಕೆ ಹಾಗೂ ಉದ್ಧಾರವಾಗುವುದಕ್ಕೆ ಸಾಧ್ಯ. ಇಲ್ಲವೆಂದರೆ, ಮನೆ ಮುಂದುವರೆಯುವುದಕ್ಕೆ ಸಾಧ್ಯವೇ ಇಲ್ಲ. ಆ ರೀತಿಯಾಗಿ ಎಷ್ಟೋ ಮನೆಗಳನ್ನು ಆತ್ಮವಿಶ್ವಾಸದಿಂದ ನಿಲ್ಲಿಸಿರುವುದು ತಾಯಿಂದಿರೇ. ಈ ಸಾಲಿಗೆ ಇವರು ಸೇರಿದವರಾಗಿದ್ದಾರೆ. ಇವರು ಗಟ್ಟಿಗಿತ್ತಿ ಹಾಗೂ ಹಠವಾದಿಯಾಗಿದ್ದಾರೆ. ಇವರು ಹಠವಾದಿಯಾಗಿ ಹಾಗೂ ಗಟ್ಟಿಗಿತ್ತಿ ಇಲ್ಲದೇ ಹೋಗಿದ್ದರೆ, ಕಷ್ಟದ ದಿನಗಳಲ್ಲಿ ..., ಇವತ್ತಿನ ದಿವಸ ಬಹಳ ಜನ ಸ್ವಲ್ಪ ಮಟ್ಟಿಗೆ ಕಷ್ಟ ಬಂದರೆ ಬದುಕುವ ಆಲೋಚನೆಯನ್ನೇ ಬಿಟ್ಟುಬಿಡುತ್ತಾರೆ.

(ಮುಂದು)

(739)18-08-2026/12-00/bkp-ks (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ(ಮುಂದು):**

ಬಹುಶಃ ತಾವು ಅನುಭವಿಸಿರುವ ಕಷ್ಟಕ್ಕೆ ಇವತ್ತು ಎಷ್ಟೋ ಜನಕ್ಕೆ ಆ ಕಷ್ಟ ಇದೆ ಎಂದು ಅನಿಸುವುದಿಲ್ಲ. ತಾವು ಕಷ್ಟದ ನಡುವೆಯೂ ಸಹ ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿ, ಮತ್ತೆ ಒಬ್ಬ ಸಾರ್ವಜನಿಕ ಬದುಕಿನಲ್ಲಿಯೂ ಯಶಸ್ವಿಯಾಗಿ ಶಾಸಕರಾಗಿ ಸೋತಲ್ಲಿಯೇ ಗೆದ್ದು, ಶಾಸಕರಾಗಿ, ಮಂತ್ರಿಗಳಾಗಿ, ವಿಧಾನ ಪರಿಷತ್ತಿನ ಸದಸ್ಯರಾದ ತಾವು ಈಗ ಉಪ ಸಭಾಪತಿಯವರಾಗಿ ಆಯ್ಕೆಯಾಗಿದ್ದೀರಿ. ಭಾರತೀಯ ಪರಂಪರೆಗಳಲ್ಲಿ ಸ್ತ್ರೀ ಬೇರೆ ಅಲ್ಲ. ಪುರುಷ ಮತ್ತು ಸ್ತ್ರೀ ಒಂದೇ ಆಗಿರುತ್ತಾರೆ. ಅದಕ್ಕೆ ಶಿವಶಕ್ತಿ, ಭಗವಂತ ತನ್ನ ಅವತಾರದಲ್ಲಿಯೇ ಅರ್ಧನಾರೀಶ್ವರನಾಗಿ ಕಾಣಿಸಿಕೊಳ್ಳುತ್ತಾನೆ. ತಾನೇ ಶಿವನಾಗಿ, ತಾನೇ ಪಾರ್ವತಿಯಾಗಿ, ಶಿವಶಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ಸೃಷ್ಟಿಯ ಪರಿಪೂರ್ಣತೆ ಎನ್ನುವುದು ಪುರುಷ ಮತ್ತು ಪ್ರಕೃತಿ ಇಬ್ಬರಿಂದ ಮಾತ್ರ ಸಾಧ್ಯ ಎನ್ನುವುದು ಪರಿಪೂರ್ಣತೆ. ಹಾಗಾಗಿ, ಆ ಒಂದು ಉಪ ಸಭಾಪತಿಯಾಗಿ ನೀವು ಕೊಡತಕ್ಕಂತಹ ನಿರ್ಣಯಗಳು ಮುಂದೆ ಹತ್ತಾರು ವರ್ಷಗಳ ನಂತರವೂ ಕೂಡ ಉಲ್ಲೇಖ ಮಾಡುವಂತಹ ನಿರ್ಣಯಗಳಾಗಿ ಹೊರಬರಲಿ ಎನ್ನುವ ಆಶಯವನ್ನು ವ್ಯಕ್ತಪಡಿಸಿ, ತಮಗೆ ನಾನು ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಇವತ್ತು ಈ ಅವಧಿಯಲ್ಲಿ ದಾಖಲೆ ಮಾಡುವಂತಹ ದಿವಸ ಎಂದು ಹೇಳಿದರೆ ತಪ್ಪಾಗಲಾರದು. ಮಾತೃ ಶ್ರೀ ಡಾ॥ ಉಮಾಶ್ರೀಯವರು ಇವತ್ತು ಉಪ ಸಭಾಪತಿಯವರಾಗಿ ತಮ್ಮ ಪೀಠವನ್ನು ಅಲಂಕರಿಸಿದ್ದಾರೆ. ನಾನು ವೈಯಕ್ತಿಕವಾಗಿ ಇಡೀ ರಾಜ್ಯದ ಮಹಿಳೆಯರ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಇಷ್ಟಪಡುತ್ತೇನೆ. ಅವರು ಕೊಟ್ಟಿರುವಂತಹ ಒಂದು introductory chapter ಅನ್ನು ನಾನು ಓದುತ್ತಿದ್ದೆ.

This is nothing but a chapter. ಇದು ಇವತ್ತಿನಿಂದ ಅವರು ತಮ್ಮ ಜೀವನದಲ್ಲಿ ಇನ್ನೊಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡಿದ್ದಾರೆ. ಡಾ॥ ಉಮಾಶ್ರೀ ಮೇಡಂ ರವರಿಗೆ ಬಹಳ ನಿಕಟವಾಗಿ ಈ ವಿಧಾನ ಪರಿಷತ್ತಿನ ಸದಸ್ಯಳಾಗಿ ನಾನು ನೋಡಿದ್ದೇನೆ. ಅವರ ರಾಜಕೀಯ ಜೀವನ ಪ್ರಾರಂಭವಾದುದು ಶ್ರೀಮಾನ್ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾದ ನಂತರ ವಿಧಾನ ಪರಿಷತ್ತಿಗೆ ಪದಾರ್ಪಣೆಯ ಮೂಲಕ ಶುರುವಾಯಿತು. ಆ ದಿನಗಳಲ್ಲಿ ನಾನು ಜಿಲ್ಲಾ ಪರಿಷತ್ತಿನ ಅಧ್ಯಕ್ಷಳಾಗಿದ್ದೆ. ಅವರ ಚಲನಚಿತ್ರಗಳ ಅಭಿಮಾನಿಯಾಗಿದ್ದೆ. ವಿದ್ಯಾರ್ಥಿಗಳಾಗಿದ್ದಾಗ ನಾನು ಅವರ ಚಿತ್ರಗಳನ್ನು ಬಹಳವಾಗಿ ನೋಡುತ್ತಿದ್ದೆ. ಬಹಳ ಚಿಕ್ಕ ವಯಸ್ಸಿನಲ್ಲಿ ನಾನು ರಾಜಕೀಯಕ್ಕೆ ಪ್ರವೇಶ ಮಾಡಿರುತ್ತೇನೆ. ಡಾ॥ ಉಮಾಶ್ರೀಯವರ ಯಾವುದಾದರೂ ಚಲನಚಿತ್ರ ಬಿಡುಗಡೆಯಾಗಿದೆ ಎಂದು ತಿಳಿದ ತಕ್ಷಣ ನಾವು ಕಾಲೇಜಿನ ಪಾಠವನ್ನು ಬಿಟ್ಟು ಹೋಗಿ ಚಲನಚಿತ್ರವನ್ನು ನೋಡಿರತಕ್ಕಂತಹ ಆ ದಿನಗಳನ್ನೂ ಕೂಡ ನಾನು ಇವತ್ತು ನೆನಪು ಮಾಡಿಕೊಳ್ಳುತ್ತಿದ್ದೇನೆ. ನಾನು ಈಗ ಅವರನ್ನು ಹತ್ತಿರದಿಂದ ನೋಡಿದ್ದೇನಲ್ಲಾ ಅವರೇ ಡಾ॥ ಉಮಾಶ್ರೀ ರವರಲ್ಲವೇ ಎಂದು ಬಹಳ ಸಂತೋಷವಾಗಿರುವಂತಹ ದಿನ ಇವತ್ತು ಆಗಿದೆ. 2001 ರಿಂದ ಶುರುವಾಗಿ ಸುಮಾರು 30 ವರ್ಷಗಳ ಕಾಲ ಅವರು ತಮ್ಮ ರಾಜಕೀಯ ಪಯಣವನ್ನು ಪ್ರಾರಂಭ ಮಾಡಿ ಇವತ್ತು ಅತಿ ಉನ್ನತವಾದ ಸ್ಥಾನವನ್ನು ಅಂದರೆ ಮೇಲ್ಮನೆಯ ಉಪ ಸಭಾಪತಿಯವರಾಗಿ, ಚಿಂತಕರ ಛಾವಡಿ ಎಂದು ಏನು ಹೇಳುತ್ತೇವೆ, ಹಿರಿಯರ ಮನೆ ಎಂದು ಹೇಳುತ್ತೇವೆ, ಒಬ್ಬ ಮಹಿಳೆಗೆ ಈ ಒಂದು ಸ್ಥಾನವನ್ನು ಕೊಟ್ಟಿರುವುದರಿಂದ ನಮ್ಮ ಪಕ್ಷದ ಅಧ್ಯಕ್ಷರಿಗೆ ಈ ಸಭೆಯ ಮೂಲಕ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಇಷ್ಟಪಡುತ್ತೇನೆ. ಮಹಿಳಾ ಮೀಸಲಾತಿ ಇಲ್ಲದಿದ್ದರೂ ಕೂಡ ಆ ಸ್ಥಾನಕ್ಕೆ ಮಹಿಳೆಯರನ್ನೇ ಆಯ್ಕೆ ಮಾಡಿರುವುದು ಒಂದು ಬಹಳ ಉತ್ತಮವಾದ ತೀರ್ಮಾನವೆಂದು ಹೇಳಬಹುದು. ಮಾನ್ಯ ಉಮಾಶ್ರೀಯವರ ರಾಜಕೀಯ ಜೀವನವನ್ನು ನೋಡಿದರೆ ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಕೆ.ಪಿ.ಸಿ.ಸಿ. ಸದಸ್ಯರಿಂದ ಪ್ರಾರಂಭವಾಗಿ ಚುನಾವಣೆ ಸಮಯದಲ್ಲಿ ಒಬ್ಬ ಸ್ಟಾರ್ ಪ್ರಚಾರರಾಗಿಯೂ ಕೂಡ ಇಡೀ ದೇಶದ, ಇಡೀ ರಾಜ್ಯದ ಪ್ರತಿಯೊಂದು ಜಿಲ್ಲೆಗಳಿಗೂ ಕೂಡ ಅವರದ್ದೇ ಆದ ಶೈಲಿಯಲ್ಲಿ ಪಕ್ಷಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರುವಂತಹದ್ದು ನಮ್ಮ ಪಕ್ಷದ ಮಹಾನ್ ನಾಯಕಿಯಾಗಿದ್ದಾರೆ. ಅವರ ಬಗ್ಗೆ ಒಟ್ಟಾರೆ ಹೇಳಬೇಕೆಂದರೆ, she is a model for womenfolk. ನಾವು ಇವತ್ತು ಅವರ ಯಶಸ್ಸನ್ನು ಶ್ಲಾಘನೆ ಮಾಡುತ್ತಿದ್ದೇವೆ. ಆದರೆ, ಆ ಒಂದು ಯಶಸ್ಸಿನ ಹಿಂದೆ ಅವರು ಪಟ್ಟಿರತಕ್ಕಂತಹ ಶ್ರಮಕ್ಕೂ ಕೂಡ ನಾವು ಇವತ್ತು ಮನ್ನಣೆಯನ್ನು ಕೊಡಬೇಕಾಗುತ್ತದೆ. ಸನ್ಮಾನ್ಯ ಉಮಾಶ್ರೀಯವರು ನಮ್ಮ ಕನ್ನಡ ಭಾಷೆ ಬಗ್ಗೆ ಒಂದು ಹಿರಿಮೆಯನ್ನು ತಂದಿರತಕ್ಕಂತಹವರಾಗಿದ್ದಾರೆ. ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೆ, ದೇಶ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ಕನ್ನಡದ ಅಭಿಮಾನಿಯಾಗಿ ಅಲ್ಲಿಯೂ ಕೂಡ ನಮ್ಮ ಕನ್ನಡ ಭಾವುಟವನ್ನು ಹಾರಿಸಿದಂತಹ ಮಹಾನ್ ನಾಯಕಿ ನಮ್ಮ ಜೊತೆಗೆ ಇದ್ದುಕೊಂಡು ಉಪಸಭಾಪತಿಯಾಗಿ

ಈ ಪೀಠವನ್ನು ಅಲಂಕರಿಸಿರುವುದಕ್ಕೆ ನಾನು ಮನಸ್ಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ.

ತಾವು ತಮ್ಮ ಪೀಠದಿಂದ ಎಲ್ಲರಿಗೂ ಕೂಡ ನ್ಯಾಯವನ್ನು ದೊರಕಿಸುತ್ತೀರಾ, ವಿಶೇಷವಾಗಿ ಹೆಣ್ಣು ಮಕ್ಕಳ ಸಮಸ್ಯೆಗಳ ಬಗ್ಗೆ ಬಹಳಷ್ಟು ಮಾತನಾಡಬೇಕೆಂದಿದ್ದೇವೆ. ಆದರೆ, ಮಾನ್ಯ ಸಭಾಪತಿಯವರು ತಮ್ಮ ಕಣ್ಣನ್ನು ಮೇಲೆ ಕೆಳಗೆ ಮಾಡುತ್ತಿದ್ದಾರೆ. ಮಹಿಳೆಯರನ್ನು ಉಪಸಭಾಪತಿಯವರನ್ನಾಗಿ ಮಾಡಿರುವುದು ನನಗೆ ಅತ್ಯಂತ ಸಂತೋಷದ ವಿಚಾರ. ಒಬ್ಬ ಮಹಿಳೆಗೆ ಉಪ ಸಭಾಪತಿ ಸ್ಥಾನವನ್ನು ಹಿಂದೆಯೂ ಸಹ ಕೊಟ್ಟಿದ್ದಾರೆ. ನಮ್ಮ ಅವಧಿಯಲ್ಲಿ ನಮ್ಮ ಮೇಡಂ ರವರಿಗೆ ಈ ಸ್ಥಾನ ಸಿಕ್ಕಿರುವುದರಿಂದ ನಾವು ಸಲ್ಪ ಹೆಚ್ಚು ಮಾತನಾಡಲೇ ಬೇಕಾಗುತ್ತದೆ. ಇವತ್ತು ಒಬ್ಬ ತಾರೆಯಾಗಿ, ನಾಟಕಗಳು, ಯಕ್ಷಗಾನಗಳು, ಚಲನಚಿತ್ರ,ದೂರದರ್ಶನ, ಕಿರುತೆರೆಗಳಲ್ಲಿ ತಮ್ಮದೇ ಆದಂತಹ ಒಂದು ಶೈಲಿಯಲ್ಲಿ ತಮ್ಮ ಕಲೆಯನ್ನು ಹೊರಹಾಕುವುದರ ಮೂಲಕ ತಮ್ಮ ಛಾಪ್ ಅನ್ನು ಮೂಡಿಸಿರುವಂತಹ ಒಬ್ಬ ನಾಯಕಿಯಾಗಿದ್ದಾರೆ. ಅದಕ್ಕೆ ಕೂಡ ನಾವು ಇವತ್ತು ಅಭಿನಂದನೆಯನ್ನು ಸಲ್ಲಿಸುತ್ತೇವೆ. ಇವತ್ತು ಅವರಿಗೆ ಹಲವಾರು ಪ್ರಶಸ್ತಿಗಳನ್ನು ಕೊಟ್ಟಿದ್ದು, ರಾಷ್ಟ್ರಪತಿಯವರಿಂದಲೂ ಕೂಡ ಅವರು ಪ್ರಶಸ್ತಿಯನ್ನು ಸ್ವೀಕರಿಸಿರುವುದು ಹಲವಾರು ನಿದರ್ಶನಗಳನ್ನು ಕೂಡ ಇವತ್ತು ನಾವು ಕಾಣಬಹುದು. ಮಾನ್ಯ ಉಪ ಸಭಾಪತಿಯವರಾದ ಡಾ|| ಉಮಾಶ್ರೀಯವರು ತಮ್ಮ ಮಕ್ಕಳಿಗೂ ಕೂಡ single parent ಆಗಿ ಮಾಡಿರುವಂತಹ ಶ್ರಮ ನಿಜಕ್ಕೂ ಕೂಡ ಇದು ಶ್ಲಾಘನೀಯವಾದ ವಿಚಾರವಾಗಿದೆ. ಒಬ್ಬ ಮಹಿಳೆಯಾಗಿ ಅವರು ಎಲ್ಲಾ ಭೂಮಿಯಲ್ಲಿಯೂ ಕೂಡ ಒಬ್ಬ ತಾಯಿಯಾಗಿ, ಒಬ್ಬ ಮಾದರಿ ಮಹಿಳೆಯಾಗಿ, ಒಬ್ಬ ರಾಜಕಾರಣಿಯಾಗಿ, ಒಬ್ಬ ತಾರೆಯಾಗಿ, ಎಲ್ಲಾ ಕ್ಷೇತ್ರಗಳಲ್ಲಿ ಅವರು ಯಶಸ್ಸನ್ನು ಗಳಿಸಿದ್ದಾರೆ. ಅವರಿಗೆ ಇನ್ನು ಹೆಚ್ಚು ಆಯಸ್ಸು, ಆರೋಗ್ಯವನ್ನು ಭಗವಂತ ಕೊಟ್ಟು, ಈ ಸದನದಲ್ಲಿ ತಮ್ಮ ಆದ ಛಾಪನ್ನು ಮೂಡಿಸಲಿ ಎಂದು ಹೇಳುತ್ತಾ, ನನ್ನ ಮಾತಿಗೆ ವಿರಾಮ ಹೇಳುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈ ಸಮಯ ಶ್ರಾವಣ ಮಾಸವಾಗಿದ್ದು, ಅದರಲ್ಲೂ ವಿಶೇಷವಾಗಿ ಮಂಗಳವಾರದ ದಿನವಾದ ಇಂದು ಒಬ್ಬ ಮಹಿಳೆಗೆ ಇಷ್ಟೊಂದು ದೊಡ್ಡ ಸ್ಥಾನವನ್ನು ಕೊಟ್ಟಿರುವಂತಹದ್ದನ್ನು ನೋಡಿದರೆ ಬಹಳ ಖುಷಿಯಾಗುತ್ತದೆ. ಡಾ|| ಉಮಾಶ್ರೀ ಮೇಡಂ ರವರನ್ನು ನಾವು ಚಿಕ್ಕ ವಯಸ್ಸಿನಿಂದಲೂ ನೋಡಿಕೊಂಡು ಬೆಳೆದಿದ್ದೇವೆ. ಅವರ ಹಲವಾರು ಸಿನಿಮಾಗಳನ್ನು ನೋಡುತ್ತಾ, ಅದಕ್ಕಿಂತ ಹೆಚ್ಚಾಗಿ, ನಾನು ಈ ವಿಧಾನ ಪರಿಷತ್ತಿನಲ್ಲಿ ಅವರು ಆಯ್ಕೆಯಾಗಿ ಬಂದಂತಹ ಸಮಯದಲ್ಲಿ lounge ನಲ್ಲಿ ಕುಳಿತಾಗ ನಾನು ಅವರನ್ನೇ ನೋಡುತ್ತಿದ್ದೆ. ಏಕೆಂದರೆ, ಯಾವತ್ತು ಸಹ ಅವರನ್ನು ನಾಟಕ, ಸಿನಿಮಾ ಮತ್ತು ಧಾರವಾಹಿಗಳಲ್ಲಿ ನೋಡಿರತಕ್ಕಂತಹ ಒಬ್ಬ ಮಹಿಳೆಯನ್ನು ನಾನು ವಿಧಾನ

ಪರಿಷತ್ತಿನಲ್ಲಿ ಮೊದಲ ಬಾರಿಗೆ ನೋಡಿದಾಗ, ನಾನು ಅವರನ್ನು ಪರಿಚಯ ಮಾಡಿಕೊಂಡೆ. ನಿಜವಾಗಿಯೂ ಸಹ ಅವರಲ್ಲಿ ಇರತಕ್ಕಂತಹ ಮಾತೃ ಹೃದಯ ನನಗೆ ಬಹಳ ಆಕರ್ಷಣೆಯಾಯಿತು. ನಾನು ಅವರನ್ನು ನೋಡಿ ನನ್ನ ಮನೆಗೆ ಹೋದಾಗ ಅರ್ಧ ಗಂಟೆ ಅವರ ಬಗ್ಗೆ ಮಾತನಾಡಿದ್ದೇನೆ. ಒಬ್ಬ ನಟಿಯವರಲ್ಲಿ ಇರತಕ್ಕಂತಹ ಯಾವ ಒಂದು ಲವಲೇಶವೂ ಇಲ್ಲ. ಅಂದರೆ, ಅವರು ಒಬ್ಬ ನಟಿಯಾಗಿ, ಸಚಿವರಾಗಿದ್ದ ಅವರು ಒಂದು ಅಂತರವನ್ನು ಕಾಯ್ದುಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೆ. ಈ ರೀತಿಯ ನನ್ನ ಊಹೆಗಳೆಲ್ಲವನ್ನು ನನಗೆ ದೂರ ಮಾಡಿತು. ನಿಜವಾಗಿಯೂ ಸಹ ಒಬ್ಬ ಉತ್ತಮವಾದಂತಹ ನಟಿ ಇವತ್ತು ತಮ್ಮ ಜೀವಮಾನದಲ್ಲಿ ಏನಾದರೂ ಸಾಧನೆ ಮಾಡಿದ್ದಾರೆಂದರೆ ಅವರೆ ಡಾ॥ ಉಮಾಶ್ರೀ ಮೇಡಂ ಆಗಿರುತ್ತಾರೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಹಲವಾರು ಪಾತ್ರಗಳಲ್ಲಿ ಅವರು ಆ ಪಾತ್ರಗಳಿಗೆ ಜೀವ ತುಂಬಿ ನಟಿಸುವಂತಹದ್ದು, ಅದರಲ್ಲೂ ವಿಶೇಷವಾಗಿ ಹೇಳಬೇಕೆಂದರೆ ಅದುವೇ ಪಟ್ನಂಜ ಚಲನಚಿತ್ರದಲ್ಲಿ ಪುಟ್ನಂಜಿ ಪಾತ್ರವಾಗಿದೆ. ಅದೇ ರೀತಿಯಲ್ಲಿ ಪುಟ್ಟಮಲ್ಲಿ ಚಿತ್ರದಲ್ಲಿ ಸಾಕವ್ವನ ಪಾತ್ರ, ನಿಜವಾಗಿಯೂ ಸಹ ಸಾಕವ್ವನ ಪಾತ್ರದಲ್ಲಿ ನೋಡಿದರೆ ೮೦ ವರ್ಷದ ಒಬ್ಬ ಮಹಿಳೆ ಅತಿ ಒಂದು ತೀರ ಬಡತನದಲ್ಲಿ ಇರತಕ್ಕಂತಹ ಒಂದು ಪಾತ್ರವನ್ನು ನೋಡಿದಾಗ ಅವರಲ್ಲಿ ಇರತಕ್ಕಂತಹ ಕಲೆ ಎಂತಹ ಅಗಾಧವಾದ ಕಲೆ ಎಂದು ನಾವು ನೋಡಬಹುದಾಗಿದೆ. ಅದೇ ರೀತಿಯಲ್ಲಿ ಸಂಗೊಳ್ಳಿ ರಾಯಣ್ಣ ಚಿತ್ರದಲ್ಲಿ ಒಬ್ಬ ದಲಿತ ಮಹಿಳೆಯಾಗಿ ನಟನೆ ಮಾಡಿರುವಂತಹದ್ದು. ಅವರಲ್ಲಿ ಇರತಕ್ಕಂತಹ ರೋಷಭರಿತವಾದ ಪಾತ್ರಗಳನ್ನು ನೋಡಿದಾಗ ಬಹಳ ಖುಷಿ ಎನಿಸುತ್ತದೆ. ಅವರು ಅಷ್ಟೊಂದು ಗಂಭೀರವಾದ ಪಾತ್ರಗಳನ್ನು ಮಾಡುತ್ತಾ ಮಾಡುತ್ತಾ ಕುರಿಗಳು ಸರ್ ಕುರಿಗಳು ಎನ್ನುವ ಚಲನಚಿತ್ರವನ್ನು ನೋಡಿದಾಗ ವ್ಯತಿರಿಕ್ತವಾದಂತಹ ಒಬ್ಬ ಹಾಸ್ಯ ನಟಿಯಾಗಿ ಅಭಿನಯಿಸಿದ್ದಾರೆ. ಆಕೆ ಒಬ್ಬ ಮನೆ ಕೆಲಸದಾಕೆಯಾಗಿ ಕೂಡ ಅವರು ಮೂರು ಜನರ ಒಂದು ಕುಟುಂಬಕ್ಕೆ ಬಹಳ ಆತ್ಮೀಯಳಾಗಿ, ಮನೆ ಕೆಲಸದವಳಾಗಿ ಅವರನ್ನು ತಿದ್ದುವಂತಹ ಕೆಲಸವನ್ನು ಮುನಿಯಮ್ಮನ ಪಾತ್ರದಲ್ಲಿ ಮಾಡಿರುತ್ತಾರೆ. ಇವೆಲ್ಲವನ್ನು ನೋಡುತ್ತಾ ಹೋದಾಗ ನಿಜವಾಗಿಯೂ ಸಹ ಡಾ॥ ಉಮಾಶ್ರೀ ಮೇಡಂ ರವರಲ್ಲಿ ಇಷ್ಟೊಂದು ಕಲೆ ಇದೆ ಎನ್ನುವಂತಹದ್ದನ್ನು ನೋಡಿದರೆ ಅವರಲ್ಲಿ ಒಂದು university ಇದೆ ಎಂದು ಹೇಳಬಹುದು. ಅಂದರೆ, ಒಬ್ಬಳು ತಾಯಿಯಾಗಿ, ಅವರು ಬೆಳೆದು ಬಂದಂತಹ ರೀತಿ-ನೀತಿಗಳ ಬಗ್ಗೆ ಆಗಾಗ ಸಮಯ ಸಿಕ್ಕಾಗ ನಮ್ಮ ಜೊತೆ ಹಂಚಿಕೊಳ್ಳುತ್ತಿದ್ದರು. ನಾನು ಹಾಗೆ ಬೆಳೆದೆ, ನಾನು ಹೀಗೆ ಇದ್ದೆ ಎನ್ನುವಂತಹದ್ದನ್ನು ಹೇಳುತ್ತಿದ್ದರು. ಅಂದರೆ ಅವರು ಹಿಂದೆ ಕಳೆದಂತಹ ಸನ್ನಿವೇಶಗಳನ್ನು ಯಾವುದನ್ನು ಸಹ ಅವರು ಮರೆತಿಲ್ಲ. ಇವತ್ತು ಅವರು ಉನ್ನತ ಸ್ಥಾನದಲ್ಲಿದ್ದರೂ ಕೂಡ ಈಗ ತಾನೆ ಮೇಡಂ ರವರ ಹತ್ತಿರ ಮಾತನಾಡಿದೆವು. ನಾವು ಕೆಲವೊಂದು ವಿಷಯಗಳ ಬಗ್ಗೆ ಮಾತನಾಡಿದೆವು. ಎಷ್ಟು ಸಾಮಾನ್ಯವಾಗಿ ಅವರು ಇರುತ್ತಿದ್ದರು ಎಂದರೆ ಯಾವುದಾದರೂ ಒಂದು sweet ಮಾಡಬೇಕಾದರೆ, ಅಡುಗೆಗಳನ್ನು ಮಾಡಬೇಕಾದರೆ ಅದನ್ನು ಸಹ ಅವರು

ಚರ್ಚೆ ಮಾಡಿಕೊಂಡು ಮಾಡುತ್ತಾರೆ. ಅಂತಹವರು ಇಂದು ಒಬ್ಬ ಉಪ ಸಭಾಪತಿಯಾಗಿ ಪೀಠವನ್ನು ಅಲಂಕರಿಸುತ್ತಿದ್ದಾರೆಂದರೆ ನಿಜವಾಗಿಯೂ ಸಹ ಈ ವಿಷಯ ಬಹಳ ಖುಷಿಯಾದ ವಿಷಯ ಎಂದು ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರ ಎಲ್ಲಾ ಮಹಿಳೆಯರಿಗೆ ಮಾದರಿಯಾಗಿರುವಂತಹ ವಿಚಾರ ಆಗಿರುತ್ತದೆ.

(ಮುಂದು..)

(740) 18.08.2026 12.10 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್ (ಮುಂದು):-**

ಅವರ 30 ವರ್ಷಗಳ ರಾಜಕೀಯ ಅನುಭವ ಮತ್ತು 47 ವರ್ಷಗಳ ಸಾಂಸ್ಕೃತಿಕ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. "ಗುಲಾಬಿ ಟಾಕೀಸ್" ಎನ್ನುವುದು ಅತ್ಯುತ್ತಮವಾದ ಕೊಂಕಣಿ ಚಲನಚಿತ್ರ. ಅದರಲ್ಲಿ ಅಮಾಯಕ ಮಹಿಳೆಯರನ್ನು ಮದುವೆಯಾಗಿ ಬಿಟ್ಟು ಹೋಗುವಂಥ ಚಿತ್ರಣವಿದೆ. ಅಂಥ ಮಹಿಳೆಯಲ್ಲಿರುವಂಥ ಭಾವನೆಗಳನ್ನು ಅವರು ಹೊರ ಹಾಕುವುದನ್ನು ನೋಡಿದರೆ ಬಹಳ ಖುಷಿಯೆನಿಸುತ್ತದೆ. ಇವರಿಗೆ ಡಾ: ರಾಜಕುಮಾರ್ ಅವರ ಜೀವಮಾನ ಸಾಧನೆಯ ಪ್ರಶಸ್ತಿಯು ಲಭಿಸಿದೆ. ಇಂಥ ಒಬ್ಬ ದಿಟ್ಟ ಮಹಿಳೆ ನಮ್ಮ ಸದನದಲ್ಲಿ ಉಪ ಸಭಾಪತಿಯಾಗಿದ್ದಾರೆ. ನಮ್ಮೆಲ್ಲರ ಅಕ್ಕ, ನಮ್ಮೆಲ್ಲರ ಆತ್ಮೀಯರು, ನಮ್ಮೆಲ್ಲರ ಮೇಡಂ ಅವರು ನಮಗೆಲ್ಲಾ role model ಎಂದು ನಾನು ಹೇಳಬಯಸುತ್ತೇನೆ. ಇವತ್ತು ಅವರು ಉಪ ಸಭಾಪತಿ ಸ್ಥಾನವನ್ನಲಂಕರಿಸಿ, ಮಹಿಳೆಯರಾದ ನಮಗೆಲ್ಲಾ ಹೆಚ್ಚು ಅವಕಾಶ ಕೊಡುತ್ತಾರೆ. ಹಿಂದೊಮ್ಮೆ ಮಾನ್ಯ ಭಾರತಿ ಶೆಟ್ಟಿಯವರು ಸಾಂದರ್ಭಿಕವಾಗಿ ಕುಳಿತುಕೊಂಡಾಗ ಅವರು ನನಗೆ 10 ನಿಮಿಷ ಹೆಚ್ಚು ಸಮಯವನ್ನು ಕೊಟ್ಟರು. ಆಗ ಜಗಳ ಶುರುವಾಯಿತು. ಆದರೆ ಇನ್ನು ಮುಂದೆ ಅದಾಗಲಿಕ್ಕಿಲ್ಲ ಎಂದು ಭಾವಿಸುತ್ತೇನೆ. ಏಕೆಂದರೆ ಆ ಸಮಯದಲ್ಲಿ ಜಗಳ ತೆಗೆದವರೇ ಆ ಭಾಗದವರು. ಇವತ್ತು ಅಲ್ಲಿದ್ದಂತ ಮೇಡಂ ಅವರನ್ನು ಕರೆತಂದು ಉಪ ಸಭಾಪತಿಯವರ ಸ್ಥಾನದಲ್ಲಿ ಕೂರಿಸಲಾಗಿದ್ದು, ಎಲ್ಲರಿಗೂ ಹೃತ್ಪೂರ್ವಕವಾದ ಧನ್ಯವಾದಗಳನ್ನು ಹೇಳುತ್ತಾ, ಮುಂದೊಂದು ದಿನ ಅವರಂತೆ ನಾವಾಗಬೇಕೆಂಬ ಕನಸನ್ನು ನಮ್ಮಲ್ಲಿ ಹುಟ್ಟು ಹಾಕಿದ್ದಾರೆ. ಅವರಿಗೆ ಇಂಥ ಉನ್ನತವಾದ ಹುದ್ದೆ ದೊರಕಿರುವುದಕ್ಕಾಗಿ ನಾನು ಹಾರ್ದಿಕವಾದ ಅಭಿನಂದನೆಗಳನ್ನು ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಡಾ: ಆರತಿ ಕೃಷ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನೂತನವಾಗಿ ಉಪಸಭಾಪತಿಯವರಾಗಿ ಆಯ್ಕೆಯಾಗಿರುವ ಡಾ: ಉಮಾಶ್ರೀ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಹಾಗೆಯೇ ಆ ಸ್ಥಾನಕ್ಕೆ ಅವರನ್ನು ಆಯ್ಕೆ ಮಾಡಿರುವ ಪಕ್ಷದ ಎಲ್ಲಾ ವರಿಷ್ಠರಿಗೆ ಮತ್ತು ನಾಯಕರಿಗೆ ನನ್ನ ಧನ್ಯವಾದಗಳು. ಇಲ್ಲಿ ಬಂದು ಕುಳಿತಾಗ ಒಂದು ದೃಶ್ಯ ನನ್ನ ಕಣ್ಣಮುಂದೆ ಬಂದಿತು. ನಮ್ಮ ತಂದೆ ದಿವಂಗತ ಬೇಗಾನೆ ರಾಮಯ್ಯನವರು ಸಚಿವರಾಗಿದ್ದಾಗ, ನಾನು ವಿಧಾನಸಭೆ ಕಲಾಪ ವೀಕ್ಷಿಸಲು ಈ ಪ್ರೇಕ್ಷಕರ ಗ್ಯಾಲರಿಯಲ್ಲಿ ಸುಮಾರು ಬಾರಿ ಬಂದು ಕುಳಿತಿರುತ್ತಿದ್ದೆನು. ಆ ಸಮಯದಲ್ಲಿ ದಿವಂಗತ

ಕೆ.ಹೆಚ್.ರಂಗನಾಥ್ ಅವರು ಸಭಾಧ್ಯಕ್ಷರಾಗಿದ್ದರು. ಒಂದು ದಿನ ವಿಧಾನ ಪರಿಷತ್ತಿನ ಪ್ರಶ್ನೋತ್ತರ ವೇಳೆಯಲ್ಲಿ ಇಲ್ಲಿ ಬಂದು ಕುಳಿತಿದ್ದಾಗ ಸಭಾಪತಿಯವರ ಸ್ಥಾನದಲ್ಲಿ ಮಹಿಳೆಯೊಬ್ಬರನ್ನು ನೋಡಿದೆನು. ನನಗೆ ಆಶ್ಚರ್ಯವಾಯಿತು. ಸಾಕಷ್ಟು ಕುತೂಹಲಕಾರಿಯಾಗಿ ನಾನು ಅವರನ್ನು ನೋಡುತ್ತಿದ್ದೆನು. ಆ ಸ್ಥಾನದಲ್ಲಿ ಮಹಿಳೆಯೊಬ್ಬರು ಕುಳಿತುಕೊಳ್ಳುತ್ತಾರೆ ಎಂದು ನನಗೆ ಆಗಲೇ ಗೊತ್ತಾಗಿದ್ದು. ಇವತ್ತು ಅದೇ ವಿಧಾನ ಪರಿಷತ್ತಿನ ಸದಸ್ಯೆಯಾಗಿ ಮಹಿಳಾ ಉಪ ಸಭಾಪತಿಯವರ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವುದು ನನಗೆ ಬಹಳ ಹೆಮ್ಮೆಯ ವಿಷಯ.

ನಾನು ಬಾಲ್ಯದಿಂದಲೂ ಡಾ: ಉಮಾಶ್ರೀ ಅವರ ಚಿತ್ರಗಳನ್ನು, ಅವರ ಪ್ರತಿಭೆಯನ್ನು, ಅವರ ನಟನೆಯನ್ನು ನೋಡುತ್ತಾ ಬೆಳೆದುಬಂದಿದ್ದೇನೆ. ನಾನು ಅಮೆರಿಕಾದ ರಾಯಭಾರಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರು ಕನ್ನಡ ಸಮ್ಮೇಳನಕ್ಕೆ ಬಂದಿದ್ದರು. ಆಗ ನಾನು ಅವರನ್ನು ಮೊದಲನೆಯ ಬಾರಿಗೆ ಮುಖಾಮುಖಿ ಭೇಟಿಯಾಗಿದ್ದೆನು. ಅದಾದ ನಂತರ 2013ರಲ್ಲಿ ನನಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬಂದಾಗ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದರು. ಅದಾದ ಮೇಲೆ ಅನೇಕ ಸಭೆ-ಸಮಾರಂಭಗಳಲ್ಲಿ ನಾವಿಬ್ಬರೂ ಒಟ್ಟಿಗೆ ಭಾಗವಹಿಸುತ್ತಿದ್ದೆವು. ಆ ಮೂಲಕ ಅವರ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ನನಗೆ ಒಂದು ಅವಕಾಶ ದೊರೆಯಿತು.

ಡಾ: ಉಮಾಶ್ರೀ ಅವರು ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿ ತಮ್ಮದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿರುವಂಥ ಒಬ್ಬ ಪ್ರತಿಭಾವಂತ ಕಲಾವಿದರು. ವಿಶೇಷವಾಗಿ ಸಾಮಾನ್ಯವಾಗಿ ಮಹಿಳೆಯರ ಬದುಕು, ಗ್ರಾಮೀಣ ಜೀವನ, ತಾಯಿಯ ಪಾತ್ರ, ಸಾಮಾಜಿಕ ಸಂಘರ್ಷಗಳು ಮತ್ತು ಮಾನವೀಯ ಭಾವನೆಗಳನ್ನು ತಮ್ಮ ಅಭಿನಯದ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿರುತ್ತಾರೆ. ಇವರ ಕಲಾ ಆಧಾರ ರಂಗಭೂಮಿ. ರಂಗಭೂಮಿಯ ಶಿಸ್ತು, ಸಂಭಾಷಣೆಯ ಸ್ಪಷ್ಟತೆ, ಪಾತ್ರದ ಒಳತಿರುಳನ್ನು ಅರಿತು ಅಭಿನಯಿಸುವ ಸಾಮರ್ಥ್ಯ ಇವೆಲ್ಲವೂ ಚಿತ್ರರಂಗದಲ್ಲಿ ಅವರ ಅಭಿನಯಕ್ಕೆ ಬಲ ನೀಡಿರುವಂಥದ್ದು. ಅವರು ಅನೇಕ ಕನ್ನಡ ಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರವನ್ನು ನಿರ್ವಹಿಸಿದ್ದಾರೆ. ಹಾಸ್ಯ ಪಾತ್ರಗಳಲ್ಲಿ ನಗಿಸುವುದರ ಜೊತೆಗೆ, ಗಂಭೀರ ಪಾತ್ರಗಳಲ್ಲಿ ಪ್ರೇಕ್ಷಕರ ಮನಸ್ಸನ್ನು ಮುಟ್ಟುವ ಸಾಮರ್ಥ್ಯ ಅವರದ್ದು. "ಗುಲಾಬಿ ಟಾಕೀಸ್"ನಲ್ಲಿನ ಅವರ ಅಭಿನಯ ವಿಶೇಷವಾದ ಪ್ರಶಂಸೆಗೆ ಪಾತ್ರವಾಯಿತು. ಈ ಪಾತ್ರಕ್ಕಾಗಿ ಅವರಿಗೆ ಅತ್ಯುತ್ತಮ ಚಲನಚಿತ್ರ ನಟಿ ಪ್ರಶಸ್ತಿ ದೊರೆಯಿತು. ರಾಷ್ಟ್ರೀಯ ಚಲನಚಿತ್ರ ನಟಿ ಪ್ರಶಸ್ತಿಯು ಅವರ ಕಲಾ ಬದುಕಿನ ಮೈಲಿಗಲ್ಲು. ಇದು ಕೇವಲ ಒಬ್ಬ ನಟಿಗೆ ದೊರೆತ ಗೌರವವಲ್ಲ. ಕನ್ನಡದ ಪ್ರತಿಭಾವಂತ ಮಹಿಳಾ ಕಲಾವಿದೆಯೊಬ್ಬರ ಅಭಿನಯಕ್ಕೆ ದೊರೆತ ರಾಷ್ಟ್ರಮಟ್ಟದ ಮಾನ್ಯತೆ ಎಂದು ಕೂಡ ಹೇಳಬಹುದು.

ಇನ್ನು ಕಲಾಕ್ಷೇತ್ರದ ಜೊತೆಗೆ ಡಾ: ಉಮಾಶ್ರೀಯವರು ಸಾರ್ವಜನಿಕ ಜೀವನದಲ್ಲಿಯೂ ಸಕ್ರಿಯರಾಗಿದ್ದಾರೆ. ಕರ್ನಾಟಕದ ರಾಜಕೀಯದಲ್ಲಿ ಜನ ಪ್ರತಿನಿಧಿಯಾಗಿ ಹಾಗೂ ಸಚಿವೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂಬಂಧಿಸಿದ ವಿಷಯಗಳೊಂದಿಗೆ ಅವರ ಸಾರ್ವಜನಿಕ ಸೇವೆ ಗುರುತಿಸಲ್ಪಟ್ಟಿದೆ.

ಡಾ: ಉಮಾಶ್ರೀಯವರ ಜೀವನ ನೋಡಿದಾಗ ಒಂದು ಮುಖ್ಯ ಸಂದೇಶ ಸಿಗುತ್ತದೆ. ಪ್ರತಿಭೆಗೆ ಅವಕಾಶ ಸಿಕ್ಕಾಗ ಅದು ವ್ಯಕ್ತಿಯ ಬದುಕನ್ನು ಮಾತ್ರವಲ್ಲ, ಸಾಮಾಜಿಕ ದೃಷ್ಟಿಕೋನವನ್ನು ಬದಲಾಯಿಸಬಲ್ಲದು. ಕಲಾವಿದೆ, ರಂಗಕರ್ಮಿ, ಜನ ಪ್ರತಿನಿಧಿಯಾಗಿ ತಮ್ಮ ಛಾಪನ್ನು ಮೂಡಿಸಿರುವ ಡಾ: ಉಮಾಶ್ರೀ ಅವರು ಮಹಿಳಾ ಸಾಧಕರಿಗೆ ಒಂದು ಪ್ರೇರಣಾದಾಯಕ ಉದಾಹರಣೆ. ಸಾರ್ವಜನಿಕ ಬದುಕನ್ನು ಪ್ರವೇಶ ಮಾಡಿದ ಡಾ: ಉಮಾಶ್ರೀಯವರು ವೈಯಕ್ತಿಕ ಬದುಕಿನಲ್ಲಿ ಅನೇಕ ರೀತಿಯ ಸಂಕಷ್ಟಗಳನ್ನು ಎದುರಿಸಿದ್ದರು. ಇಷ್ಟೆಲ್ಲಾ ಸವಾಲುಗಳ ನಡುವೆ ತಮ್ಮ ಛಲದಿಂದ ಸಾರ್ವಜನಿಕ ಬದುಕಿನಲ್ಲಿ ಅತಿ ಎತ್ತರಕ್ಕೆ ಏರಿದಂಥ ಮಹಾನ್ ಸಾಧಕಿ. ಇದೀಗ ಅವರು ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಆಯ್ಕೆಯಾಗಿರುವುದು ಇಡೀ ಕರ್ನಾಟಕದ ಮಹಿಳಾ ಸಮುದಾಯಕ್ಕೆ ಸಂದಂಥ ಗೌರವ. ಇಂಥ ಪ್ರತಿಭಾನ್ವಿತ ಮಹಿಳಾ ಸಾಧಕಿಗೆ ಕರ್ನಾಟಕ ವಿಧಾನ ಪರಿಷತ್ತಿನ ಉಪ ಸಭಾಪತಿ ಹುದ್ದೆ ಒಲಿದು ಬಂದಿರುವುದು ಒಬ್ಬ ಮಹಿಳೆಯಾಗಿ ನನಗೆ ಅತ್ಯಂತ ಸಂತಸದ ವಿಷಯ. ಅವರು ಉಪ ಸಭಾಪತಿ ಹುದ್ದೆಯಲ್ಲಿ ಪಕ್ಷಾತೀತವಾಗಿ ಎಲ್ಲರ ಮನವನ್ನು ಗೆಲ್ಲುವ ಭರವಸೆ ನನಗಿದೆ. ಮತ್ತೊಮ್ಮೆ ಅವರಿಗೆ ನನ್ನ ಆತ್ಮೀಯ ಅಭಿನಂದನೆಗಳು.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಉಮಾಶ್ರೀಯವರನ್ನು ನಾನು ರಾಜಕಾರಣದಲ್ಲಿ ಹತ್ತಿರದಿಂದ ನೋಡಿರುವುದು ಕಡಿಮೆ. ಆದರೆ ಅವರ ಹೆಸರನ್ನು ನಾವು ಚಿಕ್ಕ ಹುಡುಗರಿದ್ದಾಗಿನಿಂದಲೂ ಕೇಳುತ್ತಿದ್ದೇವೆ. ಕನ್ನಡದಲ್ಲಿ "ಕಲ್ಲರಳಿ ಹೂವಾಗಿ" ಎನ್ನುವ ಒಂದು ಶಬ್ದವಿದೆ. ಈ ಶಬ್ದವು ಬಹುಶಃ ಇಂಥವರಿಂದಲೇ ಹುಟ್ಟಿರಬಹುದು. ಕಷ್ಟದ ಜೀವನವನ್ನು ನಡೆಸಿ ಒಂದು ಸಾಮಾನ್ಯ ಕುಟುಂಬದಿಂದ ಬಂದಿರುವಂಥ ಮಹಿಳೆ ಇಷ್ಟು ಚಲನಚಿತ್ರಗಳಲ್ಲಿ ಆ ಪಾತ್ರಕ್ಕೆ ಜೀವ ತುಂಬಿ, ಬಹುಶಃ ಕರ್ನಾಟಕದಲ್ಲಿ ಒಂದು ಕೋಟಿ ಜನರು ಇವರ ಹೆಸರು ಹೇಳುತ್ತಾರೆ. ಹಾಗಾಗಿ ಆ ಪಾತ್ರದ ಮೂಲಕ ಅನೇಕ ಜನರನ್ನು ನಗಿಸಿದ್ದಾರೆ, ಅನೇಕ ಜನರನ್ನು ಭಾವನಾತ್ಮಕವಾಗಿ ಅಳಿಸಿದ್ದಾರೆ. ಆ ಮೂಲಕವಾಗಿ ಸಮಾಜವನ್ನು ಜಾಗೃತಗೊಳಿಸಿದ್ದಾರೆ. ಡಾ: ಉಮಾಶ್ರೀ ಎಂದರೆ ಕಲೆಯ ಸಿರಿ ತುಂಬಿರುವಂಥ ಮಹಿಳೆ. ಸಾಮಾನ್ಯವಾಗಿ ಕಲೆಗೆ ಜಾತಿಯಿಲ್ಲ. ಜಾತಿ, ಮತ, ಪಂಥ, ಭಾಷೆ ಇವೆಲ್ಲವನ್ನೂ ಮೀರಿ ಬೆಳೆದಿರುವವರು ಮಾನ್ಯ ಉಮಾಶ್ರೀ ಮೇಡಂ ಅವರು. ಕಲೆಗೆ ಸಿರಿಯನ್ನು ಕೊಟ್ಟಿರುವವರು, ಶ್ರೀಮಂತಿಕೆಯನ್ನು ಕೊಟ್ಟವರು, ಕಲೆಗೆ ಜೀವ ತುಂಬಿರುವವರು ಎಂದು ಕರ್ನಾಟಕದಲ್ಲಿ ಹೆಸರು ಹೇಳಬಹುದಾದಂಥ ಹತ್ತು ಜನ ಶ್ರೇಷ್ಠ ನಟರಲ್ಲಿ ಡಾ: ನಮ್ಮ ಉಮಾಶ್ರೀಯವರು ಕೂಡ ಇದ್ದಾರೆ. ಬಹುಶಃ ನಮ್ಮ ಕರ್ನಾಟಕ ರಾಜ್ಯದ ಎಲ್ಲಾ ಶ್ರೇಷ್ಠ ನಟರ ಜೊತೆಯಲ್ಲಿ ಅವರು ನಟನೆಯನ್ನು ಮಾಡಿದ್ದಾರೆ. ಅಂಥ ಮಹಿಳೆಯೊಬ್ಬರು ನಮ್ಮ ಮನೆಯಲ್ಲಿದ್ದಾರೆ, ನಮಗೆಲ್ಲಾ ಪರಿಚಿತರು ಎನ್ನುವುದೇ ಒಂದು ಖುಷಿಯ ವಿಚಾರ. ಅವರು ಇಂದು ಉಪ ಸಭಾಪತಿಯಾಗಿರುವುದು ನಮಗೆಲ್ಲಾ ಖುಷಿ ತಂದಿದೆ, ಸಂತೋಷ ತಂದಿದೆ. ಅವರು ಇನ್ನೂ ಎತ್ತರೆತ್ತರಕ್ಕೆ ಏರಲಿ ಎಂದು ಹೇಳುತ್ತಾ, ಅವರ ಕುಟುಂಬಸ್ಥರು ಗ್ಯಾಲರಿಯಲ್ಲಿ ಕಾಣುತ್ತಿದ್ದಾರೆ. ಬಹುಶಃ ಮಾನ್ಯ ಉಮಾಶ್ರೀ ಮೇಡಂ ಅವರಿಗೆ ಬಹುಶಃ ಇದಕ್ಕಿಂತ ಹೆಮ್ಮೆಯ

ಸಂಗತಿ ಇನ್ನೇನಿದೆ? ಜೀವನದಲ್ಲಿ ನನ್ನ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನಾಡುತ್ತಿದ್ದಾರೆಂದು ಅವರಿಗೆ ಖುಷಿಯಾಗಬಹುದು. ಇಡೀ ಸಮಾಜ ಮಾನ್ಯ ಉಮಾಶ್ರೀಯವರ ಬಗ್ಗೆ ಒಳ್ಳೆಯ ಮಾತುಗಳನ್ನಾಡುತ್ತದೆ. ಅನೇಕ ದುಃಖಗಳನ್ನು ಮರೆಸಿ, ಇಂದು ಒಳ್ಳೆಯ ಸ್ಥಾನಕ್ಕೆ ಏರಿದ್ದಾರೆ. ಇನ್ನೂ ಒಳ್ಳೆಯ ಅವಕಾಶಗಳು ಅವರಿಗೆ ಬರಲಿ ಎಂದು ಹೇಳುತ್ತಾ, ಶುಭಾಶಯಗಳನ್ನು ಕೋರುತ್ತೇನೆ.

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತು ಡಾ: ಉಮಾಶ್ರೀ ಮೇಡಂರವರು ಉಪ ಸಭಾಪತಿಗಳಾಗಿ ಆಯ್ಕೆ ಮಾಡಿದಂಥ ಸದನದ ಎಲ್ಲಾ ಸದಸ್ಯರಿಗೆ ಮೊದಲನೆಯದಾಗಿ ನಾನು ಧನ್ಯವಾದಗಳನ್ನು ತಿಳಿಸಲಿಚ್ಛಿಸುತ್ತೇನೆ.

1881ರಲ್ಲಿ ಪ್ರಜಾಪ್ರತಿನಿಧಿ ಸಭೆ ಎಂದು ಪ್ರಾರಂಭವಾಗಿ ಶ್ರೀಮಾನ್ ರಂಗಾಚಾರ್ಲು ಅವರು ಕುಳಿತಂಥ ಆಸನಕ್ಕೆ ತಮ್ಮನ್ನು ಸಭಾಪತಿಯವರಾಗಿ ಆಯ್ಕೆ ಮಾಡಿದ್ದು, ನಂತರ ಮೇಡಂ ಅವರನ್ನು ಉಪ ಸಭಾಪತಿಯವರಾಗಿ ಆಯ್ಕೆ ಮಾಡಿರುವುದು ಈ ದೇಶದ ಪ್ರಜಾಪ್ರಭುತ್ವ ಮತ್ತು ಈ ದೇಶದ ಸಂವಿಧಾನ ಎರಡಕ್ಕೂ ಇರುವಂಥ ಒಂದು ಶಕ್ತಿ ಮತ್ತು ಸಾಮರ್ಥ್ಯ ಹಾಗೂ ದೇಶದಲ್ಲಿರುವ ಭ್ರಾತೃತ್ವಕ್ಕೆ ಒಂದು ಉದಾಹರಣೆಯಾಗಿ ಈ ಮನೆ ಕಾಣುತ್ತಿದೆ ಎಂದು ಸಂತೋಷದಿಂದ ಹೇಳಲಿಚ್ಛಿಸುತ್ತೇನೆ.

**(ಮುಂದು)**

(741) 18-08-2026 (12.20) ಕೆಜಿ- ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಶಿವಕುಮಾರ್ (ಮುಂದು):-**

ಇವತ್ತು ನಿಜ. ಬಹಳಷ್ಟು ವಿಚಾರಗಳಲ್ಲಿ differences ಇರಬಹುದು. ಆದರೆ, ಇಂತಹ ವಿಚಾರಗಳು ಬಂದಾಗ, ಈ ಆಯ್ಕೆಗಳು ಬಂದಾಗ, ಅಪರೂಪಕ್ಕೆ ಈ ತರಹದ model pieces ತರಹ ಅವರು ಕಾಣುತ್ತಾರೆ. ಈ ಹಿಂದೆ ಶ್ರೀಮತಿ ವಿಮಲಗೌಡರವರನ್ನು ಉಪ ಸಭಾಪತಿಯನ್ನಾಗಿ ಮಾಡಿದ್ದರು. ಅದೇರೀತಿ ಈಗ ಡಾ॥ ಉಮಾಶ್ರೀಯವರು ಉಪ ಸಭಾಪತಿ ಆಗಿದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಎಲ್ಲಾವನ್ನು ರಾಜಕೀಯವಾಗಿ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಒಂದು consensus ನಿಂದ ಮಾಡಬೇಕಾಗುತ್ತದೆ. ಇನ್ನೊಂದು ಬೇರೆ ಬೇರೆ ಕಾರಣಗಳಿಗಾಗಿ ಒಂದು ಸ್ಥಾನಮಾನವನ್ನು ನಾವು ಕೊಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಪ್ರಜಾಪ್ರತಿನಿಧಿ ಸಭೆ ಬಗ್ಗೆ ಒಂದು ನಿಮಿಷ ಮಾತನಾಡಿ ಮುಂದಕ್ಕೆ ಮಾತನಾಡುತ್ತೇನೆ. ಅವತ್ತು ನಡೆದಂತಹ debates ನಲ್ಲಿ Miller Commission report ಬಂದು Muhammadans ಗೆ, Backward Classes ಗೆ reservation ಬರಬೇಕೆಂದು ವರದಿಯನ್ನು 1923 ನಲ್ಲಿ ಕೊಟ್ಟಾಗ, ಅವತ್ತಿನ ದಿವಾನರು resign ಮಾಡಿ ಹೋದಾಗ ಆಗ ಇನ್ನೊಂದು immediate alternative ಆಗಿ

ಸಿಕ್ಕಿದ್ದು ಶ್ರೀ ಸರ್ ಮಿರ್ಜಾ ಇಸ್ಮಾಯಲ್‌ರವರು. ನಾವು ಇವತ್ತು ಬೆಂಗಳೂರು ನಗರದಲ್ಲಿ ಒಳ್ಳೆಯ ಮರ ಗಿಡಗಳನ್ನು ನೋಡುತ್ತಿದ್ದೇವೆ. ಈ ಮರ ಗಿಡಗಳನ್ನು ಕಾಶ್ಮೀರದಿಂದ ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ನೆಟ್ಟಿದ್ದರು. ನಾವು  ಇವತ್ತು ಅವುಗಳನ್ನು ನೋಡುತ್ತಿದ್ದೇವೆ. ಇವತ್ತು ಈ ನಗರಗಳು ಇಷ್ಟು ಅಚ್ಚ ಹಸಿರು ಆಗುವುದಕ್ಕೆ ಶ್ರೀ ಸರ್ ಮಿರ್ಜಾ ಇಸ್ಮಾಯಲ್‌ರವರು ಕಾರಣರಾಗಿದ್ದಾರೆ. ಅಂತಹ ಒಂದು legacy ಇರುವಂತಹ House ನಲ್ಲಿ  ತಾವುಗಳು ಬಂದು ಈ ಸ್ಥಾನಮಾನಗಳನ್ನು ಅಲಂಕರಿಸಿರುವುದು ಬಹಳ ಸಂತೋಷ. ಏಕೆಂದರೆ, ನಾನು 2nd ಪಿಯುಸಿಯಲ್ಲಿ ಇರುವಾಗ, NSUI (National Students' Union of India) ನಲ್ಲಿ Joint Secretary post ಗೆ  ನಿಂತಿದ್ದೆ. ಆಗ ಡಾ॥ ಉಮಾಶ್ರೀಯವರು ಅಧ್ಯಕ್ಷರು ಆಗಿದ್ದರು. ನಾನು ಅವತ್ತಿನ ದಿವಸಗಳಿಂದ ಅವರನ್ನು ನೋಡಿದ್ದೇನೆ. ನಾನು ಅವರನ್ನು ಸಣ್ಣ ವಯಸ್ಸಿನಿಂದ ನೋಡಿದ್ದೇನೆ. ನಾನು ಅವರನ್ನು ಚಲನ ಚಿತ್ರಗಳಲ್ಲಿ ನೋಡಿದ್ದೆ. ನಾನು Journalist ಆಗಿ ಇರುವಾಗ ಅವರು ಎಂ.ಎ. ವ್ಯಾಸಂಗ ಮಾಡುವುದಕ್ಕೆ Karnataka State Open University ಗೆ ಬರುತ್ತಿದ್ದರು. ಆಗ ನನಗೆ ಯಾರೋ ಕಾಲೇಜಿಗೆ ಡಾ॥ ಉಮಾಶ್ರೀರವರು ಬರುತ್ತಾರೆ, ಅದಕ್ಕೆ ಎಲ್ಲರೂ ಹೋಗಿ ನೋಡುತ್ತಿದ್ದಾರೆಂದು ಹೇಳಿದರು. ಆಗ ಅವರು ಒಂದು ದಿವಸ, ಎರಡು ದಿವಸ ಕಾಲೇಜಿಗೆ ಬಂದು class ಗೆ bunk  ಏನಾದರೂ ಹೊಡೆದರೆ, class ಗೆ ಒಂದು ಒಳ್ಳೆಯ ಕಥೆ ಸಿಗುತ್ತದೆ ಎಂದು  ಪ್ರತಿದಿವಸ ಹೋಗಿ ನೋಡುತ್ತಿದ್ದೆ. ಅವರು ಪ್ರತಿದಿವಸ Kinetic Honda ದಲ್ಲಿ ಕಾಲೇಜಿಗೆ ಬರುತ್ತಿದ್ದರು. ಅವರು ಎಲ್ಲರ ತರಹ ಸಾಮಾನ್ಯವಾಗಿ ಕಾಲೇಜಿನಲ್ಲಿ ಬೇರೆತು ಹೋಗುತ್ತಿದ್ದನ್ನು ನಾನು ನೋಡಿದ್ದೇನೆ. ಅಕಸ್ಮಾತ್ ಏನಾದರೂ ಅವರು first day class ಗೆ ಬಂದು second day bunk ಏನಾದರೂ ಹೊಡೆದಿದ್ದರೆ, ಅವರಿಗೆ ಒಂದು ಒಳ್ಳೆಯ ಕಥೆಯನ್ನು ಬರೆದು front page ನಲ್ಲಿ ಕಳುಸುತ್ತಿದ್ದೆ.  ಆದರೆ, ಅವರು ಬಹಳ ಗಂಭೀರವಾಗಿ ಅದನ್ನು ತೆಗೆದುಕೊಂಡರು. ನಾನು ಇದನ್ನು ಏಕೆ  ಹೇಳುತ್ತಿದ್ದೇನೆಂದರೆ, ಜೀವನ ಈ ಮಟ್ಟಕ್ಕೆ ಬರುವುದಕ್ಕೆ ಬಹಳ ಕಷ್ಟ. ಎಷ್ಟು ತಲೆದಿಬ್ಬುಗಳು ಒದ್ದೆಯಾಗಿವೆಯೋ ಗೊತ್ತಿಲ್ಲ. ಆ ಒದ್ದೆಯಾಗಿರುವಂತಹ ತಲೆದಿಬ್ಬುಗಳಿಗೆ, ಆ ನೋವಿಗೆ  ಇವತ್ತು ಅಂತಹ ಸ್ಥಾನಮಾನಗಳು ಅದಕ್ಕೆ ಕಾವು ಕೊಡಲಿ ಎಂದು ಹಾಗೂ ಅದು ಎಲ್ಲೋ ಒಂದು ಕಡೆ ಅವರಿಗೆ ನೈತಿಕವಾಗಿ ಇನ್ನಷ್ಟು ಬಲಗೊಳ್ಳಲಿ ಎಂದು ಆಶಿಸುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಅವರನ್ನು ನೋಡಿದ್ದೇನೆ. ನಾನು ದೆಹಲಿಗೆ ಹೋದ ಸಂದರ್ಭದಲ್ಲಿ ಒಂದು glass door  ಅನ್ನು ತೆಗೆದೆ. ಆಗ ಆ glass door sudden ನ್ನಾಗಿ ಬಂದು ನನ್ನ ಕಣ್ಣಿಗೆ ಹೊಡೆದು ಗಾಯವಾಗಿ ಕಣ್ಣಿನ ಬಳಿ ಕಟ್ ಆಯಿತು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಐವನ್

ಡಿ'ಸೋಜಾರವರು ಹಾಗೂ ಡಾ। ಉಮಾಶ್ರೀಯವರು ಇದ್ದರು. ನಂತರ ಮಾನ್ಯ ಸದಸ್ಯರಾದ ಶೀ ರಮೇಶ್ ಬಾಬುರವರ ಜೊತೆಯಲ್ಲಿ ಆಸ್ಪತ್ರೆಗೆ ಹೋಗಿ treatment ಮಾಡಿಸಿಕೊಂಡೆ. ನಾನು ಆಸ್ಪತ್ರೆಯಿಂದ ಬಂದು ಬಾಗಿಲನ್ನು ತೆಗೆದುಕೊಂಡು ಮಲಗಿದ್ದೆ. ಆ ಸಂದರ್ಭದಲ್ಲಿ ಅವರು ಬಂದು ನನ್ನನ್ನು ಗಾಯ ಹೇಗಿದೆ, ನೋವು ಇದೆಯೇ ಎಂದೆಲ್ಲಾ ವಿಚಾರಿಸಿದರು. ಆಗ ನಿಜವಾಗಲೂ ಒಬ್ಬ ತಾಯಿ ಸ್ಥಾನದಲ್ಲಿದ್ದು ಒಬ್ಬ ಮಗನನ್ನು ಯಾವ ರೀತಿ ನೋಡಿಕೊಳ್ಳುವ ತರಹದ ಅನುಭವ ನನಗೆ ಆಯಿತು. ಒಂದು ದಿವಸ ಅವರ ಮಗನಿಗೆ ಬಟ್ಟೆ ತೆಗೆಯಬೇಕಾಗಿತ್ತು. ಆ ಸಂದರ್ಭದಲ್ಲಿ ಅವರು ಆ ಷರಟುಗಳ ಒಂದೊಂದೇ ಪೋಟೋವನ್ನು ತೆಗೆಸಿ ಆಯ್ಕೆ ಮಾಡುತ್ತಿದ್ದರು. ಆಗ ನಾನು ಅವರನ್ನು ಎಂತಹ ಒಂದು multi-dimensional personality ಎಂದು ಅಂದುಕೊಂಡಿದ್ದೆ. ನನಗೆ ನೋಡಿದರೆ ಆ ರೀತಿ ವಿಚಾರಿಸಿದರು. ಅವರ ಮಕ್ಕಳಿಗೆ ಈ ರೀತಿ ಮಾಡುತ್ತಿದ್ದಾರೆಂದು ಅನಿಸಿತು. ಅವರು House ಗೆ ಬಂದರೂ ಅಷ್ಟೇ ಬಹಳ ಗಂಭೀರವಾಗಿ ಕುಳಿತುಕೊಂಡು ವಿಚಾರಗಳನ್ನು ಆಲಿಸುತ್ತಿರುತ್ತಾರೆ. ಇದರಿಂದ ನನಗೆ ಬಹಳ ಸಂತೋಷವಾಗುತ್ತಿದೆ. ಅವರಿಗೆ ಇನ್ನು ಹೆಚ್ಚಿನ ಸ್ಥಾನಮಾನಗಳು ಸಿಗಲಿ ಎಂದು ಹಾರೈಸುತ್ತೇನೆ. ಅವರು ಪೀಠದಲ್ಲಿ ಕುಳಿತುಕೊಂಡಾಗ ಸ್ವಲ್ಪ ಕಾಯಕ ಸಮಾಜಗಳು, ದಮನಿತರು, ದಲಿತರು ಮತ್ತು ಮಹಿಳೆಯರ ಬಗ್ಗೆ ವಿಚಾರಗಳು ಚರ್ಚೆಗೆ ಬಂದಾಗ ಸ್ವಲ್ಪ ಹೆಚ್ಚಿಗೆ ಸಮಯವನ್ನು ಕೊಡಲಿ ಎಂದು ನಾನು ಅವರಲ್ಲಿ ಮನವಿ ಮಾಡಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಶ್ರೀ ಸಲೀಂ ಅಹ್ಮದ್‌ರವರು ಮಾನ್ಯ ಸಭಾಪತಿಗಳಾದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿರಲಿಲ್ಲ. ಅದಕ್ಕೆ ತಮಗೂ ಸೇರಿಸಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ಅವತ್ತು ಮಾತನಾಡುವುದಕ್ಕೆ ಆಗಿರಲಿಲ್ಲ. ತಾವು ಬಹಳ ಸಣ್ಣ ವಯಸ್ಸಿಗೆ ಬಹಳಷ್ಟು ಸ್ಥಾನಮಾನಗಳನ್ನು ಪಡೆದುಕೊಂಡು ಇಲ್ಲಿಯವರೆಗೂ ಬಂದಿದ್ದೀರಿ. ನನಗೆ ಇದರಿಂದ ಬಹಳ ಸಂತೋಷವಾಗಿದೆ. ಈಗ ಸದನದಲ್ಲಿ ಮಾನ್ಯ ಸದಸ್ಯರಾದ ಎಸ್.ಎಲ್.ಭೋಜೇಗೌಡರವರು ಇಲ್ಲ. ಈಗ ಮೇಲ್ಮನೆಯಲ್ಲಿ ಒಬ್ಬರು outstanding Artist, ಒಳ್ಳೆಯ ಕಲಾವಿದೆ. ಇನ್ನೊಬ್ಬರು outstanding Singer. ನಮ್ಮ ಮಾನ್ಯ ಸಭಾಪತಿಗಳಾದ ಶ್ರೀ ಸಲೀಂ ಅಹ್ಮದ್‌ರವರು ಒಳ್ಳೆಯ Singer. ಅದು ಅವರು bathroom Singer ಅಲ್ಲ. ಅವರು stage Singer. ಅವರ favourite song "ಚಲಿಸುವ ಮೋಡಗಳು" ಚಲನ ಚಿತ್ರದ ಹಾಡನ್ನು ಹಾಡಲು ಪ್ರಾರಂಭ ಮಾಡಿದರೆ, ಈಗ ಎಲ್ಲರೂ ತಾಳ ಹಾಕುವುದಕ್ಕೆ ಪ್ರಾರಂಭ ಮಾಡುತ್ತೀರಿ. ಅವರು ಅ ಮಟ್ಟಕ್ಕೆ ಡಾ॥ ರಾಜ್‌ಕುಮಾರ್‌ರವರ ಅಭಿಮಾನಿಯಾಗಿದ್ದಾರೆ. ನಾನು ಸಹ ಡಾ॥ ರಾಜ್‌ಕುಮಾರ್‌ರವರ ಅಭಿಮಾನಿ. ಆದರೆ, ಮಾನ್ಯ ಸಭಾಪತಿಗಳು ಅಂತಹ ಒಂದು ಒಳ್ಳೆಯ singer. ಮಾನ್ಯ ಸದಸ್ಯರಾದ ಎಸ್.ಎಲ್.ಭೋಜೇಗೌಡರವರಿಗೆ ಮುಂದೆ ಏನಾದರೂ

competition ಇದ್ದರೆ, ಆ competition ನಲ್ಲಿ defeat ಮಾಡುವುದಕ್ಕೆ ನಮ್ಮ ಬಳಿ ಒಳ್ಳೆಯ ಸಭಾಪತಿಯವರು ಇದ್ದಾರೆ. ಹಾಗಾಗಿ, ಮುಂದಿನ ದಿವಸಗಳಲ್ಲಿ ಶಾಸಕರ ದಿನಾಚರಣೆಯಲ್ಲಿ ಅಂತಹ ಅವಕಾಶಗಳು ಸಿಕ್ಕಾಗ ಅವರಿಂದ ಹಾಡನ್ನು ಹೇಳಿಸಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ಶಿವಕುಮಾರ್‌ರವರೇ, ಒಂದು ನಿಮಿಷ. ನಾನು ಅದರಲ್ಲೂ ಡಾ॥ ರಾಜ್‌ಕುಮಾರ್‌ರವರ ಅಭಿಮಾನಿ. ಡಾ॥ ರಾಜ್‌ಕುಮಾರ್‌ರವರ "ಚಲಿಸುವ ಮೋಡಗಳು" ಚಲನ ಚಿತ್ರದ "ಜೇನಿನ ಹೊಳೆಯೋ, ಹಾಲಿನ ಮಳೆಯೋ" ನನ್ನ ಒಂದು ಅತ್ಯುತ್ತಮ ಹಾಡು.

**ಶ್ರೀ ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಅಂತಹ ಒಂದು ಜೇನು ಮತ್ತು ಹಾಲಿನ ಹೊಳೆ ಇಲ್ಲಿ ಹರಿಯುತ್ತಿದೆ. ಏಕೆಂದರೆ, ತಮ್ಮ ಮತ್ತು ಉಪ ಸಭಾಪತಿಯವರ combination ಆ ಜೇನು ಮತ್ತು ಹಾಲಿನ ತರಹ ಇರಲಿ. ಹಾಗಾಗಿ, ಈ ಸದನಕ್ಕೆ ಇನ್ನಷ್ಟು ಮೆರಗು ಸಿಗಲಿ. ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರ ಸಹಕಾರ ತಮಗೆ ಇರಲಿ ಎಂದು ನಾನು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಬಿ.ಎಸ್.ಶಿವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನಕ್ಕೆ ತಾವಿಬ್ಬರೂ ಸಹ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಂತಹವರಾಗಿದ್ದೀರಿ. ಮಾನ್ಯ ಸಭಾಪತಿಗಳಾದ ತಮ್ಮ ತಂದೆಯವರು ಸಹ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅದೇರೀತಿ ಮಾನ್ಯ ಉಪ ಸಭಾಪತಿಯವರ ತಂದೆಯವರು ಸಹ ಅಪ್ಪಟ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಈ ಸದನದ ಸಭಾಪತಿ ಮತ್ತು ಉಪ ಸಭಾತಿಯವರನ್ನಾಗಿ ನೇಮಿಸುವ ಮೂಲಕ ಪ್ರಜಾಪ್ರಭುತ್ವದ ಒಂದು ಆಶಯಕ್ಕೆ ಒಂದು ಅಡಿಪಾಯವನ್ನು ಹಾಕಿದ್ದಾರೆ. ನಾನು ನೋಡುತ್ತಿದ್ದೆ. ಶಾಸಕಾಂಗ, ಕಾರ್ಯಾಂಗ ಹಾಗೂ ಪತ್ರಿಕಾರಂಗ ಈ ಮೂರರಲ್ಲಿಯೂ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಮಾನ್ಯ ದಿವಂಗತ ಶ್ರೀ ರಾಜೀವ್ ಗಾಂಧಿಯವರು ತಂದಂತಹ ಪಂಚಾಯತ್‌ರಾಜ್ ತಿದ್ದುಪಡಿ ಪ್ರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅಧಿಕಾರ ಕೇಂದ್ರೀಕರಣವಾಗಿದೆ. ಶೇಕಡಾ 33% ರಷ್ಟು ಮೀಸಲಾತಿಯನ್ನು ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ದಿವಂಗತ ಶ್ರೀ ರಾಜೀವ್ ಗಾಂಧಿಯವರು ಮೀಸಲಾತಿಯನ್ನು ಕೊಡುವುದರ ಮೂಲಕ Corporation, ನಗರ ಪಾಲಿಕೆ, ನಗರಸಭೆ, ಪುರಸಭೆ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ 33% ಮೀಸಲಾತಿಯನ್ನು ಮಹಿಳೆಯರಿಗೆ ಕೊಟ್ಟಿದ್ದಾರೆ. ಅದೇರೀತಿ ವಿಧಾನಸಭೆ, ವಿಧಾನ ಪರಿಷತ್ತು, ರಾಜ್ಯ ಸಭೆ ಮತ್ತು ಲೋಕಸಭೆಗಳಲ್ಲಿ ಶೇಕಡಾ 50% ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ

ನೀಡುವುದರ ಮೂಲಕ ಪ್ರಜಾಪ್ರಭುತ್ವದ ಆಧಾರ ಸ್ಥಂಬ್ಧಗಳನ್ನು ಗಟ್ಟಿಗೊಳಸಬೇಕಾಗಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿಯೂ ಸಹ ಮಂಡಲ್ ಆಯೋಗದ ವರದಿಯ ಪ್ರಕಾರ ಮಾನ್ಯ ವಿ.ಪಿ.ಸಿಂಗ್‌ರವರು ಜಾರಿಗೆ ತಂದಂತಹ ಮಂಡಲ್ ಆಯೋಗ ವರದಿಯಿಂದ ಶೇಕಡಾ 27% ರಷ್ಟು ಮೀಸಲಾತಿ ಇದೆ. ಅದನ್ನು 74% ಕ್ಕೆ ಹೆಚ್ಚಿಸುವ ಮೂಲಕ ಬಹುಜನರ ಸಮಾಜವನ್ನು ಗೌರವಿಸಬೇಕಾಗಿದೆ. ಮಾನ್ಯ ಉಪ ಸಭಾಪತಿಗಳಾದ ಡಾ॥ ಉಮಾಶ್ರೀಯವರು 'ಬೆಂಕಿಯಲ್ಲಿ ಅರಳಿದ ಹೂವು' ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಗಳಾದ ತಾವು ಸಹ 'ಬೆಂಕಿಯಲ್ಲಿ ಅರಳಿದ ಹೂವು' ಆಗಿದ್ದೀರಿ. ತಾವಿಬ್ಬರೂ ಸಹ ಈ ಸದನದ ಮಾನ್ಯ ಸಭಾಪತಿ ಮತ್ತು ಮಾನ್ಯ ಉಪ ಸಭಾಪತಿಗಳಾಗಿರುವುದು ಬಹಳ ಸಂತೋಷವಾಗಿದೆ. ಡಾ॥ ಉಮಾಶ್ರೀಯವರು ಅವಿರೋಧವಾಗಿ ಆಯ್ಕೆಯಾದರು. ಮಾನ್ಯ ಸಭಾಪತಿಗಳಾದ ತಾವು ಸಹ ಅವಿರೋಧವಾಗಿ ಆಯ್ಕೆಯಾಗಿದ್ದರೆ ನಾನು ಬಹಳ ಸಂತೋಷ ಪಡುತ್ತಿದ್ದೆ. ನಾನು ಶ್ರೀ ಅಬ್ದುಲ್ ನಜೀರ್‌ಸಾಬ್‌ರವರನ್ನು ನೆನೆಸಿಕೊಳ್ಳುತ್ತೇನೆ. ಏಕೆಂದರೆ, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಇವತ್ತಿಗೂ ಸಹ 'ನೀರು ಸಾಬ್' ಎಂದು ತನ್ನದೇ ಆದಂತಹ ಛಾಪವನ್ನು ಮೂಡಿಸಿ ಕರ್ನಾಟಕದ ರಾಜ್ಯ ಎಲ್ಲಾ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ಅದೇರೀತಿ ಮಾನ್ಯ ಸಭಾಪತಿಗಳಾದ ತಾವು ಸಹ ಶ್ರೀ ನಜೀರ್‌ಸಾಬ್‌ರವರು ಆಗಬೇಕು. ಈ ರಾಜ್ಯದ ವಿಧಾನ ಪರಿಷತ್ತಿನ ಸಭಾ ನಡವಳಿಕೆಗಳನ್ನು ಅತ್ಯಂತ ಘನತೆಯಿಂದ, ಅತ್ಯಂತ ಪ್ರಬುದ್ಧತೆಯಿಂದ ಈ ರಾಷ್ಟ್ರಕ್ಕೆ ಮಾದರಿಯಾಗುವಂತಹ ಒಂದು ಸದನವನ್ನಾಗಿ ರೂಪಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಉಪ ಸಭಾಪತಿಗಳಾಗಿ ಆಯ್ಕೆಯಾದಂತಹ ಡಾ॥ ಉಮಾಶ್ರೀಯವರ ಬಗ್ಗೆ ನನಗೆ ಬಹಳಷ್ಟು ಸಂತೋಷವಾಗಿದೆ. ಕಳೆದ 35 ವರ್ಷಗಳಿಂದ ಅವರ ಅಭಿನಯದ ಅನೇಕ ಚಿತ್ರಗಳನ್ನು ನೋಡಿದಂತವರಲ್ಲಿ ನಾನು ಸಹ ಒಬ್ಬನಾಗಿದ್ದೇನೆ. ಅವರು ಬಹುಮುಖ ಪ್ರತಿಭೆಯ ತಾರೆಯಾಗಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಅವರು ನಾಟಕಗಳಲ್ಲಿ ಅಭಿನಯಿಸುತ್ತಾ 470 ಕ್ಕಿಂತ ಹೆಚ್ಚು ಆಗಾದವಾದಂತಹ ಈ ವರದಿಯನ್ನು ನೋಡಿದಾಗ ನಿಜವಾಗಲೂ ಸಹ ಯಾರಿಗಾದರೂ ಆಶ್ಚಯತರುವಂತಹದ್ದಾಗಿದೆ. ಆಗಿನ ಕಾಲದಲ್ಲಿ ಡಾ॥ ರಾಜ್‌ಕುಮಾರ್‌ರವರ 100ನೇ ಚಲನಚಿತ್ರವಾದ 'ಬಂಗಾರದ ಮನುಷ್ಯ' ಚಿತ್ರವನ್ನು ನಾವು ಹುಚ್ಚೆಂದು

ನೋಡುತ್ತಿದ್ದೇವು. ಡಾ॥ ರಾಜ್‌ಕುಮಾರ್‌ರವರ ಚಲನ ಚಿತ್ರಗಳ ಸಾಲಿನಲ್ಲಿ ಡಾ॥ ಉಮಾಶ್ರೀಯವರು ಇನ್ನು ಬೆಳಕಾಗಿ ಬೆಳಗಿದಂತಹವರಾಗಿದ್ದಾರೆ.

(ಮುಂದು)

**(742) 18.08.2026/12.30/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಹೆಚ್. ಪೂಜಾರ್ (ಮುಂದು):-**

ಯಕ್ಷಗಾನ, ಚಲನಚಿತ್ರ, ದೂರದರ್ಶನ, ಕಿರುತೆರೆ ಈ ರೀತಿ ಒಂದಲ್ಲ ಎರಡಲ್ಲ. ಅವರು ರಂಗಭೂಮಿಯಲ್ಲೂ ಕೂಡ ಪಳಗಿ ನಿಷ್ಠಾವಂತರಾಗಿ ಪ್ರತಿಯೊಂದು ಪಾತ್ರಕ್ಕೂ ಜೀವಂತಿಕೆಯನ್ನು ತುಂಬಿದಂತಹವರು. ಅವರು ಯಾವುದೇ ಪಾತ್ರದಲ್ಲೂ ಕಾಣಿಸಿಕೊಂಡರೂ ಕೂಡ ಕೇವಲ ಹಾಸ್ಯವೆಂದು ಮಾತನಾಡುವಂಥದ್ದು ಅಲ್ಲ. ನಾವು ಅವರನ್ನು ಬಹಳಷ್ಟು ಹಾಸ್ಯ ಚಲನಚಿತ್ರಗಳಲ್ಲಿ ಕಂಡಿದ್ದರೂ ಕೂಡ ಅವರು ಗಂಭೀರವಾದಂತಹ ಅನೇಕ ಚಿತ್ರಗಳಲ್ಲಿ ನಮ್ಮ ಕಣ್ಣಿನಲ್ಲಿ ನೀರು ಬರುವ ರೀತಿ ಅಭಿನಯಿಸಿರುವುದನ್ನು ನೋಡಿದರೆ, ಆ ಸಂದರ್ಭದಲ್ಲಿ ಸಾಕ್ಷಾತ್ ಅಭಿನಯ ಶಾರದೆಯನ್ನು ನೋಡಿದಂತೆ ಆಗುತ್ತದೆ. ಅವರಿಗೆ ಹತ್ತು ಹಲವಾರು ಪ್ರಶಸ್ತಿಗಳು ಬಂದಿರಬಹುದು. ಇನ್ನು ಯಾವ್ಯಾವು ಪ್ರಶಸ್ತಿಗಳು ಉಳಿದಿವೆ ಅವುಗಳೆಲ್ಲಾ ಅವರಿಗೆ ದೊರಕಲಿ. ಅವರು ನಮ್ಮ ಜಿಲ್ಲೆಯ ಶಾಸಕರಾಗಿ ಆಯ್ಕೆಯಾಗಿದ್ದರು. ನಾವು ಅವರನ್ನು ದೂರದಿಂದ ನೋಡುವಂತಹ ಅವಕಾಶ ಸಿಗುತ್ತಿತ್ತು. ಬಾಗಲಕೋಟೆ ಜಿಲ್ಲೆಯ ತೇರದಾಳ ಮತಕ್ಷೇತ್ರದಲ್ಲಿ ಶಾಸಕರಾಗಿ ಅವರು ಮಂತ್ರಿಗಳಾದಂತಹ ಸಂದರ್ಭದಲ್ಲಿ ಸಮೀಪದಿಂದ ಅವರ ಒಡನಾಟ ನನಗೂ ಕೂಡ ಸಿಕ್ಕಿತ್ತು. ಅವರು ಆರಿಸಿ ಬಂದಂತಹ ಮತಕ್ಷೇತ್ರ ನೇಕಾರರ ಪ್ರದೇಶವಾಗಿದೆ. ರಬಕವಿ, ಬನಹಟ್ಟಿ ಮತ್ತು ತೇರದಾಳ ಅಲ್ಲಿ ತುಂಬಾ ಕಡೆಗಳಲ್ಲಿ ನೇಕಾರರೇ ಇರುವಂಥದ್ದು. ನೇಕಾರರು ಎಂದರೆ, ಬಟ್ಟೆ ಇರಲಾರದಂತಹವರು. ಎಲ್ಲರೂ ಬಡತನದ ಬಗ್ಗೆ ಅತ್ಯಂತ ವರ್ಣನೆ ಮಾಡಿದ್ದಾರೆ. ಇವರೆಲ್ಲರಿಗಿಂತ ನೂರುಪಟ್ಟು ಬಡತನದಲ್ಲಿ ಎರಡು ಹೊತ್ತಿನ ಅನ್ನದ ಗಂಜಿ ಸಿಗಲಾರದಂತಹ ಸ್ಥಿತಿಯಲ್ಲಿ ಇರುವಂತಹವರು ಎಂದರೆ, ಅದು ನೇಕಾರರು. ಇವರು ಅವರ ವಿಶ್ವಾಸ ಗಳಿಸಿ, ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯವಾದಂತಹ ಮಾತು. ಇವರು ಅವರಿಗೆ ತೋರುತ್ತಿರುವಂತಹ ಸಂವೇದನೆ, ತೋರುತ್ತಿರುವಂತಹ ಮಮತೆ, ಪ್ರೀತಿ ಅವರ್ಣನೀಯವೆಂದು ನಾನು ಭಾವಿಸುತ್ತೇನೆ. ಅವರು ನಮ್ಮ ತಾಯಿಯಾಗಿ ಇದ್ದಾರೆ ಎನ್ನುವಂತಹ ಭಾವನೆಯ ವಿಚಾರಗಳು ಮತದಾರರಲ್ಲಿ ಜಾಗೃತಿ ಮೂಡಿಸುತ್ತಿತ್ತು. ಅಂತಹ ಒಬ್ಬ ಅಭಿನಯ ಶಾರದೆ ಕೇವಲ ಅಭಿನಯದಲ್ಲಿ ಮಾತ್ರವಲ್ಲ, ಹಾಸ್ಯದ ಚಿತ್ರದಲ್ಲಿ ನಟಿಸುವುದು ಬಹಳ ಕಠಿಣದ ಕೆಲಸ. ವಾಸ್ತವಿಕ ಸ್ಥಿತಿ ವ್ಯಕ್ತಿಗತವಾಗಿ ಎಷ್ಟೇ ದುಃಖವಿದ್ದರೂ ಹೊರಗಡೆ ಸಾರ್ವಜನಿಕವಾಗಿ ಹೊಸದಾಗಿ ಹಾಸ್ಯ ತೋರಿಸಬೇಕು. ಅದು ತುಂಬಾ ಕಷ್ಟದ ಕೆಲಸ. ಅವರು ಅಂತಹವುದರಲ್ಲಿ ಯಶಸ್ಸು ಕಂಡಂತಹವರು. ತಮ್ಮ ಜೀವನದಲ್ಲಿ ಯಶಸ್ಸು ಕಂಡಂತಹವರು. ಸಹೃದಯತೆಯಿಂದ ಎಲ್ಲರನ್ನು ಸಮದರ್ಶಿಯಾಗಿ ನೋಡುತ್ತಾ ಬಂದಂತಹವರು. ಅವರು ಈ ಸದನದ ಉಪ ಸಭಾಪತಿಯಾಗಿ ಆಯ್ಕೆಯಾಗಿರುವಂಥದ್ದು ನಮ್ಮ ಜಿಲ್ಲೆಯವರು

ಎಂದು ಹೇಳುವಂಥದ್ದಕ್ಕೆ ಹೆಮ್ಮೆ ಎನಿಸುತ್ತದೆ. ಅವರು ದೂರದಿಂದ ಬಂದು ಅಲ್ಲಿ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದರು. ಆ ರೀತಿಯ ಅವಕಾಶಗಳು ಬಹಳ ಜನರಿಗೆ ಸಿಗುವುದಿಲ್ಲ. ಅವರು ಸಮದರ್ಶಿಯಾಗಿ ಎಲ್ಲರನ್ನು ಸರಿಯಾಗಿ ನೋಡಿಕೊಳ್ಳುವಂತಹ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಅದಕ್ಕೆ ನಾನು ಅವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸುತ್ತೇನೆ. ಅವರ ಬದುಕು ಇನ್ನಷ್ಟು ಸುಂದರವಾಗಲಿ ಮತ್ತು ಇನಷ್ಟು ಜನರಿಗೆ ಮಾದರಿಯಾಗಲಿ ಎನ್ನುವಂಥದ್ದು ಆಗಲಿ ಎಂದು ಅವರಿಗೆ ಶುಭಾಶಯ ಕೋರಿ, ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಸಭಾಪತಿಗಳಾಗಿ ನಮ್ಮ ಸಹೋದರಿ ಡಾ: ಉಮಾಶ್ರೀಯವರು ಉಪ ಸಭಾಪತಿಗಳಾಗಿರುವುದಕ್ಕೆ ಈ ಸದನದ ಮೂಲಕ ಮತ್ತು ಕರ್ನಾಟಕ ರಾಜ್ಯದ ಮೂಲಕ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ನಾನು ಸಭಾಪತಿಯವರಿಗೆ ಅಭಿನಂದನೆ ಸಲ್ಲಿಸಬೇಕು ಎನ್ನುವ ಸಂದರ್ಭದಲ್ಲಿ ನನ್ನ ಹೆಸರನ್ನು ಕೊನೆಗೆ ಕೂಗುತ್ತಾರೆಂದುಕೊಂಡಿದ್ದೆ. ಆದರೆ, ತಾವು ನನ್ನ ಹೆಸರನ್ನು ಕರೆಯಲಿಲ್ಲ. ಈಗ ನಾನು ಇಬ್ಬರ ಬಗ್ಗೆಯೂ ಮಾತನಾಡಿ, ನನ್ನ ಮಾತನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ತಾವು ಬೆಲ್ ಹೊಡೆಯುವುದು ಬೇಡ.

**ಸಭಾಪತಿಯವರು:-** ಆಯಿತು, ತಾವು ಐದು ನಿಮಿಷ ಮಾತನಾಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಸಹೋದರಿ ಡಾ: ಉಮಾಶ್ರೀ "ಕರ್ನಾಟಕ ರಾಜ್ಯದ ಹೆಮ್ಮೆಯ ಪುತ್ರಿ." ಬಹುಶಃ ಡಾ: ಉಮಾಶ್ರೀಯವರನ್ನು ನೋಡಿದರೆ, ನನಗೆ 'ಮದರ್ ತೇರೆಸಾ' ರವರ ಹೆಸರು ನೆನಪಿಗೆ ಬರುತ್ತದೆ. ಅದೇ ರೀತಿ "ಗಂಗೂಬಾಯಿ ಹಾನಗಲ್" ರವರ ಪ್ರತಿಭೆ ನೆನಪಿಗೆ ಬರುತ್ತದೆ. ಅವರು ಯಾವ ರೀತಿ ಸಾಧನೆ ಮಾಡಿದ್ದರು, ಅದೇ ಮಾದರಿಯಲ್ಲಿ ನಮ್ಮ ಸಹೋದರಿ ಡಾ: ಉಮಾಶ್ರೀಯವರು ಉತ್ತಮವಾದಂತಹ ಕೆಲಸಗಳನ್ನು ಮಾಡಿ, ಈ ನಾಡು ಎಂದೂ ಮರೆಯಲಾರದಂತಹ ರೀತಿಯಲ್ಲಿ ತಮ್ಮ ಹೆಸರನ್ನು ಇತಿಹಾಸದಲ್ಲಿ ದಾಖಲೆಯಾಗುವಂತಹ ರೀತಿಯಲ್ಲಿ ಎಲ್ಲಾ ಪ್ರತಿಭೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರಲ್ಲಿ ಇರುವ ಒಂದು ವಿಶೇಷ ಗುಣವೇನೆಂದರೆ, ಯಾರಾದರೂ ಕಷ್ಟದಲ್ಲಿ ಇದ್ದರೆ, ಅವರ ಕಣ್ಣೀರು ಒರೆಸುವಂತಹ ಕೆಲಸವನ್ನು ಸಹೋದರಿ ಡಾ: ಉಮಾಶ್ರೀ ಬಹಳ ಪ್ರಾಮಾಣಿಕವಾಗಿ ಮಾಡಿದ್ದಾರೆ. ಬಹಳಷ್ಟು ನಾಟಕ ಕಂಪನಿಗಳು ಕಷ್ಟದಲ್ಲಿ ಇರುವುದನ್ನು ಹೇಳಿದಾಗ, ಅವರು ಸ್ವಇಚ್ಛೆಯಿಂದ ಹೋಗಿ ಆ ಥಿಯೇಟರ್‌ನಲ್ಲಿ ಭಾಗವಹಿಸಿ, ತನ್ನ ಸ್ವಂತ ಖರ್ಚಿನಲ್ಲಿ ಪಾತ್ರ ಮಾಡಿ, ಅವರಿಗೆ ಶಕ್ತಿ ತುಂಬಿ ಅವರ ನಾಟಕಗಳಿಗೆ ಪುನರ್ಜನ್ಮ ಕೊಡತಕ್ಕಂತಹ ಕೆಲಸ ಮಾಡಿದವರು ಕರ್ನಾಟಕ ರಾಜ್ಯದಲ್ಲಿ ಯಾರಾದರೂ ಕಲಾವಿದರು ಇದ್ದಾರೆಂದರೆ, ಅದು ನಮ್ಮ ಸಹೋದರಿ ಡಾ: ಉಮಾಶ್ರೀಯವರು. ಈಗಾಗಲೇ ಈ ಸದನದ ಸಭಾನಾಯಕರು ಮತ್ತೆ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ಇನ್ನಿತರೆ ಅನುಭವಿಗಳು ಅವರ ಬಗ್ಗೆ ಬಹಳಷ್ಟು

ಮಾತುಗಳನ್ನು ಹೇಳಿದ್ದಾರೆ. ನಾನು ಹೇಳುವುದು ಏನೆಂದರೆ, ಅವರು ಸಾಧಕಿಯರ ಹೆಸರಿನಲ್ಲಿ ಮೊದಲನೆಯ ಹೆಸರನ್ನು ಪಡೆದುಕೊಂಡಿದ್ದಾರೆ. ಅವರು ಕಷ್ಟದಲ್ಲಿ ಇದ್ದಂತಹವರ ಕಣ್ಣೀರು ಒರೆಸಿದ್ದಾರೆ. ಅವರಿಗೆ ಸುಮಾರು 30 ವರ್ಷಗಳ ರಾಜಕೀಯ ಅನುಭವ ಮತ್ತೆ ಅಂತರರಾಷ್ಟ್ರೀಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು, ಫಿಲ್ಮಫೇರ್ ಪ್ರಶಸ್ತಿಗಳು, ನಾಟಕಗಳು, ಯಕ್ಷಗಾನ, ಚಲನಚಿತ್ರ, ದೂರದರ್ಶನ ಈ ರೀತಿ ಹತ್ತು ಹಲವಾರುಗಳಲ್ಲಿ ಭಾಗವಹಿಸಿ, ಅವರು ಈ ನಾಡಿನ ಹೆಮ್ಮೆಯ ಪುತ್ರಿ ಎನಿಸಿಕೊಂಡಿದ್ದಾರೆ. ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ನಮಗೆ ಒಂದು ಬಾರಿ ಅವರ ನಾಟಕದ ಒಂದು ಪಾತ್ರವನ್ನು ನೋಡುವಂತಹ ಅವಕಾಶ ಒದಗಿ ಬಂದಿತ್ತು. ಅವರು ನಮ್ಮನ್ನು ಕಲಾಮಂದಿರಕ್ಕೆ ಕರೆದಿದ್ದರು. ಈಗ ನಾಟಕ ಎಂದರೆ, ಅಲ್ಲಿ ಹತ್ತಾರು ಮಂದಿ ಪಾತ್ರದಾರಿಗಳು ಇರುತ್ತಾರೆ. ಎಲ್ಲರನ್ನು ನೋಡಬೇಕೆಂದು ನಾವು ಅಲ್ಲಿಗೆ ಹೋದಾಗ, ಆ ನಾಟಕದಲ್ಲಿ ಪೂರ್ತಿ ಡಾ: ಉಮಾಶ್ರೀ ಒಬ್ಬರೇ ಅಭಿನಯ ಮಾಡಿದ್ದರು. ನಾವು ಅವರು ನಾಟಕ ಮಾಡುವ ಸಂದರ್ಭವನ್ನು ನೋಡಿದರೆ, ಆ ಚೈತನ್ಯವೇ ಬೇರೆ ಇದೆ. ಆಗ ಅವರಿಗೆ ಬೇರೆ ಶಕ್ತಿಯೇ ಬಂದು ಬಿಡುತ್ತದೆ. ಅವರು 16 ವರ್ಷ ವಯಸ್ಸಿನ ಹುಡುಗಿ ಕುಣಿದಂತೆ ಇರುತ್ತದೆ. ಅವರು ಆ ರೀತಿಯ ಪಾತ್ರವನ್ನು ಮಾಡಿ, ನಮ್ಮೆಲ್ಲರಿಗೂ ಬೆರಗುಗೊಳಿಸಿದರು. ಈಗ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇದ್ದಾರೆ. ಅಲ್ಲಿಗೆ ನಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೋಗಿ ಅದರಲ್ಲಿ ಭಾಗವಹಿಸಿದ್ದೆವು. ಅವರಿಗೆ ಬೇರೆಯದೇ ಶಕ್ತಿ ಬಂದುಬಿಡುತ್ತದೆ. ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಗಲೂ ಕೂಡ ಡಾ: ಉಮಾಶ್ರೀಯವರು ಬರುತ್ತಾರೆಂದರೆ, ನೂರಾರು ಸಂಖ್ಯೆಯ ಜನರು ಅವರನ್ನು ಭೇಟಿ ಮತ್ತು ಅವರ ದರ್ಶನ ಮಾಡುವುದಕ್ಕೆ ಹೋಗುತ್ತಾರೆ. ಅಂತಹ ಅದ್ಭುತವಾದಂತಹ ಶಕ್ತಿ ಇರುವಂತಹ ಡಾ: ಉಮಾಶ್ರೀಯವರಿಗೆ ಇವತ್ತಿನ ದಿಸವ ನಮ್ಮ ಸರ್ಕಾರ ಅವರ ಪ್ರತಿಭೆಯನ್ನು ಗುರುತಿಸಿ, ಉಪ ಸಭಾಪತಿ ಸ್ಥಾನ ನೀಡಿದೆ.

ಅದೇ ರೀತಿ ಮಾನ್ಯ ಸಭಾಪತಿಗಳಾದಂತಹ ಶ್ರೀ ಸಲೀಂ ಅಹಮದ್‌ರವರ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಹಿಂದೆ ಶ್ರೀ ಮೊಹಮ್ಮದ್ ಅಲಿ ಎಂದು ಇದ್ದರು. ಅವರ nature ತಮ್ಮ ಹಾಗೆಯೇ ಇತ್ತು. ಅವರ ಕಾಲಕ್ಕೆ ಕಲಬುರಗಿಯಲ್ಲಿ ಕಾಂಗ್ರೆಸ್ ಪಕ್ಷ ಗಟ್ಟಿಯಾಗಿ ನೆಲೆಸಿತ್ತು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಅವರು ಸಾರಿಗೆ ಮಂತ್ರಿಗಳಾಗಿ ಸಾವಿರಾರು ಜನರ ಕಣ್ಣೀರು ಒರೆಸುವಂತಹ ಕೆಲಸವನ್ನು ಮಾಡಿದ್ದರು. ಅದೇ ರೀತಿ ಅವರು ಡಾ: ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ಶ್ರೀ ಧರ್ಮಸಿಂಗ್‌ರವರಿಗೂ ಸಹ ಸ್ಫೂರ್ತಿಧಾಯಕರಾಗಿದ್ದರು. ತಾವು ಅಂತಹ ಒಬ್ಬ ಶ್ರೀ ಮೊಹಮ್ಮದ್ ಅಲಿ ಆಗಬೇಕು. ಅವರಂತಹ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಈ ಸದನದಲ್ಲಿ ಒಬ್ಬರು ಡಾ: ಉಮಾಶ್ರೀ ಮತ್ತು ಮತ್ತೊಬ್ಬರು ಶ್ರೀ ಸಲೀಂ ಅಹಮದ್ ಈ ಇಬ್ಬರೂ ಕೂಡ ಜಾತ್ಯತೀತವಾದಂತಹವರು. ತಮಗೆ ಯಾವುದೇ ಜಾತಿಯೇ ಇಲ್ಲ. ಆ ರೀತಿ ತಾವುಗಳು ಬೆಳೆದಂತಹವರು. ಮುಂದಿನ ದಿನಗಳಲ್ಲಿಯೂ ಕೂಡ ಈ ಸದನಕ್ಕೆ ಉತ್ತಮವಾದಂತಹ ಸಲಹೆ ಸೂಚನೆಗಳನ್ನು

ಕೊಟ್ಟು, ಸರಿ ದಾರಿಗೆ ತೆಗೆದುಕೊಂಡು ಹೋಗುವಂಥದ್ದು ಮತ್ತು ಈ ಬಾರಿ ವಿರೋಧ ಪಕ್ಷಕ್ಕೆ ಕೂಡ ಬಹಳ ಒಳ್ಳೆಯವರು ಬಂದಿದ್ದಾರೆ. ಅವರು ಯಾರೂ ಯಾವುದೇ ರೀತಿಯ ತಕರಾರು ಮಾಡುವಂತಹವರು ಅಲ್ಲ. ಮತ್ತೆ strike ಮಾಡುವಂತಹವರು ಅಲ್ಲ. ಈ ಬಾರಿ ಬಹಳ ಒಳ್ಳೆಯ ಸ್ವಭಾವದವರು ಬಂದಿದ್ದಾರೆ. ಅವರನ್ನೂ ಕೂಡ ಮನವೊಲಿಸಿ ಈ ಸದನ ನಡೆಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತಾ, ಮತ್ತೊಂದು ಬಾರಿ ತಮಗೆ ಮತ್ತು ನಮ್ಮ ಸಹೋದರಿಯಾದಂತಹ ಡಾ: ಉಮಾಶ್ರೀಯವರಿಗೆ ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್. ಎಸ್:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಉಪ ಸಭಾಪತಿಗಳಾಗಿ ಅವಿರೋಧವಾಗಿ ಆಯ್ಕೆಯಾಗಿರುವಂತಹ ಡಾ: ಉಮಾಶ್ರೀಯವರನ್ನು ನಾನು ಅಭಿನಂದಿಸುತ್ತೇನೆ. ನಾನು ಇಲ್ಲಿ ಅವರ ಬಗ್ಗೆ ನೋಡಿದಾಗ, ಅವರಿಗೆ ಒಂದು ಬಾರಿ ಅತ್ಯುತ್ತಮ ನಟಿ ಎಂದು ಇತ್ತು. ಮತ್ತೆ ಆರು ಬಾರಿ ಅತ್ಯುತ್ತಮ ಪೋಷಕ ನಟಿ ಎಂದು ಇತ್ತು. ಅವರು ಒಂದು ಬಾರಿ ಅತ್ಯುತ್ತಮ ನಟಿ, ಆದರೆ ಹಲವಾರು ಬಾರಿ ಅತ್ಯುತ್ತಮ ನಟಿಯಾಗುವುದಕ್ಕೆ ಏಕೆ ಸಿಕ್ಕಿಲ್ಲವೆಂದರೆ ಅವರಿಗೆ lead roles ಸಿಕ್ಕಿಲ್ಲ. ಹಾಗಾಗಿ, ಅವರು ಪೋಷಕ ನಟನೆಯಲ್ಲಿ ಮಿಂಚುವಂತಹ ಅವಕಾಶ ಸಿಕ್ಕಿದೆ ಎಂದುಕೊಳ್ಳುತ್ತೇನೆ. ಈ ಕನ್ನಡ ನಾಡು ಕಂಡಿರುವಂತಹ ಅತ್ಯಂತ ಶ್ರೇಷ್ಠ ಅಭಿನೇತ್ರಿಗಳಲ್ಲಿ ಇವರು ಒಬ್ಬರು. ಈಗ ನನಗೆ 'ರಂಗನಾಯಕಿ' ಚಿತ್ರದ ಗೀತೆ ನೆನಪಾಗುತ್ತದೆ. 'ಕನ್ನಡ ನಾಡಿನ ರಸಿಕರ ಮನವ ಸೂರೆಗೊಂಡ ನಾಯಕಿ' ಎಂದು. ಅದರಲ್ಲಿ ನಾಯಕಿ ಪಾತ್ರವಾದರೆ ಇವರು ತಮ್ಮ ಜೀವನದ ನಾಯಕತ್ವದಲ್ಲಿ ಗೆಲುವು ಸಾಧಿಸಿದ್ದಾರೆ. ಹಾಗಾಗಿ, ನಾವು ಅವರನ್ನು ಅಭಿನಂದಿಸುವಂಥದ್ದು. ನಾನು ನೋಡಿದಂತಹ ನಾಟಕ 'ಒಡಲಾಳದ ಸಾಕವ್ವ'ನ ಪಾತ್ರ ಅದನ್ನು ನೋಡುತ್ತಿರುವಾಗ ನನಗೆ ಕಣ್ಣಿನಲ್ಲಿ ನೀರು ಬರುತ್ತಿತ್ತು. ಅವರು ಹೇಗೆ ಪಾತ್ರಕ್ಕೆ ಪರಕಾಯ ಪ್ರವೇಶ ಮಾಡುತ್ತಾರೆ ಎನ್ನುವಂಥದ್ದು ನೇರ ಅನುಭವವಾದಂತಹ ಸಂದರ್ಭವದು. ಅದೇ ರೀತಿ ಅವರು ಪುಟ್ಟಮಲ್ಲಿ ಪಾತ್ರದಲ್ಲಿಯೂ ಕೂಡ ಆ ವಯಸ್ಸಿಗೆ ಮೀರಿದಂತಹ ಪಾತ್ರದ ಒಳಗೆ ಹೋಗಿ ನೋಡಿರುವಂಥದ್ದು ತುಂಬಾ ದೊಡ್ಡದು. ಅವರು ಬೆಳ್ಳಿತೆರೆ ಮತ್ತು ಕಿರುತರೆ ಈ ಎರಡರಲ್ಲೂ ಸಹ ಮಿಂಚಿದ್ದಾರೆ. ಅವರು ಹಿಂದುಳಿದ ನೇಕಾರರ ಸಮುದಾಯದಿಂದ ಬಂದಿದ್ದಾರೆ. ಅವರಿಗೆ ಹಿಂದುಳಿದ ವರ್ಗಗಳ ನೇಕಾರರ ಕಷ್ಟ ಮತ್ತು ಸುಖ ಗೊತ್ತಿದೆ. ಈ ಸದನದಲ್ಲಿ ಆ ರೀತಿಯ ವಿಚಾರಗಳು ಬಂದಾಗ, ಅದಕ್ಕೆ ಹೆಚ್ಚು ಸಮಯವನ್ನು ಕೊಟ್ಟು, ಅರ್ಥಗರ್ಭಿತವಾದಂತಹ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅವರು ಮಂತ್ರಿಯಾಗಿದ್ದಂತಹವರು ಮತ್ತು ಅವರು ಈ ಬಾರಿಯೂ ಕೂಡ ಮಂತ್ರಿಗಳಾಗುತ್ತಾರೆಂದುಕೊಂಡಿದ್ದೆವು. ಆದರೆ, ಮುಂದಿನ ದಿನಗಳಲ್ಲಿ ಮಹಿಳೆಯರಿಗೆ ಶೇಕಡಾ ೩೩ರಷ್ಟು ಮೀಸಲಾತಿ ಬರುತ್ತಿದೆ. ಮತ್ತೆ delimitation ಆಗುತ್ತಿದೆ. ಅಂತಹ ಸಂದರ್ಭದಲ್ಲಿ ಅವರಿಗೆ ಅವಕಾಶಗಳು ದೊರೆಯುತ್ತದೆ ಎನ್ನುವಂತಹ ಒಂದು ದೂರದೃಷ್ಟಿಯೊಂದಿಗೆ ಮತ್ತೆ ಅವರ ಹಾಸ್ಯ, ಗಂಭೀರ ಮತ್ತು ಮನೋಜ್ಞ ಅಭಿನಯ ನಮ್ಮ ಮನಸ್ಸಿನಲ್ಲಿ ಇದೆ. ಇಲ್ಲಿ ಪ್ರಶ್ನೆ ಕೇಳುವಂತಹವರಿಗೆ ಇದು ಮಾತಿನ ಮನೆ.

**(ಮುಂದು)**

(743) 18.08.2026 ವೈಎಲ್-ಎಕೆ 12.40 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್ ಎಸ್. (ಮುಂದು):-**

ಇದು ಮಾತಿನ ಮನೆಯಾಗಿದ್ದು, ಮಾತಿಗೆ ಅವಕಾಶ ಕೊಡಬೇಕು, ಪ್ರಶ್ನೆಗೆ ಅವಕಾಶ ಕೊಡಬೇಕು. ಸಮಾಜದ ವಿವಿಧ ವರ್ಗಗಳ ಕಷ್ಟ ಸುಖಗಳನ್ನು ಸರ್ಕಾರದ ಗಮನಕ್ಕೆ ತರಬೇಕು. ಪ್ರತಿಪಕ್ಷವಾಗಿ ಸರ್ಕಾರವನ್ನು ಎಚ್ಚರಿಸುವಂಥ ಕೆಲಸ ಮಾಡುವಂಥವರಾಗಿದ್ದೇವೆ. ಹಾಗಾಗಿ, ಮಾತನಾಡುವವರಿಗೆ ಹೆಚ್ಚು ಅವಕಾಶ ಕೊಟ್ಟು ಸರ್ಕಾರ ಹಳಿ ತಪ್ಪದಂತೆ ಆಳುವಂಥ ಪಕ್ಷ ಮತ್ತು ಪ್ರತಿಪಕ್ಷ ಜೊತೆಯಾಗಿ ಹೋಗುವಂಥ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಡಾ॥ ಉಮಾಶ್ರೀರವರು ನಮ್ಮನ್ನು ಒಂದು ನಾಟಕಕ್ಕೆ ಕರೆದಿದ್ದು, ಆ ನಾಟಕದಲ್ಲಿ ಅವರದು ಏಕಪಾತ್ರ ಅಭಿನಯವಾಗಿತ್ತು. ಅಂದರೆ, ಒಬ್ಬ ವ್ಯಕ್ತಿ ಬಹುಮುಖ ಪಾತ್ರ ಮಾಡುವಂಥದ್ದಾಗಿದ್ದು, ಆ ಪಾತ್ರದಲ್ಲಿ ಡಾ॥ ಉಮಾಶ್ರೀರವರ energy level, ಅವರು ನಡೆದುಕೊಂಡ ರೀತಿ, physical fitness ನೋಡಿದಾಗ, ಈ ದೇಶದ ಪ್ರತಿಯೊಬ್ಬ ಮಹಿಳೆಗೂ ಅನುಕರಣೀಯವಾಗಿದ್ದು, ಮುಂಬರುವಂಥ ದಿನಗಳಲ್ಲಿ ಯುವತಿಯರಿಗೆ ಪ್ರೇರಣೆಯಾಗಲಿ ಎಂದು ಹೇಳುತ್ತಾ, ಅವರಿಗೆ ಮತ್ತೊಮ್ಮೆ ಶುಭವನ್ನು ಕೋರುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳು. ಡಾ॥ ಉಮಾಶ್ರೀರವರು ಕರ್ನಾಟಕ ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ಅಭಿನಂದನೆ ಸಲ್ಲಿಸಲು ಮಾತನಾಡುವಂಥ ಸಂದರ್ಭ ನನಗೆ ಒದಗಿರುವುದು ನನ್ನ ಸೌಭಾಗ್ಯ ಎಂದು ಭಾವಿಸುತ್ತೇನೆ. ಅವರು ಕೇವಲ ಒಬ್ಬ ರಾಜಕಾರಣಿಯಾಗಿಲ್ಲ, ಕಲಾ ಜಗತ್ತಿನ ಧ್ರುವತಾರೆ. ಶೋಷಿತರ ಪರವಾಗಿ ಧ್ವನಿ ಎತ್ತುವ ಶ್ರೇಷ್ಠ ಚೇತನ. ತಳ ಸಮುದಾಯದ ಜೀವಂತ ಧ್ವನಿ. ಕನ್ನಡ ನಾಡಿನ ಕಲಾ ಸರಸ್ವತಿಯಾಗಿರುವ ಡಾ॥ ಉಮಾಶ್ರೀರವರು ಅತ್ಯುನ್ನತ ಮತ್ತು ಪವಿತ್ರವಾಗಿರುವ ಈ ಮೇಲ್ಮನೆಗೆ ಉಪ ಸಭಾಪತಿಯಾಗಿ ಆಯ್ಕೆಯಾಗಿರುವುದು ಈ ಸದನಕ್ಕೆ ಮತ್ತು ಕರ್ನಾಟಕ ರಾಜ್ಯಕ್ಕೆ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಇಂತಹ ಜವಾಬ್ದಾರಿಯುತ ಸ್ಥಾನವನ್ನು ಅಲಂಕರಿಸಿದ ಅವರಿಗೆ ಹೃದಯ ಪೂರ್ವಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಡಾ॥ ಉಮಾಶ್ರೀರವರ ಹೆಸರು ಕೇಳಿದ ತಕ್ಷಣ ನಮಗೆ ನೆನಪಾಗುವುದು, ಅವರ ಹೋರಾಟದ ಬದುಕು ಮತ್ತು ಅಪಾರ ಸಾಧನೆ. ಅವರು ಕೇವಲ ಒಬ್ಬ ನಟಿಯಾಗಿ ಬಣ್ಣದ ಲೋಕದಲ್ಲಿ ಮಿಂಚಿಲ್ಲ. ಸಮಾಜದ ಕಹಿ ಸತ್ಯಗಳನ್ನು, ನೊಂದವರ ನೋವನ್ನು ತಮ್ಮ ಅದ್ಭುತ ಅಭಿನಯದ ಮೂಲಕ ಜಗತ್ತಿಗೆ ತಲುಪಿದ ದಿಮಂತ ಮಹಿಳೆ. ರಂಗ ಭೂಮಿಯಿಂದ ಹಿಡಿದು ಬೆಳ್ಳಿ ಪರದೆಯವರೆಗೂ ನಿರ್ವಹಿಸಿದ ಪಾತ್ರ ಇಂದಿಗೂ ಪ್ರತಿಯೊಬ್ಬ ಕನ್ನಡಿಗನ ಮನಸ್ಸಿನಲ್ಲಿ ಹಸಿರಾಗಿದೆ. ನಟನೆಯಲ್ಲಿ ಅವರು ತೋರಿದ ಬದ್ಧತೆ, ರಾಷ್ಟ್ರ ಪ್ರಶಸ್ತಿ ಗೌರವಕ್ಕೆ ಪಾತ್ರವಾಗಿಸಿತ್ತು. ಕಲೆಯ ಮೂಲಕ ಸಮಾಜವನ್ನು ಜಾಗೃತಿಗೊಳಿಸಿದ ರೀತಿ ನಮ್ಮೆಲ್ಲರಿಗೂ ಪ್ರೇರಣೆಯಾಗಿದೆ. ಅವರು ಕಲಾ

ಕ್ಷೇತ್ರದಿಂದ ರಾಜಕೀಯ ರಂಗಕ್ಕೆ ಕಾಲಿಡುವುದಲ್ಲದೇ, ತಮ್ಮ ಅಪ್ರತಿಮ ಜನಸೇವೆಯ ಮೂಲಕ ವಿಶಿಷ್ಠ ಛಾಪು ಮೂಡಿಸಿದವರು. ಅವರ ಪರಿಶ್ರಮವನ್ನು ಗುರುತಿಸಿ, ನಮ್ಮ ಪಕ್ಷ ಅವರನ್ನು ಈ ಹಿಂದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನಾಗಿ ನೇಮಕ ಮಾಡಿತ್ತು. ಅವರ ಸೇವೆ ಇಲಾಖೆಯಲ್ಲಿ ಅಭೂತಪೂರ್ವವಾಗಿತ್ತು. ಇತ್ತೀಚೆಗೆ ಅವರನ್ನು ಪಕ್ಷದ ಕಾರ್ಯಕರ್ತರಾಗಿ ನಮ್ಮ ಕಲಬುರ್ಗಿ ಜಿಲ್ಲೆಗೆ ನೇಮಿಸಿದರು. ನಾನು ಜಿಲ್ಲಾಧ್ಯಕ್ಷನಾಗಿದ್ದ ಪ್ರಯುಕ್ತ ಅವರೊಂದಿಗೆ ಒಡನಾಟ ಹೆಚ್ಚಾಗಿತ್ತು. ಆಗ ಅವರ ಸರಳತೆ ಬಗ್ಗೆ ನನಗೆ ಹೆಚ್ಚು ಅರಿವಾಗಿತ್ತು. ಪಕ್ಷದ ವೀಕ್ಷಕರಾಗಿ ಅಲ್ಲಿನ ಕಾರ್ಯಕ್ರಮಗಳನ್ನು ಕೂಡ ಸಮಯಕ್ಕೆ ಸರಿಯಾಗಿ ನೇರವೇರಿಸುವುದು, ನಮಗೆ ನೀಡಿರುವ ಜವಾಬ್ದಾರಿಯನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿರುವಂಥ ಒಬ್ಬ ದಿಮಂತ ಮಹಿಳೆಯಾಗಿದ್ದಾರೆ. ಉಪ ಸಭಾಪತಿಯಾಗಿ ಅಧಿಕಾರ ಸ್ವೀಕರಿಸಿದ ಡಾ॥ ಉಮಾಶ್ರೀರವರಿಗೆ ಭಗವಂತ ಆಯಸ್ಸು, ಆರೋಗ್ಯ ಮತ್ತು ಸದನವನ್ನು ಯಶಸ್ವಿಯಾಗಿ ಮುನ್ನಡೆಸುವ ಸಾಫಲ್ಯವನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಅವರ ನೇತೃತ್ವದಲ್ಲಿ ನಮ್ಮ ಮೇಲ್ಮನೆ ಹತ್ತಾರು ಐತಿಹಾಸಿಕ ನಿರ್ಧಾರಗಳಿಗೆ ಸಾಕ್ಷಿಯಾಗಲಿ ಎಂದು ಆಶಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ತಮಗೆ ಮತ್ತೊಮ್ಮೆ ಧನ್ಯವಾದಗಳರ್ಪಿಸಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಕಿಶೋರ್ ಕುಮಾರ್ ಪುತ್ತೂರ್‌ರವರೇ, ತಾವು ಸದನದಲ್ಲಿ ಪತ್ರಿಕೆ ಒದುತ್ತಿರುವುದನ್ನು ನಾನು ಗಮನಿಸಿದ್ದೇನೆ. ಆದರೆ, ಸದನದೊಳಗೆ ಪತ್ರಿಕೆ ಓದುವುದಕ್ಕೆ ಅವಕಾಶ ಇರುವುದಿಲ್ಲ. ಒಂದು ವೇಳೆ ಪತ್ರಿಕೆ ಓದಬೇಕೆಂದರೆ lounge ನಲ್ಲಿ ಕುಳಿತು ಓದಿಕೊಂಡು ಬನ್ನಿ. It is not allowed inside the House.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, unopposed ಉಪ ಸಭಾಪತಿ ಸ್ಥಾನಕ್ಕೆ ಆಯ್ಕೆಗೊಂಡ ಡಾ॥ ಉಮಾಶ್ರೀ ಅಕ್ಕನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಡಿ.ಎಸ್.ಅರುಣ್‌ರವರೇ, ನನಗೂ ಸಹ ಆ ರೀತಿ ಮಾತು ಕೇಳಬೇಕೆಂದು ಬಹಳ ಆಸೆ ಇತ್ತು. ಆದರೆ, ಆ ರೀತಿ ನನಗೆ ಮಾಡಲಿಲ್ಲ ಎಂಬ ವ್ಯಥೆ ಇದೆ. ಆದರೂ ನಾನು ಅದನ್ನು ಮರೆತ್ತಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ಸಹ ನಮಗೆ ಅಷ್ಟೇ ಗೌರವ ಇದೆ. ಆದರೆ, ಪ್ರಶ್ನೆಯಾಗಿದ್ದು ಏನೆಂದರೆ, ನಮ್ಮನ್ನು ಯಾರೂ ಏನೂ ಕೇಳದೇ, ನಾಮಿನೇಷನ್ ಹಾಕಿದ್ದಾರೆ. ಆದ್ದರಿಂದ ನಮಗೆ ಅನಿಸಿದ ತೀರ್ಮಾನವನ್ನು ನಾವು ತೆಗೆದುಕೊಳ್ಳಬೇಕಾಗಿತ್ತು.

**Mr. CHAIRMAN:** It is in lighter vein.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಡಾ॥ ಉಮಾಶ್ರೀರವರ ವಿಷಯ ಬಂದಾಗ ಮಾನ್ಯ ಸಭಾನಾಯಕರು ನಮಗೆ ಕರೆ ಮಾಡಿ, unanimous ಆಗಿ ಆಯ್ಕೆ ಮಾಡಬೇಕೆಂದು ಹೇಳಿದಾಗ,

ನಾವು ಮಹಿಳಾ ಮೀಸಲಾತಿ ಮತ್ತು ಮಹಿಳಾ ಪರವಾಗಿದ್ದು, ಅದರಂತೆ unanimous ಆಗಿ ಆಯ್ಕೆ ಮಾಡೋಣ ಎಂದು ಮಾಡಿದ್ದೆವು. ಅದಕ್ಕಾಗಿಯೇ ನಾನು ಹೇಳುತ್ತಿರುವುದು 'ಉಮಾಶ್ರೀ ಅಕ್ಕ, ಈಗ ನಮ್ಮ ಪಕ್ಕ.'

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಅಂದಿನ ದಿವಸ ತಮಗೆ ಅಭಿನಂದನೆ ಹೇಳುವಂಥ ಅವಕಾಶ ಸಿಗಲಿಲ್ಲ. ಏಕೆಂದರೆ, ಅಂದಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬೇಕಾಗಿತ್ತು. ಹಾಗಾಗಿ, ಈಗ ತಮಗೂ ಕೂಡ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಡಾ॥ ಉಮಾಶ್ರೀ ಅಕ್ಕರವರ ಬಗ್ಗೆ ಮಾತನಾಡಲು ಖುಷಿಯಾಗುತ್ತದೆ. ನಾವೆಲ್ಲರೂ school days ಮತ್ತು college days ನಲ್ಲಿ ಫಿಲಂ ಲ್ಯಾಂಡ್ ಅಂದರೆ ಬಹಳ ಅಚ್ಚುಮೆಚ್ಚು. ಶಾಲಾ-ಕಾಲೇಜಿಗೆ ಹೋಗುವುದಕ್ಕಿಂತ ಜಾಸ್ತಿ ಚಿತ್ರಮಂದಿರಗಳಿಗೆ ಹೋಗುತ್ತಿದ್ದೆವು. ಅದರಲ್ಲಿಯೂ ರಂಗಭೂಮಿ ಕಲಾವಿದೆಯಾಗಿರುವಂಥ ಡಾ॥ ಉಮಾಶ್ರೀರವರ ನಟನೆಯನ್ನು ನೋಡಿದಂತೆ ಹೇಳುವುದಾದರೆ, ಅವರ 38ನೇ ವಯಸ್ಸಿನಲ್ಲಿ ಪುಟ್ನಂಜ ಚಲನಚಿತ್ರದಲ್ಲಿ 80 ವರ್ಷದ ಅಜ್ಜಿಯ ಪಾತ್ರ ಮಾಡಿರುವುದು ಈಗಲೂ ನಮ್ಮ ಕಣ್ಣ ಮುಂದೆ ಕಾಣಿಸುತ್ತದೆ. ಇತ್ತೀಚೆಗೆ ಕಳೆದ ವರ್ಷ 'ಶರ್ಮಿಷ್ಠೆ' ಎನ್ನುವಂಥ ನಾಟಕವನ್ನು ನೋಡುತ್ತಿದ್ದಾಗ, ಸುಮಾರು 70 ರಿಂದ 75 ನಿಮಿಷಗಳವರೆಗೂ ಏಕಪಾತ್ರ ಅಭಿನಯದಲ್ಲಿ ನಟಿಸಿದ್ದು, 68 ವರ್ಷದ ಮಹಿಳೆ ಅಂತಹ ಪಾತ್ರವನ್ನು ನಿರ್ವಹಣೆ ಮಾಡುತ್ತಿದ್ದ ಸಂದರ್ಭವನ್ನು ನೋಡುತ್ತಿದ್ದಾಗ ಎಷ್ಟು ಶಕ್ತಿ ಇದೆ ಎಂಬುದು ಗೊತ್ತಾಗುತ್ತದೆ. ಸಿನಿಮಾ ರಂಗದಲ್ಲಿ ನಟನೆ ಮಾಡುವುದೆಂದರೆ, ಬಹಳ ಸುಲಭದ ಕೆಲಸವಾಗಿದೆ. 20 ವರ್ಷಗಳ ನಂತರ ರಂಗಭೂಮಿ ಕಲಾವಿದೆಯಾಗಿ, ಸ್ಟೇಜ್ ಮೇಲೆ ನಾಟಕ ಮಾಡಿದಂಥ ಮಹಿಳೆ ಅವೊತ್ತಿನ ದಿವಸ ನಿರರ್ಗಳವಾಗಿ 70 ನಿಮಿಷಗಳ ಕಾಲ ಮಾಡಿದಂಥ ನಾಟಕ ನಮ್ಮಗೆಲ್ಲಾ ಈಗಲೂ ಸ್ಫೂರ್ತಿದಾಯಕವಾಗಿದೆ. ಡಾ॥ ಉಮಾಶ್ರೀರವರು 2001ನೇ ಇಸವಿಯಲ್ಲಿ ವಿಧಾನ ಪರಿಷತ್ತಿಗೆ ಬೇರೆ ಬೇರೆ ಕ್ಷೇತ್ರದಿಂದ ಆಯ್ಕೆಗೊಂಡು ಬಂದು ನಾಮನಿರ್ದೇಶಿತಗೊಂಡವರು ಎಂಬ ವಿಚಾರ ನನಗೂ ಸಹ ಸರಿಯಾಗಿ ಗೊತ್ತಿರಲಿಲ್ಲ. ಅಂದರೆ, ಒಂದು ಪಕ್ಷದ ಕಾರ್ಯಕರ್ತೆಯಾಗಿ 38 ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡಿದಂಥ ಡಾ॥ ಉಮಾಶ್ರೀರವರು ಉಪ ಸಭಾಪತಿಯಾಗಿ ಆಯ್ಕೆಗೊಂಡಿರುವುದರಿಂದ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬಹಳ ವಿಶೇಷವಾಗಿ ನಮ್ಮ ತಂದೆಯಾದ ಶ್ರೀ ಡಿ.ಹೆಚ್.ಶಂಕರಮೂರ್ತಿರವರು ಸಹ ಬೆಳಗ್ಗೆ ನನಗೆ ಕರೆ ಮಾಡಿ, ಅಭಿನಂದನೆಯನ್ನು ಸಲ್ಲಿಸಬೇಕೆಂದು ಹೇಳಿದರು. ಹಾಗೆಯೇ ಸಭಾಪತಿಯಾಗಿ ಆಯ್ಕೆಗೊಂಡ ತಮಗೂ ಸಹ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಇಚ್ಛೆ ಇತ್ತು. ಏಕೆಂದರೆ, ಶಿಷ್ಟಾಚಾರದಲ್ಲಿ ಘನತೆವೆತ್ತ ರಾಜ್ಯಪಾಲರನ್ನು ಹೊರತುಪಡಿಸಿದರೆ, ಎರಡನೆಯ ಸ್ಥಾನ ಸಭಾಪತಿಯವರದ್ದಾಗಿದೆ. ನಮ್ಮ ತಂದೆಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿರವರು 8 ವರ್ಷಗಳ ಕಾಲ ಸಭಾಪತಿಯ ಪೀಠದಲ್ಲಿ ಕುಳಿತಿದ್ದು, ಶಿಷ್ಟಾಚಾರದಲ್ಲಿ ಎರಡನೆಯ ಸ್ಥಾನ ಸಿಕ್ಕಿರುವುದು ನಮ್ಮೆಲ್ಲರ ಭಾಗ್ಯ ಎಂದು ಭಾವಿಸುತ್ತೇನೆ. ಅದೇ ರೀತಿ ಉಪ ಸಭಾಪತಿಯವರಿಗೂ ಕೂಡ ಆ ಸ್ಥಾನಕ್ಕೆ ತನ್ನದೇ ಆದ ಗೌರವ ಇದೆ. ಹಾಗಾಗಿ, ಅದನ್ನು ಪೂರ್ತಿ ನಿರ್ವಹಣೆ ಮಾಡುವ ಮೂಲಕ ನಮಗೆ ಅತೀ ಹೆಚ್ಚು

ಕಾಲವನ್ನು ಕೊಡುವಂಥಹದ್ದು ಆಗಬಹುದು ಎಂಬ ನಿರೀಕ್ಷೆಯಲ್ಲಿ ಇಬ್ಬರಿಗೂ ಕೂಡ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಇಚ್ಛಿಸುತ್ತೇನೆ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟದಕ್ಕಾಗಿ ಅಭಿನಂದನೆಗಳು. ನಾನು ಕೂಡ ಡಾಕ್ಟರ್ ಆಗಿದ್ದು, ಡಾ॥ ಉಮಾಶ್ರೀ ಅಕ್ಕನವರು ಕೂಡ ಡಾಕ್ಟರ್. ಆದರೆ, ಎರಡೂ ಡಾಕ್ಟರ್‌ನಲ್ಲಿ ವ್ಯತ್ಯಾಸ ಇದೆ. ಪ್ರಪಂಚವನ್ನು ಸೃಷ್ಟಿ ಮಾಡುವಂಥ ಶಕ್ತಿ ಆ ದೇವರಿಗೆ ಇದೆ. ಜನ್ಮವನ್ನು ಕೊಡುವಂಥ ಶಕ್ತಿ ತಾಯಿಗೆ ಇದೆ. ಜನ್ಮವನ್ನು ಕೊಡುವಂಥ ಶಕ್ತಿ ತಾಯಿಗೆ ಇದ್ದರೆ, ಮರು ಜನ್ಮವನ್ನು ಕೊಡುವಂಥ ಶಕ್ತಿ ಯಾರಿಗಾದರೂ ಇದೆ ಎಂದರೆ, ಅದು ವೈದ್ಯರಿಗೆ, ಅಂದರೆ ನಮಗೆ ಎಂದು ಹೇಳುತ್ತೇನೆ. ಹಾಗಾಗಿ, "ವೈದ್ಯೋ ನಾರಾಯಣೋ ಹರಿಃ" ಎಂದು ಹೇಳುತ್ತಾರೆ. ನಾವು ಯಾರಿಗೆ ಜನ್ಮ ಕೊಡಬಹುದೆಂದರೆ, ಭೌತಿಕ ದೇಹಕ್ಕೆ ಜನ್ಮವನ್ನು ಕೊಡುವಂಥ ಶಕ್ತಿ ಕೊಟ್ಟಿದ್ದಾರೆ. ಆದರೆ, ಡಾ॥ ಉಮಾಶ್ರೀ ಅಕ್ಕನವರಿಗೆ ಹಾಸ್ಯದಿಂದ ಮನಸ್ಸಿಗೆ ಜೀವವನ್ನು ಕೊಡುವಂಥ ಶಕ್ತಿ ಇದೆ. ಭಾವನಾತ್ಮಕ ಹೃದಯಕ್ಕೆ ಜೀವವನ್ನು ಕೊಡುವಂಥ ಶಕ್ತಿ ಡಾ॥ ಉಮಾಶ್ರೀರವರಿಗೆ ಇದೆ. ಡಾ॥ ಉಮಾಶ್ರೀರವರ ಬದುಕು ಕೇವಲ ಕಲೆಯ ಪಯಣವಾಗಿಲ್ಲ. ಅದು ಹೋರಾಟ, ಸಾಧನೆ ಮತ್ತು ಜನಸೇವೆಯ ಪಯಣ. ಡಾ॥ ಉಮಾಶ್ರೀರವರಿಗೆ ಹೊಸ ಹುದ್ದೆ ಸಿಕ್ಕಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹುದ್ದೆಗಳು ಬದಲಾಗಬಹುದು, ಆದರೆ, ಜನಮನದಲ್ಲಿ ಉಳಿದ ಅವರ ಹೆಸರು ಎಂದಿಗೂ ಬದಲಾಗುವುದಿಲ್ಲ ಎಂಬ ಉಲ್ಲೇಖವನ್ನು ಮಾಡುತ್ತೇನೆ. ಕಲೆಯಿಂದ ಜನರ ಹೃದಯವನ್ನು ಗೆದ್ದವರು; ಸೇವೆಯಿಂದ ಜನರ ವಿಶ್ವಾಸವನ್ನು ಗೆದ್ದವರು; ವೇದಿಕೆ ಮೇಲೆ ಹಲವು ಪಾತ್ರಗಳಿಗೆ ಜೀವ ತುಂಬಿದವರು; ಇಂದು ಜನಸೇವೆಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು; ಡಾ॥ ಉಮಾಶ್ರೀ.

(ಮುಂದು)

**(744) 18.08.2026/12.50/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)**

**ಡಾ॥ ಧನಂಜಯ ಸರ್ಜಿ (ಮುಂದು):-**

ಡಾ॥ ಉಮಾಶ್ರಿಯವರು ಕಲಾವಿದೆಯಾಗಿ ಗಳಿಸಿದ ಪ್ರೀತಿ, ಜನಸೇವಕಿಯಾಗಿ ಗಳಿಸಿದ ವಿಶ್ವಾಸ, ಈಗ ಸದನದ ಜವಾಬ್ದಾರಿಯೊಂದಿಗೆ ಇನ್ನಷ್ಟು ಎತ್ತರಕ್ಕೆ ಏರಲಿ. ತಮ್ಮ ಮಾತುಗಳು ಸದನಕ್ಕೆ ಅರ್ಥ ನೀಡಲಿ. ತಮ್ಮ ಅನುಭವವು ಯುವ ಪೀಳಿಗೆಗೆ ದಾರಿ ದೀಪವಾಗಲಿ. ತಮ್ಮ ಸೇವೆ ಜನರಿಗೆ ಇನ್ನಷ್ಟು ಹತ್ತಿರವಾಗಲಿ. ತಮ್ಮ ಈ ಒಂದು ಹೊಸ ಜವಾಬ್ದಾರಿಗೆ ಯಶಸ್ವಿಯಾಗಲಿ ಎಂದು ನಾನು ತಮಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು ಬಹಳ smart ಇದ್ದೀರಿ ಮತ್ತು ನೋಡುವುದಕ್ಕೂ ಕೂಡ smart ಇದ್ದೀರಿ. ತಮಗೆ 62 ವರ್ಷವಾದರೂ ಕೂಡ 26 ವರ್ಷದ ಯುವಕರಂತೆ ಕಾಣುತ್ತೀರಾ. ಹಾಗೆಯೇ, ತಾವು 18 ನೇ

ವಯಸ್ಸಿನಲ್ಲಿ ರಾಜಕೀಯವನ್ನು ಪ್ರವೇಶಿಸಿದ್ದು, ನಿಜವಾಗಲೂ smart ಇದ್ದೀರಿ. ಅಲ್ಪಸಂಖ್ಯಾತರು ಬ್ರಾಹ್ಮಣರು ಎಂದು ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಹೇಳಿದರು. ಆ ರೀತಿಯ ವ್ಯಕ್ತಿತ್ವ ತಮ್ಮಲ್ಲಿ ಇದೆ. ತಾವು ಒಳ್ಳೆಯ ಅದ್ಭುತವಾಗಿ ಹಾಡುತ್ತೀರಿ ಎಂದು ಮಾನ್ಯ ಶಿವಕುಮಾರ್‌ರವರು ಹೇಳಿದ್ದಾರೆ. ಯಾರು ಹಾಡು ಹೇಳುತ್ತಾರೋ, ಅವರ ಹೃದಯ ಕೂಡ ಬಹಳ ಒಳ್ಳೆಯದಿರುತ್ತದೆ ಎಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:-** ಡಾ॥ ಧನಂಜಯ ಸರ್ಜಿಯವರೇ, ಒಂದು ನಿಮಿಷ. 2004 ಅಥವಾ 2005ರಲ್ಲಿ "ಶಾಸಕರ ದಿನಾಚರಣೆ" ಆಗಿತ್ತು. ಈ ದಿನಾಚರಣೆಯನ್ನು ಪುನಃ ಆಚರಣೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ವಿಷಯದ ಕುರಿತಾಗಿ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಭಾಧ್ಯಕ್ಷರ ಹತ್ತಿರ ಜೊತೆ ನಾನು ಚರ್ಚೆ ಮಾಡುತ್ತೇನೆ. ಬಹುಶಃ ಮುಂದಿನ ವರ್ಷ ರಾಜ್ಯಪಾಲರ ಭಾಷಣ ಅಧಿವೇಶನದ ನಂತರ "ಶಾಸಕರ ದಿನಾಚರಣೆ" ಮಾಡಬೇಕೆಂದು ಹಲವಾರ ಜನ ಸದಸ್ಯರು ಮನವಿ ಮಾಡಿದ್ದಾರೆ. ಈ "ಶಾಸಕರ ದಿನಾಚರಣೆ" ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ "ಶಾಸಕರ ದಿನಾಚರಣೆ" 2006 ಅಥವಾ 2007ರಲ್ಲಿ ಆಗಿತ್ತು. ಬಹುಶಃ ಮುಂದಿನ ವರ್ಷ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, 2027 ಬಜೆಟ್ ಅಧಿವೇಶನ ಅಥವಾ ರಾಜ್ಯಪಾಲರ ಭಾಷಣ ಅಧಿವೇಶನದ ನಂತರ "ಶಾಸಕರ ದಿನಾಚರಣೆ" ಮಾಡಬೇಕೆಂಬ ಇಚ್ಛೆ ಇದೆ. ತಮ್ಮೆಲ್ಲರ ಸಹಕಾರ ಬೇಕು.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಶಾಸಕರ ದಿನಾಚರಣೆ"ಯಲ್ಲಿ ತಾವು ಹಾಡು ಕೂಡ ಹೇಳಬಹುದು ಎಂದು ಅನಿಸುತ್ತದೆ.

**ಡಾ॥ ಕೆ. ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):-** "ಶಾಸಕರ ದಿನಾಚರಣೆ"ಯಲ್ಲಿ sports ಮತ್ತು cultural activities ಮಾಡಬೇಕು.

**ಸಭಾಪತಿಯವರು:-** "ಶಾಸಕರ ದಿನಾಚರಣೆ" ಅನ್ನು ಮೂರು ದಿನಗಳ ಕಾಲ ಮಾಡಬೇಕೆಂಬುದು ಇದೆ. "ಶಾಸಕರ ದಿನಾಚರಣೆ"ಯನ್ನು cultural, sports ಮತ್ತು ಎಲ್ಲಾ activities ಮೂಲಕ ಮೂರು ದಿನಗಳ ಕಾಲ ಆಚರಣೆ ಮಾಡಬೇಕು. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಶಾಸಕರೆಲ್ಲರಿಗೂ ಏನೇನು ಪ್ರತಿಭೆ ಇದೆ, ಅದನ್ನೆಲ್ಲ ಹೊರ ಚೆಲ್ಲಲು ಆ ದಿನಾಚರಣೆಯಲ್ಲಿ ಎಲ್ಲ ಮಾನ್ಯ ಸದಸ್ಯರು ಕಡ್ಡಾಯವಾಗಿ ಪಾಲ್ಗೊಳ್ಳಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಆ ದಿನಾಚರಣೆಯಲ್ಲಿ ಮಾನ್ಯ ಶಾಸಕರುಗಳಿಗೆ ಏನೇನು ಪ್ರತಿಭೆ ಇದೆ ಎಂಬುದನ್ನು ತೋರಿಸಲಿ. ಏಕೆಂದರೆ ಮಾನ್ಯ ಶಾಸಕರೆಲ್ಲರೂ ರಾಜಕೀಯ ಜಂಜಾಟದಲ್ಲಿ ಅವರಿಗೆ ಸ್ವಂತಕ್ಕೆ ಸಮಯ ಸಿಗುವುದಿಲ್ಲ. ಆ ದಿನಾಚರಣೆಯನ್ನು ಮೂರು ದಿನಗಳ ಕಾಲ cricket match, football, tennis ಇರಬಹುದು. ಎಲ್ಲಾ ಕ್ರೀಡೆಗಳಲ್ಲಿ ಮಾನ್ಯ ಶಾಸಕರೆಲ್ಲರೂ ಪಾಲ್ಗೊಳ್ಳಬೇಕು. ಎಲ್ಲಾ ಶಾಸಕರಿಗೂ ಸಾಂಸ್ಕೃತಿಕವಾಗಿ ಏನೆಲ್ಲಾ ಪ್ರತಿಭೆಗಳಿವೆಯೋ, ಅದನ್ನೆಲ್ಲ ತೋರಿಸಲು ಅವರಿಗೆಲ್ಲರಿಗೂ ಅವಕಾಶ ಕೊಡುತ್ತೇವೆ. ನಾವು ಕೇವಲ ರಾಜಕಾರಣ ಮಾತ್ರ ಮಾಡುವುದಿಲ್ಲ. ಎಲ್ಲಾ ಹಂತಗಳಲ್ಲಿ ಕೂಡ ಪರಿಣಿತರಾಗಿದ್ದೇವೆ ಎಂಬ ಸಂದೇಶವನ್ನು ಇಡೀ

ರಾಜ್ಯದ ಜನರಿಗೆ ತಲುಪಬೇಕು. ಆ "ಶಾಸಕರ ದಿನಾಚರಣೆ"ಯಲ್ಲಿ ಪಾಲ್ಗೊಳ್ಳುವುದಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

**ಡಾ॥ ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, ತಾವು smart ಆಗಿದ್ದು, ಸಹೃದಯವನ್ನು ಹೊಂದಿದವರು. ತಮ್ಮ ಪ್ರೀತಿ ಆಡಳಿತ ಪಕ್ಷಕ್ಕೆ ಮಾತ್ರವಲ್ಲದೇ ವಿರೋಧ ಪಕ್ಷದ ಶಾಸಕರಿಗೂ ಇರಲಿ ಎನ್ನುವ ಮಾತನ್ನು ಹೇಳುತ್ತಾ, ನಾನು ತಮಗೆ ಮತ್ತೊಮ್ಮೆ ಹೃದಯಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಎಂ.ಎಲ್. ಅನಿಲ್ ಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಮೇಲ್ಮನೆ ಉಪ ಸಭಾಪತಿ ಸ್ಥಾನಕ್ಕೆ ತಮ್ಮೆಲ್ಲರಗಿಂತ ಹಿರಿಯರು ಮತ್ತು ನಮ್ಮೆಲ್ಲರ ಪ್ರೀತಿಯ ಅಕ್ಕ ಡಾ॥ ಉಮಾಶ್ರೀಯವರು. ಉಪ ಸಭಾಪತಿಯಾಗಿ ಆಯ್ಕೆಯಾಗಿರುವ ಸಂದರ್ಭದಲ್ಲಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುವಂತಹ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಪತಿಯರೇ, ತಾವು ಕೂಡ ಸಭಾಪತಿ ಸ್ಥಾನಕ್ಕೆ ಆಯ್ಕೆಗೊಂಡಿರುವ ಸಂದರ್ಭದಲ್ಲಿ ನಾನು ತಮಗೆ ಅಭಿನಂದನೆ ಸಲ್ಲಿಸುವ ಅವಕಾಶ ಸಿಗಲಿಲ್ಲ. ಸಭಾಪತಿ ಮತ್ತು ಉಪ ಸಭಾಪತಿಯವರಿಗೆ ಅಭಿನಂದನೆಯನ್ನು ಸಲ್ಲಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ತಾವು ರಾಜ್ಯದ N.S.U.I. (National Students' Union of India) ನ ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ನನಗೆ ಆಗ ಇಪ್ಪತ್ತು ವರ್ಷ ವಯಸ್ಸು ಆಗಿತ್ತು. ಆಗ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆಗ ತಾವು ರಾಜ್ಯಾಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ನನಗೆ ಕೋಲಾರ ಜಿಲ್ಲೆಯ N.S.U.I. ನ ಅಧ್ಯಕ್ಷರಾಗಿ ಕೆಲಸ ಮಾಡುವಂತಹ ಅವಕಾಶವನ್ನು ತಾವು ಮಾಡಿಕೊಟ್ಟಿರಿ. ಆದಾದ ನಂತರ ತಾವು N.S.U.I. ನ ಅಧ್ಯಕ್ಷರಾದಾಗ, ನನಗೆ ರಾಜ್ಯದ N.S.U.I. ನ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸವನ್ನು ಮಾಡುವಂತಹ ಅವಕಾಶವನ್ನು ಮಾಡಿಕೊಟ್ಟಂತಹವರು ತಾವು. ಅವೊತ್ತು ಮೈಸೂರು ಜಿಲ್ಲೆಯ ಉಸ್ತುವಾರಿಯನ್ನು ನೋಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಂತಹವರು ತಾವು. ನಾವೆಲ್ಲರೂ ತಮ್ಮ ಗರಡಿಯಲ್ಲಿ ಅಂದರೆ ತಮ್ಮ ಹಾದಿಯಲ್ಲಿ ಬಂದಂತಹವರು. ತಮ್ಮ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟುಕೊಂಡು ಬಂದಂತಹವರು ನಾವು. ತಾವು ಬಿನ್ನಿಪೇಟೆಯಿಂದ ವಿಧಾನಸಭೆಗೆ ಚುನಾವಣೆಗೆ ಸ್ಪರ್ಧೆ ಮಾಡಿದಂತಹ ಸಂದರ್ಭದಲ್ಲಿ ನಾವೆಲ್ಲರೂ ತಮ್ಮ ಪರವಾಗಿ ಪ್ರಚಾರ ಮಾಡುವುದಕ್ಕೆ ಬಂದಂತಹವರು. ಲೋಕಸಭಾ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಪಕ್ಷ ತಮಗೆ ಅವಕಾಶ ಮಾಡಿಕೊಟ್ಟಿತ್ತು. ಆಗ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ತಮಗೆ ಅವಕಾಶ ಸಿಗಲಿಲ್ಲ. ಅದರೂ ಕೂಡ ಪಕ್ಷ ವಿಧಾನ ಪರಿಷತ್ತಿಗೆ ಮುಖ್ಯ ಸಚೇತಕರಾಗಿ ಮೂರು ಬಾರಿ ಕೆಲಸ ಮಾಡುವುದಕ್ಕೆ ತಮಗೆ ಅವಕಾಶ ಮಾಡಿಕೊಟ್ಟಿದೆ. ತಮ್ಮಿಂದಾಗಿ ನಾವು ರಾಜಕೀಯವಾಗಿ ನಿಮ್ಮ ಜೊತೆ ಬಂದಿದ್ದೇವೆ. ಕಾಂಗ್ರೆಸ್ ಸರ್ಕಾರ ಬಂದಂತಹ ಎಲ್ಲಾ ಸಂದರ್ಭಗಳಲ್ಲಿ ನಮಗೆ ಒಂದು ಆಸೆ ಇತ್ತು. ಮಾನ್ಯ ಸಲೀಂ ಅಹ್ಮದ್‌ರವರು ಬಹುಶಃ

ಮಂತ್ರಿಯಾಗುತ್ತಾರೆ. ಅವರನ್ನು ನಾವೆಲ್ಲರೂ ನೋಡಬಹುದು ಮತ್ತು ನಾವು ಅವರನ್ನು ಹತ್ತಿರದಿಂದ ಮಾತನಾಡಿಸಬಹುದು ಎನ್ನುವಂತಹ ಒಂದು ಭಾವನೆ ಇತ್ತು. ತಾವು N.S.U.I. ನ ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ, ತಮ್ಮ N.S.U.I. ನ ರಾಜ್ಯದ ಪದಾಧಿಕಾರಿಗಳಾಗಿ ಕೆಲಸ ಮಾಡಿದಂತಹವರು ಬಹಳ ಜನರಿದ್ದಾರೆ. ರಾಷ್ಟ್ರೀಯ N.S.U.I. ನ ಅಧ್ಯಕ್ಷರಾಗಿ ಕೆಲಸ ಮಾಡಿಂತಹ ಸಂದರ್ಭದಲ್ಲಿ ಪದಾಧಿಕಾರಿಗಳಾಗಿ ಕೆಲಸ ಮಾಡಿದಂತಹವರು, ಬೇರೆ ಬೇರೆ ರಾಜ್ಯಗಳ ಅಧ್ಯಕ್ಷರು ಇವರೆಲ್ಲರೂ ಮಂತ್ರಿಗಳಾಗಿ ಮತ್ತು ಬಹಳ ದೊಡ್ಡ ದೊಡ್ಡ ಹುದ್ದೆಯಲ್ಲಿರುವವನ್ನು ನೋಡಿದಂತಹ ಸಂದರ್ಭದಲ್ಲಿ ಶ್ರೀ ಸಲೀ ಅಹ್ಮದ್ ಸಾಹೇಬರಿಗೆ ಇಷ್ಟೆಲ್ಲಾ ರಾಜಕೀಯ ಅನುಭವವಿದೆ. ಅವರಿಗೆ ಏತಕ್ಕೆ ಕೊಡಲಿಲ್ಲ ಎಂದು ನಮಗೆ ಅನ್ನಿಸಿತ್ತು. ತಾವು ವಿದ್ಯಾರ್ಥಿಯಾಗಿದ್ದಾಗ, ರಾಜ್ಯದ N.S.U.I. ನ ಸಂಘಟನೆ ಮಾಡಿ ಮತ್ತು ರಾಷ್ಟ್ರೀಯ N.S.U.I. ನ ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಇಡೀ ರಾಷ್ಟ್ರದಲ್ಲಿ N.S.U.I. ನ ಸಂಘಟನೆ ಮಾಡಿ Talkatora Stadium ನಲ್ಲಿ N.S.U.I. ನ ರಾಷ್ಟ್ರೀಯ ಸಮಾವೇಶ ಮಾಡಿದಿರಿ. ಆಗ ನಾವು ದೆಹಲಿಗೆ ಬಂದಿದ್ದೀವಿ. ಇವೆಲ್ಲ ಅನುಭವವಿದ್ದರೂ ಕೂಡ ತಮಗೆ ಅವಕಾಶ ಸಿಗಲಿಲ್ಲ ಎಂದು ನಮಗೆ ಬಹಳ ಕೊರತೆ ಇತ್ತು. ನಮ್ಮ ಪಕ್ಷದ ಅಧ್ಯಕ್ಷರಾಗಿರುವಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಮತ್ತು ಶ್ರೀ ರಾಹುಲ್ ಗಾಂಧಿ ಸಾಹೇಬರು, ಶ್ರೀಮತಿ ಸೋನಿಯಾ ಗಾಂಧಿ ಮತ್ತು ಪಕ್ಷದ ರಾಜ್ಯದ ಉಸ್ತುವಾರಿಯನ್ನು ವಹಿಸಿಕೊಂಡಿರುವಂತಹ ಶ್ರೀ ರಣದೀಪ್ ಸಿಂಗ್ ಸುರ್ಜೇವಾಲಾರವರು ಹಾಗೂ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾಜಿ ಮುಖ್ಯಮಂತ್ರಿಗಳು ಎಲ್ಲರೂ ಸೇರಿಕೊಂಡು, ತಮಗೆ ಮಂತ್ರಿ ಸ್ಥಾನ ಸಿಗಲಿಲ್ಲ ಎಂಬುದು ಕೊರತೆ ಇತ್ತು. ಅದಕ್ಕಿಂತ ಮಿಗಿಲಾದಂತಹ ಸ್ಥಾನ ಅಂದರೆ ಮೇಲ್ಮನೆಯ ಸಭಾಪತಿಯವರ ಸ್ಥಾನ ಬಹುಶಃ ರಾಜ್ಯಪಾಲರನ್ನು ಬಿಟ್ಟರೆ ಎರಡನೇ protocol ತಮಗೆ ಬರುತ್ತದೆ ಎಂದು ಅಂದುಕೊಳ್ಳುತ್ತೇನೆ. ಆದಾದ ಮೇಲೆ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರಿಗೆ ಬರುತ್ತದೆ. ಅಂತಹ ಒಂದು ಉನ್ನತ ಸ್ಥಾನದಲ್ಲಿ ಇವತ್ತು ತಮ್ಮನ್ನು ಕೂರಿಸಿರುವಂತಹದ್ದು ನಿಜವಾಗಿಯೂ ನಮಗೆಲ್ಲರಿಗೂ ಇವತ್ತು ಸಂತೋಷವಾಗಿದೆ. ಮೇಡಂ ಅವರು ಅವಿರೋಧವಾಗಿ ಆಯ್ಕೆಯಾಗಿತ್ತು ಎಂದು ಮಾನ್ಯ ಅರುಣ್‌ರವರು ಪ್ರಸ್ತಾಪ ಮಾಡಿದಾಗ, ನನಗೂ ಕೂಡ ಅವಿರೋಧವಾಗಿ ಆಯ್ಕೆಯಾಗಬೇಕೆಂಬ ಆಸೆ ಇತ್ತು. ಅದಕ್ಕೆ ನನಗೆ ಅವಕಾಶ ಮಾಡಿಕೊಡಲಿಲ್ಲ ಎಂದು ತಾವು ತಮ್ಮ ಮನದಾಳದ ಮಾತನ್ನು ತೋಡಿಕೊಂಡಿರಿ. ಬಹುಶಃ ತಮ್ಮ ಹಿನ್ನೆಲೆಯನ್ನು ಕಂಡಂತಹವರು ಅಲ್ಲಿರುವವರು ಕೂಡ ತಮಗೂ ಕೂಡ ಅದೇ ರೀತಿಯ ಅವಿರೋಧವಾಗಿ ಆಯ್ಕೆ ಮಾಡುವಂತಹ ಅವಕಾಶ ಮಾಡಿಕೊಟ್ಟಿದ್ದರೆ, ತಮಗೆ ಗೌರವ ಬರುವಂಥದ್ದಲ್ಲ. ಆ ಸ್ಥಾನಕ್ಕೆ ಇನ್ನು ಹೆಚ್ಚು ಗೌರವ ಬರುತ್ತಿತ್ತು ಎನ್ನುವುದು ನನ್ನ ಭಾವನೆ. ತಮ್ಮ ಸಭಾಪತಿಯವರ ಅವಧಿಯಲ್ಲಿ ಮೇಲ್ಮನೆ ಅಂದರೆ "ಚಿಂತಕರ ಛಾವಡಿ" ಎನ್ನುವುದು ಏನಿದೆ, ಇದಕ್ಕೆ ಇನ್ನೂ ಹೆಚ್ಚು ಗೌರವ ಬರುವಂತಹ ರೀತಿಯಲ್ಲಿ ಸದನವನ್ನು ನಡೆಸುವುದರ ಮೂಲಕ ವಿರೋಧ ಪಕ್ಷದವರಿಗೂ ಮಾತನಾಡುವುದಕ್ಕೆ ಹೆಚ್ಚು ಅವಕಾಶಗಳನ್ನು ಕೊಡಬೇಕೆಂದು ಮಾನ್ಯ ಯು.ಟಿ. ಖಾದರ್ ಸಾಹೇಬರು ಹೇಳುತ್ತಿದ್ದರು. ವಿರೋಧ ಪಕ್ಷದವರಿಗೂ ಮಾತನಾಡುವುದಕ್ಕೆ ಹೆಚ್ಚು ಅವಕಾಶಗಳನ್ನು ಕೊಡಬೇಕು. ಏಕೆಂದರೆ ಸಭಾಪತಿ ಮತ್ತು ಉಪ

ಸಭಾಪತಿ ಹಾಗೂ ಸರ್ಕಾರ ವಿರೋಧ ಪಕ್ಷದವರನ್ನು ನಿರ್ಲಕ್ಷ್ಯ ಮಾಡಿದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅರ್ಥ ಬರುವುದಿಲ್ಲ ಎಂದು ಮಾನ್ಯ ಯು.ಟಿ. ಖಾದರ್ ಸಾಹೇಬರು ಹೇಳಿದರು. ತಮ್ಮ ಅವಧಿಯಲ್ಲಿ ಎಲ್ಲರಿಗೂ ಅವಕಾಶಗಳನ್ನು ಕೊಡುವುದರ ಮೂಲಕ ಸದನವನ್ನು ಮತ್ತು ಸದನದ ಗೌರವವನ್ನು ಎತ್ತಿ ಹಿಡಿಯುತ್ತೀರಿ ಎನ್ನುವ ಒಂದು ಭಾವನೆ ಇವತ್ತು ನಮ್ಮಲ್ಲಿ ಇದೆ.

ಡಾ॥ ಉಮಾಶ್ರಿಯವರ ಬಗ್ಗೆ ಹೇಳುವುದಾದರೆ, ಅವರು ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ. ಅವರನ್ನು ಬಹಳ ಜನ ಸದಸ್ಯರು ಹಾಡು ಕೊಂಡಾಂಡಿದ್ದಾರೆ. ನಾನು ಹೇಳುವುದೇನೆಂದರೆ, ಡಾ॥ ಉಮಾಶ್ರೀಯವರು ಒಬ್ಬ ಪರಿಪೂರ್ಣ ಮಹಿಳೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಅವರು ಒಬ್ಬ ಪರಿಪೂರ್ಣ ಮಹಿಳೆ ಎಂದು ನಾನು ಏತಕ್ಕೆ ಹೇಳಬಯಸುತ್ತೇನೆಂದರೆ, ಅವರ ಜೀವನವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಒಂದು ಮಡದಿಯಾಗಿ ಅಂದರೆ ಮನೆಯಲ್ಲಿ ಜವಾಬ್ದಾರಿ ಹೊತ್ತಂತಹ ಒಬ್ಬ ಮಡದಿಯಾಗಿ, ತಾಯಿಯಾಗಿ ಮತ್ತು ಅತ್ಯಂತ ಯಶಸ್ವಿ ಮಹಿಳೆ. ಯಾವತ್ತು ಒಬ್ಬ ಮಡದಿಯಾಗಿ, ತಾಯಿಯಾಗಿ ಮತ್ತು ಯಶಸ್ವಿ ಮಹಿಳೆ ಎಂದು ಹೇಳುತ್ತೇವೆ ಎಂದರೆ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಕೊಡಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತೆಗೆದುಕೊಂಡು ಬಂದು, ಆ ಸಂಸಾರವನ್ನು ನಡೆಸುವುದರ ಮೂಲಕ ಅಂದರೆ ಅವರು ಯಾವ ರೀತಿ ನಡೆಸುತ್ತಾರೆ ಎಂಬುದರಲ್ಲಿ ಅವರು ಯಶಸ್ವಿಯಾಗಿದ್ದಾರೆ ಎಂಬುದನ್ನು ನೋಡಿದೆ. ಅವರ ಮಕ್ಕಳು ಏನು ಕೆಲಸ ಮಾಡಿಕೊಂಡಿದ್ದಾರೆ ಎಂಬುದು ನನಗೆ ಗೊತ್ತಿರಲಿಲ್ಲ. ಒಬ್ಬ ಮಗಳನ್ನು ಡಾಕ್ಟರ್ ಮಾಡಿದ್ದಾರೆ. ಇನ್ನೊಬ್ಬರನ್ನು advocate ಆಗಿ ಮಾಡಿದ್ದಾರೆ. ಅವರು ಕೂಡ ಸಮಾಜದಲ್ಲಿ success ಆದರು ಮತ್ತು ಮಕ್ಕಳನ್ನು ಕೂಡ success ಮಾಡಿದರು. ಮಕ್ಕಳಿಗೆ ಒಂದು ದಾರಿಯನ್ನು ತೋರಿಸಿದರು. ಅಂದರೆ ಮಡದಿಯಾಗಿ, ತಾಯಿಯಾಗಿ ಇವತ್ತು ಯಶಸ್ವಿಯಾಗಿದ್ದಾರೆ ಎನ್ನುವುದೊಂದು ಭಾಗ. ಇನ್ನೊಂದು ಭಾಗ ಜೀವನೋಪಾಯಕ್ಕಾಗಿ ಕಷ್ಟ ಅಂತಾ ಬಂದಾಗ, ಸಾಂಸ್ಕೃತಿಕ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಕಲಾ ವಿಭಾಗದಲ್ಲಿ ಧೀರ್ಘ ಕಾಲ ಉಳಿದರು. ಇವತ್ತು ಚಿತ್ರರಂಗ ವಿಭಾಗದಲ್ಲಿ ಬಹಳಷ್ಟು ಜನ actors ಬಂದು ಹೋಗುತ್ತಿರುತ್ತಾರೆ. ಇವರಷ್ಟು ಬಹಳ ದೀರ್ಘ ಕಾಲದವರೆಗೂ ಯಾರೂ ಉಳಿದಿರುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ಚಲನಚಿತ್ರ ರಂಗದಲ್ಲಿ ಇಷ್ಟೊಂದು ದೀರ್ಘ ಕಾಲದವರೆಗೂ ಇರಬೇಕೆಂದರೆ ಬಹಳಷ್ಟು ಕಷ್ಟವಿದೆ. ಡಾ॥ ಉಮಾಶ್ರಿಯವರು ಸುಮಾರು 45 ವರ್ಷಗಳ ಕಾಲ ಅದು ಕಲಾ ರಂಗದಲ್ಲಿ ಇರಬಹುದು, ಚಿತ್ರರಂಗದಲ್ಲಿ ಇರಬಹುದು. ಅವರು ಎಲ್ಲಾ ರೀತಿಯ ಪಾತ್ರಗಳನ್ನು ಮಾಡಿದ್ದಾರೆ. ನಾವು ಏನು ಹೇಳುತ್ತೇವೆಂದರೆ "ಆಡು ಮುಟ್ಟದ ಸೊಪ್ಪಿಲ್ಲ" ಎಂದು ಗಾದೆ ಮಾತು ಏನು ಹೇಳುತ್ತೇವೆಯೋ, ಅದೇ ರೀತಿ ಡಾ॥ ಉಮಾಶ್ರೀಯವರು ಮಾಡದೇ ಇರುವಂತಹ ಪಾತ್ರಗಳೇ ಇಲ್ಲ. ಬಹುಶಃ ನಾವೆಲ್ಲ ಸಣ್ಣ ಹುಡುಗನಾಗಿದ್ದಾಗಿನಿಂದ ಅವರು ಅಭಿನಯಿಸಿರುವ ಚಲನಚಿತ್ರಗಳಲ್ಲಿ ಬಹಳ ಉತ್ಸಾಹಕತೆಯಿಂದ ನೋಡುತ್ತಾ ಬಂದಿದ್ದೇನೆ.

(ಮುಂದು)

(745) 18.08.2026 1.00 TCH-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಮುಂದು):-**

ಆಮೇಲೆ ಮಾನ್ಯ ಸುದರ್ಶನ್ ಸಾಹೇಬರು Chairman and Deputy Chairman ಇದ್ದಾಗ ಅವರ ಬಳ ನಾನು ಬರುತ್ತಿದ್ದೆನು. ಆಗ ಇವರು ಕೂಡ 2001-07ರ ಮೊದಲನೇ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದ ಸಂದರ್ಭದಲ್ಲಿ Chairman officeಗೆ ಬಂದಾಗಿನಿಂದ ನಾನು ಅವರನ್ನು ಬಹಳ ಹತ್ತಿರದಿಂದ ನೋಡುತ್ತಿದ್ದೆನು. ಮತ್ತೆ ಮಾನ್ಯ ಸುದರ್ಶನ್‌ರವರ ಮಡದಿಯವರು ತೀರಿಕೊಂಡಾಗ ವೇಮಗಲ್‌ಗೂ ಡಾ: ಉಮಾಶ್ರೀಯವರು ಬಂದಿದ್ದರು. ಅವೊತ್ತಿನಿಂದ ನಾವು ಅವರನ್ನು ನೋಡುತ್ತಿದ್ದೆವು. ಎರಡನೆಯ ಭಾಗವಾದ ಚಲನಚಿತ್ರ ರಂಗ ಮತ್ತು ಕಲಾ ವಿಭಾಗದಲ್ಲಿ ಇವತ್ತಿನ ದಿವಸ ಎಲ್ಲಾ ಪ್ರಶಸ್ತಿಗಳು ಬಂದಿರುವುದನ್ನು ನೋಡಿದ್ದೇವೆ. ಅವರಿಗೆ ರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ, ರಾಜ್ಯ ಪ್ರಶಸ್ತಿಗಳು ಬಂದಿವೆ. ಪ್ರಶಸ್ತಿಗಳ ಒಂದು ದೊಡ್ಡ ಪಟ್ಟಿಯೇ ಇದೆ. ಅವರು ಪೋಷಕ ನಟಿಯಾಗಿ ಪ್ರಶಸ್ತಿ ತೆಗೆದುಕೊಂಡಿದ್ದಾರೆ, ನಟಿಯಾಗಿ ಪ್ರಶಸ್ತಿ ತೆಗೆದುಕೊಂಡಿದ್ದಾರೆ. ಎಲ್ಲಾ ರೀತಿಯ ಪ್ರಶಸ್ತಿಗಳು ಬಂದಿವೆ. Filmfare ಪ್ರಶಸ್ತಿಗಳು ಬಂದಿವೆ. ಬೇರೆ ಬೇರೆ ದೇಶಗಳಿಗೆ ಹೋಗಿ ಬಂದಿದ್ದಾರೆ. ಕಲಾ ರಂಗದಲ್ಲಿ ಅವರು ಸಲ್ಲಿಸಿದಂತಹ ಸೇವೆಯನ್ನು ಗುರುತಿಸಿ ಸರ್ಕಾರಗಳು, ಸಂಘ-ಸಂಸ್ಥೆಗಳು... ಅವರು 'ಅಕ್ಕ ಸಮ್ಮೇಳನಕ್ಕೆ ಹೋಗಿ ಬಂದಿದ್ದಾರೆ. ಕಲಾವಿದೆಯಾಗಿಯು 'ಪರಿಪೂರ್ಣ ಮಹಿಳೆ' ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ದೀರ್ಘಕಾಲ ಸುಮಾರು 470 ಚಲನಚಿತ್ರಗಳಲ್ಲಿ ನಟಿಸುವುದೆಂದರೆ ಅಷ್ಟು ಸುಲಭವಿಲ್ಲ ಅಥವಾ ಕನ್ನಡದ ಜೊತೆಗೆ ಬೇರೆ ಬೇರೆ ಭಾಷೆಗಳಾದ ತೆಲುಗು, ತಮಿಳು, ಕೊಂಕಣಿ ಮತ್ತು ತುಳು ಈ ಎಲ್ಲಾ ಭಾಷೆಗಳಲ್ಲಿ ನಟಿಸಿದ್ದಾರೆ. ಮೂರನೆಯದಾಗಿ, ಇವತ್ತಿನ ದಿವಸ ರಾಜಕಾರಣದಲ್ಲಿ ಮಹಿಳೆಯರು ಯಶಸ್ವಿಯಾಗುವುದು ಅಷ್ಟು ಸುಲಭವಿಲ್ಲ. ಏಕೆಂದರೆ ರಾಜಕಾರಣದಲ್ಲಿ ಮಹಿಳೆಯರು ಯಶಸ್ವಿಯಾಗುವುದಕ್ಕೆ reservation ಇಲ್ಲ, ಅಥವಾ ಇನ್ನೊಂದಿಲ್ಲ. Reservation ಇದೆ. ಮಾನ್ಯ ಸದಸ್ಯರಾದ ಶ್ರೀ ಶಿವಣ್ಣ.ಬಿ.ಎಸ್‌ರವರು ಹೇಳಿದರು. ಅದು ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ನಾವು reservation ಕೊಟ್ಟಿದ್ದೇವೆ. ಅಂದರೆ ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ reservation ಇದೆ. ಆದರೆ ರಾಜ್ಯದ ವಿಧಾನಸಭೆಯಲ್ಲಿ, ವಿಧಾನ ಪರಿಷತ್‌ನಲ್ಲಿ, ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ reservation ಇಲ್ಲ. ಇಂತಹ ಸಂದರ್ಭದಲ್ಲಿ ಒಂದು ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡು ಆ ಪಕ್ಷ ವಹಿಸಿದಂತಹ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ಪಕ್ಷವು ಯಾವುದೇ ಸಂದರ್ಭದಲ್ಲಿ ಯಾವುದೇ ಜವಾಬ್ದಾರಿಗಳನ್ನು ಕೊಟ್ಟರೂ, ಅದು ಪಕ್ಷದ ಚುನಾವಣೆ ನಡೆಸತಕ್ಕಂಥದ್ದು ಇರಬಹುದು ಅಥವಾ ಪಕ್ಷದ ಸಂಘಟನೆಯ ಜವಾಬ್ದಾರಿ ಇರಬಹುದು ಅಥವಾ ಬೇರೆ ಬೇರೆ ವಿಭಾಗದ ಜವಾಬ್ದಾರಿ ಇರಬಹುದು. ಡಾ: ಉಮಾಶ್ರೀಯವರಿಗೆ ನಾನಾ ಆಯ್ಕೆಯ ಜವಾಬ್ದಾರಿಗಳನ್ನು ಕೊಟ್ಟಿದ್ದು, ಇವೆಲ್ಲದರಲ್ಲೂ ಕೂಡ ಯಶಸ್ವಿಯಾಗಿರುವುದಕ್ಕೆ ಪಕ್ಷ ಅವರನ್ನು ಗುರುತಿಸಿ, ವಿಧಾನ ಪರಿಷತ್ತಿನಲ್ಲಿ ಅವರಿಗೆ 2 ಬಾರಿ ಅವಕಾಶ ಮಾಡಿಕೊಟ್ಟಿದ್ದಾರೆ. ಒಂದು ಬಾರಿ ಅವರನ್ನು ನಾಮನಿರ್ದೇಶನ ಮಾಡಿದ್ದಾರೆ. ಇನ್ನೊಂದು ಬಾರಿ ಮಾನ್ಯ ಶಾಸಕರಿಂದ ಆಯ್ಕೆಯಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ವಿಧಾನಸಭೆಗೂ ಕೂಡ ಎರಡು ಬಾರಿ ಅವಕಾಶ ಮಾಡಿಕೊಟ್ಟಿದ್ದಾರೆ. ಒಂದು ಬಾರಿ ಸೋತಿದ್ದಾರೆ. ಇನ್ನೊಂದು ಬಾರಿ ಗೆದ್ದಿದ್ದಾರೆ. ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 5 ವರ್ಷಗಳ ಕಾಲ ಪೂರ್ಣಾವಧಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಿದಂತಹ ಅನುಭವ ಕೂಡ ಇದೆ. ಹಾಗಾಗಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಾವು ಸದನಕ್ಕೆ ಬಂದಾಗಿನಿಂದ ಅವರನ್ನು ನೋಡುತ್ತಿದ್ದೇವೆ. ಅವರು ಎಲ್ಲಾ ಚರ್ಚೆಗಳಲ್ಲೂ ಕೂಡ ಸಕ್ರಿಯವಾಗಿ ಭಾಗವಹಿಸಿದ್ದಾರೆ. ವಿಶೇಷವಾಗಿ ಧ್ವನಿ ಇಲ್ಲದವರ ಪರವಾಗಿ ಯಾವುದಾದರೂ subject ಬಂದಾಗ ಅವರು ಕಣ್ಣೀರು ಹಾಕಿ ಮಾತನಾಡಿರುವುದನ್ನು ನಾನು ನೋಡಿದ್ದೇನೆ. ಅದಕ್ಕಾಗಿ ಮಾನ್ಯ ಸದಸ್ಯರಾದ ಶ್ರೀ ಶಿವಣ್ಣ ಬಿ.ಎಸ್.ರವರು ಕೂಡ ಹೇಳಿದರು. ಆ ತಾಯಿ ಹೃದಯ ಇದೆಯಲ್ಲಾ, ಅದನ್ನು ತಾಯಿಯಿಂದ ಮಾತ್ರ ನಾವು ನಿರೀಕ್ಷೆ ಮಾಡುವುದಕ್ಕಾಗುತ್ತದೆ. ಅಂತಹ ತಾಯಿಯ ಪಾತ್ರವನ್ನು ವಹಿಸಿಕೊಂಡು ಇವತ್ತಿನ ದಿವಸ ಅವರು ಯಶಸ್ವಿಯಾಗಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ಕೂಡ ಯಶಸ್ವಿಯಾಗಿದ್ದು, ಉಪ ಸಭಾಪತಿಯವರಾಗಿ ಆಯ್ಕೆಯಾಗಿದ್ದಾರೆ. ನಮ್ಮ ಮಾನ್ಯ ಯು.ಟಿ.ಖಾದರ್ ರವರು ಹೇಳಿದಂತೆ ಕಷ್ಟ ಬಂದಂತಹ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಬಿಟ್ಟು ಹೋದರೂ ಕೂಡ ಉಪ ಸಭಾಪತಿಯಾಗಿ ಸದನವನ್ನು ನಡೆಸತಕ್ಕಂಥ ಎಲ್ಲಾ ಅರ್ಹತೆ ಮತ್ತು ಯೋಗ್ಯತೆ ಹಾಗೂ ಶಕ್ತಿ ಆ ತಾಯಿಗೆ ಇದೆಯೆಂದು ಹೇಳಿ ನಾನು ಅವರಿಗೆ ಅಭಿನಂದನೆ ಸಲ್ಲಿಸಿ ನನ್ನ ಮಾತು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಮೇಲ್ಮನೆಗೆ ಉಪ ಸಭಾಪತಿಯಾಗಿ ಡಾ: ಉಮಾಶ್ರೀಯವರು ಆಯ್ಕೆಯಾಗಿದ್ದಾರೆ. ಅವರಿಗೆ ಈ ಸಂದರ್ಭದಲ್ಲಿ ನಾನು ಹೃತ್ಪೂರ್ವಕವಾದಂತಹ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರ ಬಗ್ಗೆ ನಾನು ಕಂಡಿದ್ದು, ಚಿತ್ರರಂಗವಾಗಲೀ ಅಥವಾ ನಾಟಕ, ಇತ್ಯಾದಿ ಬೇರೆ ಬೇರೆ ಪಾತ್ರಗಳನ್ನು ಮಾಡುತ್ತಾರೆ. ನಾವು ಬೇರೆ role ನಲ್ಲಿ ಸಾಕಷ್ಟು ಕಂಡಿದ್ದೇವೆ. ಆದರೆ ನನಗೆ ಅವರು ಹೆಚ್ಚಿಗೆ ಇಷ್ಟವಾಗಿದ್ದು ಏನೆಂದರೆ, ಅವರು ಕನ್ನಡ ಚಿತ್ರರಂಗದಲ್ಲಿ comedian roleನಲ್ಲಿ ಬಹಳ ಚೆನ್ನಾಗಿ ಪಾತ್ರ ಮಾಡೇ ಮಾಡುತ್ತಾರೆ. ಆದರೆ ಒಂದು ಮೆಚ್ಚುಗೆಪಡುವುದೇನೆಂದರೆ, ಅವರ ನಿಜವಾದ ಜೀವನದಲ್ಲೂ ಕೂಡ ಅಷ್ಟೇ ನಗುನಗುತ ನಮ್ಮೆಲ್ಲರನ್ನು ಕಾಣುತ್ತಾರಲ್ಲಾ, ಅದು ನಾವೆಲ್ಲರೂ ಮೆಚ್ಚಿಗೆಪಡುವಂಥದ್ದು. ಬಹುಶಃ ಅಷ್ಟೇ ರಾಜಕೀಯ ಜೀವನದಲ್ಲಿಯೂ ಕೂಡ ಸಾಧನೆ ಸಿಗುವುದಕ್ಕೆ ಅದು ಒಂದು ಕಾರಣ ಎಂದು ನಾನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಬಹಳಷ್ಟು film star ಆಗಿದ್ದವರು ಕೂಡ ಬಹಳ ಉನ್ನತ ಸ್ಥಾನಕ್ಕೆ ಹೋಗಿ ದೊಡ್ಡ ದೊಡ್ಡ ಸ್ಥಾನವನ್ನು ಅಲಂಕರಿಸಿದ್ದಾರೆ. ಇವತ್ತಿನ ದಿವಸ ಡಾ: ಎಂ.ಜಿ. ರಾಮಚಂದ್ರನ್‌ರವರು ಮತ್ತು ಡಾ: ಎನ್.ಟಿ.ರಾಮ್‌ರಾವ್ ರವರಿಗೆ ಬಹಳ ದೊಡ್ಡ ಹೆಸರಿತ್ತು. ಅವರು ಮುಖ್ಯಮಂತ್ರಿಗಳಾಗಿದ್ದರು. ನಾವ್ಯಾರೂ ನಿರೀಕ್ಷೆ ಮಾಡಿರಲಿಲ್ಲ. ಡಾ: ಜೆ. ಜಯಲಲಿತಾರವರು ನಮ್ಮ ರಾಜ್ಯದ film industryನಲ್ಲಿ enter ಆಗಿ ತಮಿಳುನಾಡಿನಲ್ಲೂ ಕೂಡ ಅವರು film star ಆಗಿ ಹೆಸರನ್ನು ಪಡೆದು, ಅನೇಕ

ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಇತ್ತೀಚೆಗೆ ತಮಿಳುನಾಡಿನಲ್ಲಿ ಶ್ರೀ ದಳಪತಿ ವಿಜಯ್‌ರವರು ಕೆಲವೇ ಸಮಯದಲ್ಲೇ ಮುಖ್ಯಮಂತ್ರಿಯಾಗಿದ್ದಾರೆ. ಆದರೆ ಕರ್ನಾಟಕದಲ್ಲಿ ಡಾ: ರಾಜ್‌ಕುಮಾರ್ ರವರು film industryನಲ್ಲಿ ಹಲವಾರು ವರ್ಷಗಳ ಕಾಲ ಇದ್ದರು. ಅದೇ ರೀತಿ ನಮ್ಮ ರಾಜ್ಯದಲ್ಲೂ ಕೂಡ ಬರುತ್ತಾರೆಂದು ನಾವೆಲ್ಲರೂ ನಿರೀಕ್ಷೆ ಮಾಡಿದ್ದೆವು. ಆದರೆ ಏಕೋ ಏನೋ ಗೊತ್ತಿಲ್ಲ. ಬಹುಶಃ ಶ್ರೀ ಶಿವರಾಜ್ ಕುಮಾರ್‌ರವರಿಗೂ ಕೂಡ ಅಂತಹ ಅವಕಾಶ ಸಿಗಲಿಲ್ಲ ಅನಿಸುತ್ತದೆ ಅಥವಾ ಅವರು ಕೂಡ ಪ್ರಯತ್ನ ಮಾಡಲಿಲ್ಲ ಎನಿಸುತ್ತಿದೆ. ಡಾ: ಉಮಾಶ್ರೀಯವರು ಕೂಡ ಒಂದು ದಿನ ನಮ್ಮ ಮುಖ್ಯಮಂತ್ರಿಗಳಾಗುತ್ತಾರೆ ಎಂದು ನಾವೇಕೆ ಆಸೆಪಡಬಾರದು? ಭಗವಂತ ಅವರಿಗೆ ಒಳ್ಳೆಯ ಅವಕಾಶ ಕಲ್ಪಿಸಿಕೊಡಲಿ. ಬಹುಶಃ ಇನ್ನೂ ಸಾಕಷ್ಟು ವಯಸ್ಸು ಇದೆ. ರಾಜಕೀಯಕ್ಕೆ retirement ಇಲ್ಲ. ನೋಡಿ, ಇವತ್ತಿನ ದಿವಸ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಸುಮಾರು ೮೦ ವರ್ಷಗಳಾದರೂ ಕೂಡ ಇನ್ನೂ retire ಆಗುವುದಕ್ಕೆ ತಯಾರಿಲ್ಲ. ಮೊನ್ನೆ ದಿವಸ ಅವರು ಬಹಳ ಚೆನ್ನಾಗಿ ಒಂದು ವಿಚಾರವನ್ನು ಹೇಳಿಬಿಟ್ಟರು. ಅವರು retire ಆಗಬೇಕೆಂದು ನಾನು ಹೇಳುವುದಿಲ್ಲ. ಆದರೆ ಮೊನ್ನೆ ದಿವಸ ಅವರು ಛಲದಿಂದ ಮಾತನಾಡಿದ್ದಾರೆ ಅದಕ್ಕೆ ನಾವೆಲ್ಲಾ ಮೆಚ್ಚುಗೆಪಡಬೇಕು. ಅವರು 'ನಾನು ಸವಾಲಾಗಿ ತೆಗೆದುಕೊಳ್ಳುತ್ತೇನೆ, ಯಾರು ಬರುತ್ತಾರೋ ಬರಲಿ. ನಾನು ಇನ್ನೊಂದು ಅವಧಿಗೆ ಚುನಾವಣೆಗೆ ನಿಂತುಕೊಂಡು ಮತ್ತೆ ಉನ್ನತ ಸ್ಥಾನಕ್ಕೆ ಹೋಗುತ್ತೇನೆ' ಎಂದು ಹೇಳುವಂಥ ಆಸೆ ಏನಿದೆಯಲ್ಲಾ, ಅದೇ ರೀತಿಯಾಗಿ ನನಗೆ ಅನಿಸುತ್ತಿದೆ ಡಾ: ಉಮಾಶ್ರೀಯವರಿಗೂ ಕೂಡ ಈಗ ಉಪ ಸಭಾಪತಿ ಸ್ಥಾನ ಸಿಕ್ಕಿದೆ. ಅಷ್ಟೇ ಅಲ್ಲದೇ ಮುಂದೆ ಅವರೇಕೆ ಮುಖ್ಯಮಂತ್ರಿಗಳಾಗಬಾರದು? ಈ ಶುಭಾಶಯಗಳನ್ನು ಕೂಡ ಈ ಸಂದರ್ಭದಲ್ಲಿ ತಮಗೆ ನೀಡುತ್ತಾ, ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಹೇಳುತ್ತೇನೆ.

**ಸಭಾಪತಿಯವರು:-** ಯುವ ಸ್ನೇಹಿತರಾದ ಶ್ರೀ ರಘು.ಆರ್ ಮತ್ತು ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರು ಮಾತನಾಡಬೇಕೆಂದು ಹೇಳಿದ್ದಾರೆ. ಹಾಗಾಗಿ ಇಬ್ಬರೂ ಎರಡೆರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ಆಯಿತು, ಅವಕಾಶ ಕೊಡುತ್ತೇನೆ.

**ಶ್ರೀ ರಘು. ಆರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಶ್ರೀ ಸಲೀಂ ಅಹಮದ್‌ರವರು ಸಭಾಪತಿಯವರಾದರು ಮತ್ತು ಡಾ: ಉಮಾಶ್ರೀಯವರು ಉಪ ಸಭಾಪತಿಯಾಗಿದ್ದಾರೆ. ಮೊನ್ನೆ ದಿವಸ ಮಾನ್ಯ ಸಲೀಂ ಅಹ್ಮದ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಅವಕಾಶ ಸಿಕ್ಕಿರಲಿಲ್ಲ. ಇಬ್ಬರಿಗೂ ಒಟ್ಟಿಗೆ ಎರಡು ನಿಮಿಷಗಳಲ್ಲಿ ನಾನು ಹೇಳಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬಹಳಷ್ಟು ವರ್ಷಗಳಿಂದ ಸಾರ್ವಜನಿಕ ಕ್ಷೇತ್ರ, ಸಂಘಟನೆ, ಹೋರಾಟದಿಂದ ಬಂದಂಥವರು ನೀವು. ಬಹಳ ಸಂವೇದನಾಶೀಲರು, ಎಲ್ಲರೊಡನೆ ಸ್ಪಂದನೆ ಮಾಡತಕ್ಕಂಥ ಸರಳ ಸಜ್ಜನಿಕೆಯ

ವ್ಯಕ್ತಿತ್ವದೊಂದಿಗೆ ತಾವು ಈ ಪೀಠವನ್ನು ಅಲಂಕರಿಸಿದ್ದು ಬಹುಶಃ ಪ್ರಜಾಪ್ರಭುತ್ವದ ಒಂದು ಅತ್ಯುನ್ನತ ವೇದಿಕೆಯಲ್ಲಿ ತಾವು ಕುಳಿತಿದ್ದು ಅತ್ಯಂತ ಘನತೆ ತರುವಂಥ ವಿಚಾರವಾಗಿದೆ.

ಮತ್ತೆ ಡಾ: ಉಮಾಶ್ರೀ ಅಕ್ಕರವರು ಈ ಕನ್ನಡ ನಾಡು ಕಂಡಂತಹ ಅತ್ಯಂತ ಶ್ರೇಷ್ಠ ಕಲಾವಿದೆ. ಬಹುಶಃ ಕಲಾವಿದರಿಗೆ ಮಾತ್ರ ಅಜಾತ ಶತ್ರು ಎಂದು ಹೇಳಿಸಿಕೊಳ್ಳುವುದಕ್ಕೆ ಬಹುತೇಕ ಸಾಧ್ಯತೆ ಇರತಕ್ಕಂಥದ್ದು. ಅಂತಹ ಒಬ್ಬರು ಅಜಾತ ಶತೃ, ಸ್ನೇಹಮಯಿ ಎಲ್ಲರನ್ನೂ ತಮ್ಮ ನಗು ಮುಖದಿಂದ ಮತ್ತು ಆತ್ಮೀಯತೆಯಿಂದ ಒಂದು ಮಾತೃ ಭಾವನೆಯಿಂದ ಕಾಣುತ್ತಾರೆ. ಏಕೆಂದರೆ ರಾಜಕಾರಣಿಗಳಿಗೆ ಸಾಂಸ್ಕೃತಿಕ ಮನಸ್ಸಿರಬೇಕು. ನಮ್ಮ ಮಾನ್ಯ ಸಭಾಪತಿಯವರಿಗೆ ಅತ್ಯಂತ ಸಾಂಸ್ಕೃತಿಕ ಮನಸ್ಸು ಇದೆ, ಸಾಂಸ್ಕೃತಿ ಪ್ರತಿಭೆ ಇರತಕ್ಕಂಥದ್ದು ನನಗೆ ಅತ್ಯಂತ ಖುಷಿ ತಂದಂತಹ ವಿಚಾರವಾಗಿದೆ. ವಿಶೇಷವಾಗಿ ಡಾ: ರಾಜ್‌ಕುಮಾರ್‌ರವರ ಅಭಿಮಾನಿ ಎಂದು ಹೇಳಿದ್ದೇನೆ. ನಾನು ಡಾ: ರಾಜ್‌ಕುಮಾರ್‌ರವರ ಒಬ್ಬ ಆರಾಧಕ ಭಕ್ತ ಎಂದು ಹೇಳುವುದಕ್ಕೆ ನನಗೆ ಅತ್ಯಂತ ಖುಷಿ ಅನಿಸುತ್ತದೆ. ಬಹುಶಃ ಇಲ್ಲಿ ಸಾಂಸ್ಕೃತಿಕ ಸಮ್ಮಿಲನ ಆಗಿದೆ. ಮಾನ್ಯ ಸಭಾಪತಿಯವರು ಕೂಡ ಸಾಂಸ್ಕೃತಿಕವಾಗಿರತಕ್ಕಂಥವರು. ಡಾ: ಉಮಾಶ್ರೀ ಅಕ್ಕರವರು ಕೂಡ ಸಾಂಸ್ಕೃತಿಕವಾಗಿ ಕನ್ನಡ ನಾಡನ್ನು ಅತ್ಯಂತ ಶ್ರೀಮಂತವಾಗಿ ಬೆಳಗಿದವರು. ಅವರು ಬಡತನದಿಂದ ಬಂದವರು ಎಂದು ಎಲ್ಲರೂ ಹೇಳಿದರು. ಆದರೆ ಅವರು ಬಡತನದಲ್ಲಿ ಬಂದಿದ್ದಕ್ಕಿಂತ 'ಕರ್ನಾಟಕದ ಶ್ರೀಮಂತಿಕೆಯ ಶ್ರೀಮಂತ ಕಲಾವಿದೆಯಾಗಿ ಜನ್ಮ ಎತ್ತಿದ್ದು ಬಹುಶಃ ಕರ್ನಾಟಕದ ಹೆಮ್ಮೆ' 'ಆಡು ಮುಟ್ಟದ ಸೊಪ್ಪಿಲ್ಲ' ಎಂದು ಹೇಳಿದರು. ಅದೇ ರೀತಿ ಒಂದು ಮಹಿಳಾ ಕ್ಷೇತ್ರದಲ್ಲಿ ಯಾವ ಪಾತ್ರವನ್ನು ನಿರ್ವಹಿಸದಂತಹ ಎಲ್ಲಾ ಪಾತ್ರಗಳನ್ನೂ ನಿರ್ವಹಿಸುವ ಮೂಲಕ ಅದಕ್ಕೆ ಜೀವ ತುಂಬಿ, ಆ ಪಾತ್ರಗಳಿಗೆ ರಾಯಭಾರಿಯಾದವರು ಡಾ: ಉಮಾಶ್ರೀಯವರು ಎಂದು ಹೇಳುವುದಕ್ಕೆ ನನಗೆ ಅತ್ಯಂತ ಖುಷಿ ಅನಿಸುತ್ತದೆ. ಅಂದರೆ ಅವರು ಡಾ: ರಾಜ್‌ಕುಮಾರ್ ರವರ ಜೊತೆ ಮಾತ್ರ ಅಭಿನಯಿಸಲಿಲ್ಲ ಎನ್ನತಕ್ಕಂಥದ್ದು ಒಂದು ದಾಖಲೆ. ಹೌದಲ್ಲವೇ? ಅವರ ಪುತ್ರರ ಜೊತೆ ಅಭಿನಯಿಸಿದ್ದಾರೆ. ಅವರು ಡಾ: ರಾಜ್‌ಕುಮಾರ್‌ರವರ ಜೀವಮಾನ ಪ್ರಶಸ್ತಿಯನ್ನು ಕೂಡ ಪಡೆದಿದ್ದಾರೆ. ನಮಗೆಲ್ಲಾ ಏನು ಆಸೆ ಇತ್ತು ಎಂದರೆ, ತಾವು ಮಂತ್ರಿಯಾಗಿದ್ದರೆ ಸಾಮಾಜಿಕ ನ್ಯಾಯವನ್ನು ಪ್ರತಿನಿಧಿಸುತ್ತಿದ್ದರು, ಸಾಂಸ್ಕೃತಿಕ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು ಮತ್ತು ಅದರ ಜೊತೆಗೆ ಮಹಿಳಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು, ಆದಾಗ್ಯೂ ಈಗ ಅವರು ಈ ಪೀಠವನ್ನು ಅಲಂಕರಿಸಿದ್ದಾರೆ. ಏಕೆಂದರೆ 2027 ಏಪ್ರಿಲ್‌ನಲ್ಲಿ ಡಾ: ರಾಜ್‌ಕುಮಾರ್‌ರವರ ಶತಮಾನೋತ್ಸವ ಆರಂಭವಾಗುತ್ತದೆ. ತಾವು ಇದ್ದು ಆ ಕಾಲದಲ್ಲಿ ಪ್ರಾರಂಭ ಮಾಡಿದ್ದರೆ ಆ ಕ್ಷೇತ್ರದವರೇ ಆ ಖಾತೆಯವರು ಆಗಿರುತ್ತಿದ್ದರು ಎಂದು ತಮಗೆಲ್ಲಾ ಖುಷಿ ಆಗುತ್ತಿತ್ತು. ಆದ್ದರಿಂದ ಈ ಪೀಠದಲ್ಲಿ ಅನೇಕ ಮಹಿಳೆಯವರು ಸಭಾಪತಿಯವರ ಹುದ್ದೆಯಲ್ಲಿ ಸಮರ್ಥವಾಗಿ ಕೆಲಸ ಮಾಡಿದ್ದಾರೆ. ಶ್ರೀಮತಿ ಕೆ.ಎಸ್.ನಾಗರತ್ನ ರವರು ಇರಬಹುದು, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಇದ್ದರು. ಈ ಒಂದು ಪೀಠದಲ್ಲಿ ಶ್ರೀಮತಿ ರಾಣಿ ಸತೀಶ್‌ರವರು ಮತ್ತು ಶ್ರೀಮತಿ ವಿಮಲಾಗೌಡರವರು ಕೂಡ ಇದ್ದರು. ಅಂತಹ ಒಂದು ಪರಂಪರೆಯನ್ನು ತಾವು ಮುಂದುವರೆಸುವ ಮೂಲಕ ಒಬ್ಬರು ಮಾದರಿ ಸಭಾಪತಿಯಾಗಿ ಮತ್ತು ಉಪ ಸಭಾಪತಿಯಾಗಿ ಕೆಲಸ ಮಾಡಿ

ಕರ್ನಾಟಕದ ಇತಿಹಾಸದಲ್ಲಿ, ವಿಧಾನ ಪರಿಷತ್ತಿನ ಇತಿಹಾಸದಲ್ಲಿ ತಮ್ಮ ಹೆಜ್ಜೆ ಗುರುತು ಶಾಶ್ವತವಾಗಿ ಮೂಡುವಂತಾಗಲಿ ಮತ್ತು ದಾಖಲೆಯಾಗಲಿ ಎಂದು ಹೇಳಿ, ಮತ್ತೊಮ್ಮೆ ತಮಗೆ ಅಭಿನಂದಿಸಿ ನನ್ನ ಮಾತು ಮುಗಿಸುತ್ತೇನೆ.

**(ಮುಂದು)**

(746)18.8.2026/1.10/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೆ ಮತ್ತು ಉಪ ಸಭಾಪತಿಯವರಿಗೆ ನಾನು ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಎರಡು ಘಟನೆಗಳನ್ನು ಮಾತ್ರ ನೆನಪಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ನಾನು ವಿಧಾನ ಪರಿಷತ್ ಶಾಸಕನಾಗಿ ಬರಬೇಕಾದರೆ ಮನಸ್ಸಿನಲ್ಲಿ ಒಂದು ತುಮುಲ, ದುಗುಡ ಇತ್ತು. ನಾನು ಸದನಕ್ಕೆ ಬಂದಾಗ ನನಗೆ ಶಕ್ತಿ ತುಂಬಿದವರು ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರು. ಅವರು ಪ್ರತಿಬಾರಿ, ಪ್ರತಿ ಹೆಜ್ಜೆಗೂ ಶಕ್ತಿ ತುಂಬಿದರು. ಅದರ ನಂತರ ಈ ದೇಶದ ಪ್ರಧಾನಮಂತ್ರಿಗಳನ್ನು ಯಾರೋ ಒಬ್ಬರು ಕೆಟ್ಟದಾಗಿ ಬೈದದ್ದಕ್ಕೆ ನಾವು ಹೋರಾಟ ಮಾಡಿದೆವು. ತುಂಬಿದ ಕೊಡ ತುಳುಕುವುದಿಲ್ಲ ಎಂದು ಕನ್ನಡದ ಗಾದೆಯೊಂದಿದೆ. ಆದರೆ ಪಕ್ಷದ ಮುಖ್ಯ ಸಚೇತಕರಾಗಿ ಅದಕ್ಕೆ ಅವರು ಸಪೋರ್ಟ್ ಮಾಡಲೇ ಇಲ್ಲ. ನಾನು ನಿಮ್ಮ ಹತ್ತಿರ ಮಾತನಾಡಿದಾಗ ಅದಕ್ಕೆ ಮೌನವಾಗಿ ಅವರು ಮಾತನಾಡಿದ್ದು ತಪ್ಪು ಎಂದು ಹೇಳಿದಾಗ, ಅವತ್ತಿನಿಂದ ನನಗೆ ನಿಮ್ಮ ಮೇಲಿನ ಗೌರವ ದ್ವಿಗುಣವಾಯಿತು. ದೇಶದ ಪ್ರಧಾನಮಂತ್ರಿ ಇರಬಹುದು ಅಥವಾ ಮುಖ್ಯಮಂತ್ರಿ ಇರಬಹುದು, ಅವರು ಎಲ್ಲರ ಮುಖ್ಯಮಂತ್ರಿ ಹಾಗೂ ಎಲ್ಲರ ಪ್ರಧಾನಮಂತ್ರಿ. ಆದರೆ ನೀವು ಅದಕ್ಕೆ ಸಪೋರ್ಟ್ ಮಾಡದಿದ್ದುದು ನನ್ನ ಜೀವನದಲ್ಲಿ, ನನ್ನ ಮನಸ್ಸಿನಲ್ಲಿ ನಿಮ್ಮ ಮೇಲಿರುವ ಗೌರವ ಇಮ್ಮಡಿಯಾಯಿತು. ಅವರು ತುಂಬಾ ಸಾಧು ಸ್ವಭಾವದವರು. ತುಂಬಾ ವರ್ಷದ ರಾಜಕೀಯ ಇತಿಹಾಸ ನಿಮ್ಮದು. ಆ ಕಾರಣಕ್ಕೆ ಈ ಚಿಂತಕರ ಚಾವಡಿಯನ್ನು ಅತ್ಯಂತ ಉತ್ತಮ ರೀತಿಯಲ್ಲಿ ತೆಗೆದುಕೊಂಡು ಹೋಗುತ್ತೀರಿ ಎನ್ನುವ ವಿಶ್ವಾಸದಿಂದ ನಾನು ನಂಬಿರುವ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಡಾ: ಉಮಾಶ್ರೀ ಅವರ ಬಗ್ಗೆ ಹೇಳುವುದಾದರೆ ನಾನು ಸದನಕ್ಕೆ ಬಂದಾಗ ಆಡಳಿತ ಪಕ್ಷದ ಎಲ್ಲರ ಜೊತೆಯೂ ಅತ್ಯಂತ ಪ್ರೀತಿಯಿಂದ ಮಾತನಾಡಿಕೊಂಡಿದ್ದ ಹುಡುಗ ನಾನು. ಹಾಗೆ ಮಾತನಾಡಬೇಕಾದರೆ ನಾನು ಡಾ: ಉಮಾಶ್ರೀ ಅವರ ಹತ್ತಿರ 'ಅಕ್ಕ ನನಗೂ ಕೂಡ ಒಂದು ಸಿನಿಮಾದಲ್ಲಿ ಚಾನ್ಸ್ ಸಿಗಬಹುದೇ? ಎಂದು ಕೇಳಿದೆ. ನಾನು ಕೂಡ ಒಂದು ಹಿಂದಿ ಚಿತ್ರವನ್ನು ಪ್ರೊಡ್ಯೂಸ್ ಮಾಡಿ ಅದರಲ್ಲಿ ಒಂದು Inspector ರೋಲ್ ಮಾಡಿದ್ದೆ. ಅದು 'ಕೋವಿಡ್' ಸಮಯದಲ್ಲಿ ಸಕ್ಸಸ್ ಆಗದೇ ಕೈ ಸುಟ್ಟುಕೊಂಡಿದ್ದೆ. ನಾನು ಡಾ: ಉಮಾಶ್ರೀ ಅಕ್ಕನವರ ಜೊತೆ ಮಾತನಾಡಬೇಕಾದರೆ ಅವರು ಆ ಕಡೆ ಇದ್ದರು, ನಾನು ಈ ಕಡೆ ಇದ್ದೆ. ಚಲನಚಿತ್ರದಲ್ಲಿ ನಟನೆ ಬಗ್ಗೆ ಕೇಳಿದಾಗ ಅವರು ಮಾಡಬಹುದು, ಆದರೆ ನಿನ್ನ ಮೂಗು ನೇರವಾಗಿಲ್ಲ ಸ್ವಲ್ಪ ಓರೆಯಾಯಾಗಿದೆ ಎಂದು ಹೇಳಿದರು. ಅಂದರೆ

ಅವರು ಅಲ್ಲಿ ಕುಳಿತುಕೊಂಡು ನನ್ನನ್ನು observe ಮಾಡಿದ್ದರು. ಅದರ ಜೊತೆಗೆ ಎಲ್ಲರೂ ತಾಯಿ ಎಂಬ ಮಾತನ್ನು ಹೇಳಿದರು. ತಾಯಿಗೆ ಉನ್ನತವಾದ ಸ್ಥಾನವನ್ನು ಕೊಟ್ಟಿರುವುದು ಭಾರತ ದೇಶ ಮಾತ್ರ. ನಾವು ನದಿಯನ್ನು ಮತ್ತು ಭೂಮಿಯನ್ನು ತಾಯಿ ಎಂದು ಸ್ವೀಕಾರ ಮಾಡಿದ್ದೇವೆ. ತಾಯಿ ಎಂದರೆ ಅದು ಎತ್ತರವಾದ ಸ್ಥಾನ. ಪ್ರತಿಯೊಬ್ಬರು ಕೂಡ ಅವರನ್ನು ತಾಯಿ ಎಂದು ಕರೆದಿದ್ದಾರೆ. ಡಾ: ಉಮಾಶ್ರೀ ಅಕ್ಕನವರೇ ನೀವು ನಿಮ್ಮ ಜೀವನದಲ್ಲಿ ಅತ್ಯಂತ ಯಶಸ್ಸನ್ನು ಪಡೆದಿದ್ದೀರಿ. ಇಲ್ಲಿ ಕೂಡ ತಾವು ಉಪ ಸಭಾಪತಿಗಳಾಗಿದ್ದು, ನಾವೆಲ್ಲರೂ ಒಟ್ಟಿಗೆ ಒಂದಾಗಿ ಚಿಂತಕರ ಚಾವಡಿಯಲ್ಲಿ ಈ ರಾಜ್ಯಕ್ಕೆ ಅತ್ಯುತ್ತಮವಾದ ಕೆಲಸವನ್ನು ಮಾಡಬೇಕಾದರೆ ನಿಮ್ಮ ಸಹಕಾರ ಬೇಕು. ನಾವೆಲ್ಲರೂ ಒಟ್ಟಾಗಿ, ಒಂದಾಗಿ ಕೆಲಸ ಮಾಡುವುದಕ್ಕೆ ನಿಮ್ಮ ಆಶೀರ್ವಾದ ಇರಲಿ ಎಂದು ಪ್ರಾರ್ಥನೆ ಮಾಡುತ್ತಾ ಇಬ್ಬರಿಗೂ ಶುಭವಾಗಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ಡಾ: ಉಮಾಶ್ರೀ ಅವರ ಕುರಿತು ಮಾತನಾಡಬೇಕಾದರೆ ನನಗೆ ಬಹಳ ಖುಷಿ ಎನಿಸುತ್ತದೆ. ವಿಶೇಷವಾಗಿ ಬಾಗಲಕೋಟೆ ಜಿಲ್ಲೆ ಅವರ ರಾಜಕೀಯ ಕಾರ್ಯಕ್ಷೇತ್ರವಾಗಿದೆ. ಅಂದರೆ ಅವರು ನಮ್ಮ ಜಿಲ್ಲೆಯವರೇ. ಬೆಂಗಳೂರಿನಲ್ಲಿ ಜನಿಸಿ ನಾಟಕ, ರಂಗಭೂಮಿಯಿಂದ ಯಕ್ಷಗಾನ, ಚಲನಚಿತ್ರದಲ್ಲಿ ತಮ್ಮದೇ ಆದಂತಹ ಮೇರು ವ್ಯಕ್ತಿತ್ವವನ್ನು ಬೆಳೆಸಿಕೊಂಡು ಚಿತ್ರರಂಗದಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿರುವಂತಹ ಡಾ: ಉಮಾಶ್ರೀ ಅಕ್ಕನವರು ನಮ್ಮ ಬಾಗಲಕೋಟೆ ಜಿಲ್ಲೆಗೆ ಬಂದರೆ ಎಲ್ಲರೂ ಅವರನ್ನು ಅಕ್ಕ ಎಂದು ಕರೆಯುತ್ತಾರೆ. ನಾವು ಕೂಡ ಬಹಳ ಸಲ ಭೇಟಿಯಾದಾಗ ಅಕ್ಕ ಎಂದು ಅವರನ್ನು ಸಂಭೋಧನೆ ಮಾಡುತ್ತೇವೆ. ಬಾಗಲಕೋಟೆ ಜಿಲ್ಲೆಯಲ್ಲಿ ಅವರು ಶಾಸಕರಾಗಿ, ಸಚಿವರಾಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಬಹಳಷ್ಟು ಉತ್ತಮವಾದ ಕೆಲಸ ಕಾರ್ಯಗಳನ್ನು ಮಾಡಿ, ಎಲ್ಲರ ಪ್ರೀತಿ ವಿಶ್ವಾಸವನ್ನು ಗಳಿಸಿರುವಂತಹ ರಾಜಕಾರಣಿಯಾಗಿ ಅವರು ನಮ್ಮ ಜಿಲ್ಲೆಯಲ್ಲಿ ಸೇವೆಯನ್ನು ಮಾಡಿದ್ದರು. ವಿಶೇಷವಾಗಿ ಬನಹಟ್ಟಿ ಮತ್ತು ರಬಕವಿ ಕ್ಷೇತ್ರದಲ್ಲಿ ಮೊದಲನೇ ಬಾರಿ ಬಂದು, ಚುನಾವಣೆಗೆ ಸಿದ್ಧತೆಯನ್ನು ಮಾಡುವಂತಹ ಸಂದರ್ಭದಲ್ಲಿ ನಾವೆಲ್ಲಾ ಅಂದುಕೊಂಡಿದ್ದೆವು, ಬೆಂಗಳೂರಿನಿಂದ ಬಾಗಲಕೋಟೆಯಂತಹ ಜಿಲ್ಲೆಗೆ ಬಂದು, ಇವರು ಹೇಗೆ ಯಶಸ್ವಿಯಾಗುತ್ತಾರೋ ಎಂಬುದನ್ನು ನೋಡಿ 'ಅಕ್ಕಾ, ಬಹಳ ದೂರಕ್ಕೆ ಬಂದಿದ್ದೀರಿ ಅಲ್ಲೇ ಎಲ್ಲಾದರೂ ಸಮೀಪದಲ್ಲಿಯೇ ಕ್ಷೇತ್ರವನ್ನು ನೋಡಬೇಕಾಗಿತ್ತು' ಎಂದಾಗ 'ಇಲ್ಲಿ ನಿಮ್ಮ ಅಣ್ಣನವರು ಇರುತ್ತಾರೆ ಅದಕ್ಕೆ ನಮ್ಮನ್ನು ದೂರವಿಡುತ್ತಿದ್ದೀರಾ' ಎಂಬ ಚಾಟಿಯೇಟು ಬೀಸಿದರು. ಆದರೆ ಎರಡನೇ ಅವಧಿಯಲ್ಲಿ ಅತ್ಯಂತ ಯಶಸ್ವಿಯಾಗಿ ಅವರು ಶಾಸಕರಾಗಿ ಮಂತ್ರಿಯಾಗಿ ಉತ್ತಮವಾದಂತಹ ಸೇವೆಯನ್ನು ನಮ್ಮ ಜಿಲ್ಲೆಗೆ ಕೊಟ್ಟಿದ್ದರು. ಈಗಾಗಲೇ ಅವರ ಬಗೆಗೆ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಆದ್ದರಿಂದ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಬಯಸುವುದಿಲ್ಲ. ಅವರ ವ್ಯಕ್ತಿತ್ವವನ್ನು ನೋಡಿದರೆ, ಅವರಿಗೆ ಎಷ್ಟು ಪ್ರಶಸ್ತಿಗಳು ಬಂದಿವೆ ಎಂದರೆ ಒಂದು ಪುಟಕ್ಕಿಂತಲೂ ಹೆಚ್ಚಿನ ಪ್ರಶಸ್ತಿಗಳನ್ನು ಪಡೆದುಕೊಂಡಿರುವಂತಹ ಕೀರ್ತಿ ಅವರಿಗಿದೆ. ಭಗವಂತ ಅವರಿಗೆ ರಾಜಕೀಯವಾಗಿ ಇನ್ನಷ್ಟು ಬೆಳೆಯುವಂತಹ ಶಕ್ತಿಯನ್ನು ಕೊಡಲಿ, ಜೊತೆಗೆ

ಉಪಸಭಾಪತಿಗಳಾಗಿ ತಾವು ಸಭಾಪತಿ ಸ್ಥಾನದಲ್ಲಿ ಕುಳಿತಾಗ ಎರಡೂ ಕಡೆ ತಮ್ಮ ಗಮನ ಕೊಟ್ಟು, ಎಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸ ತಮ್ಮಿಂದಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಮಾನ್ಯ ಸಭಾಪತಿಗಳ ಬಗ್ಗೆ ಮಾತನಾಡುವುದಕ್ಕೆ ಮೊನ್ನೆ ದಿವಸ ನನಗೆ ಅವಕಾಶ ಸಿಗಲಿಲ್ಲ. ಮುಖ್ಯಮಂತ್ರಿಗಳಿದ್ದಂತಹ ಸಂದರ್ಭದಲ್ಲಿ ನಾವು ನಾಲ್ಕಾರು ಜನರು ಉಳಿದಿದ್ದೆವು. ಇವತ್ತು ತಾವು ಸಭಾಪತಿಗಳಾಗಿ ಬಂದಿದ್ದೀರಿ. ನಾವು ದೂರದಿಂದ ನೋಡುತ್ತಿದ್ದೆವು, ಹತ್ತಿರದಿಂದ ಮಾತನಾಡಿದ್ದೇವೆ. ರಾಜಕೀಯ ಜೀವನದಲ್ಲಿ ನಿಮ್ಮದು ಇಷ್ಟು ದೊಡ್ಡ ಪಯಣ ಎಂದು ನಾವು ಬಯಸಿರಲಿಲ್ಲ. ಸುಮಾರು 40 ವರ್ಷಗಳ ಕಾಲ ವಿದ್ಯಾರ್ಥಿ ದೆಸೆಯಿಂದ ಎನ್.ಎಸ್.ಯು.ಐ., ಯಿಂದ ಸಭಾಪತಿ ಸ್ಥಾನದವರೆಗೆ ತಾವು ಬೆಳೆದು ಬಂದಿರುವಂತಹದ್ದನ್ನು ಅವತ್ತು ನಾವೆಲ್ಲರೂ ಗಮನಿಸಿದಾಗ ಅನಿಸಿದ್ದೇನೆಂದರೆ, ನಾವು ಎಲ್ಲರನ್ನೂ ಕೂಡ under estimate ಮಾಡಿಕೊಂಡು ಕುಳಿತುಕೊಳ್ಳಬಾರದು. ಪ್ರತಿಯೊಬ್ಬ ಶಾಸಕರ ಬಗ್ಗೆಯೂ ನಾವು ತಿಳಿದುಕೊಳ್ಳಬೇಕು ಎಂಬ ಭಾವನೆ ಅವತ್ತು ತಮ್ಮ ಮಾಹಿತಿ ಪತ್ರವನ್ನು ನೋಡಿದಾಗ ಅನಿಸುತ್ತಿತ್ತು. ಹಾಗೆಯೇ ಬಹಳಷ್ಟು ಪರಿಶ್ರಮ ಪಟ್ಟು ತಾವು ಇವತ್ತು ಸಭಾಪತಿಗಳಾಗಿದ್ದೀರಿ. ಸಭಾಪತಿ ಪೀಠಕ್ಕೆ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಿದ್ದಾರೆ ಎಂದು ಭಾವಿಸಿದ್ದೇವೆ. ತಾವು ಎರಡೂ ಕಡೆ ಲಕ್ಷ್ಯ ಕೊಟ್ಟು, ನಮ್ಮಂತಹ ಯುವಕರಿಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಬಹಳಷ್ಟು ಜನ ಹಿರಿಯರಿಗೆ ಅವಕಾಶ ಕೊಟ್ಟು, ಕೊನೆಗೆ ನಮಗೆಲ್ಲಾ ಎರಡೆರಡು ನಿಮಿಷ ಅವಕಾಶ ಎಂದು ಹೇಳುವುದನ್ನು ಅದನ್ನು ಸ್ವಲ್ಪ ಬ್ಯಾಲೆನ್ಸ್ ಮಾಡಬೇಕು. ಹಿಂದಿನ ಸಭಾಪತಿಯವರು ಕೂಡ ನಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದಾರೆ.

**ಸಭಾಪತಿಯವರು:-** ನಾನು ಮುಂದಿನ ದಿನಗಳಲ್ಲಿ ಯಾರ್ಯಾರು ಮಾತನಾಡುತ್ತಾರೆಂದು ಮುಖ್ಯ ಸಚೇತಕರಿಂದ ಪಟ್ಟಿಯೊಂದನ್ನು ತೆಗೆದುಕೊಳ್ಳುತ್ತೇನೆ. ಏಕೆಂದರೆ ಅವರು ಎಲ್ಲವನ್ನೂ ನಮ್ಮ ಮೇಲೆ ಹಾಕಿಬಿಡುತ್ತಾರೆ. ಇಲ್ಲಿಯೂ ಅಷ್ಟೇ, ಅಲ್ಲಿಯೂ ಅಷ್ಟೇ. ನಾವು ಮುಖ್ಯ ಸಚೇತಕರಿಗೆ ಯಾರ್ಯಾರು ಮಾತನಾಡುತ್ತಾರೆಂದು order ನಲ್ಲಿ ಕೊಡಿ ಎಂದು ಹೇಳಿದ್ದೇನೆ. ಅದರ ಪ್ರಕಾರ follow ಮಾಡುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಭಾವನೆಯೇನೆಂದರೆ, ಮೊನ್ನೆ ದಿವಸ ನಾಲ್ಕಾರು ಜನರಿಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ಆಗ ನಾವು Treasury Bench ನಲ್ಲಿರುವಂಥವರಿಗೆ ಅಷ್ಟೇ ಅವಕಾಶ ಸಿಗುತ್ತದೆ ನಾವು ಪ್ರತಿ ಸಲ ವಂಚಿತರಾಗುತ್ತೇವೆ ಎಂದು ಅಂದುಕೊಂಡೆವು. ಹಾಗಾಗದಂತೆ ದಯವಿಟ್ಟು ನಮಗೂ ಕೂಡ ಅವಕಾಶ ಕೊಡಿ. ನಮ್ಮ ಭಾವನೆಗಳನ್ನು, ರಾಜ್ಯದ ಜನತೆಯ ಕಷ್ಟಗಳನ್ನು ಸದನದ ಮುಂದೆ ಹೇಳುವುದಕ್ಕೆ ಅವಕಾಶ ಸಿಗುತ್ತದೆ. ಭಗವಂತ ತಮಗೆ ಇನ್ನೂ ರಾಜಕೀಯ ಶಕ್ತಿಯನ್ನು ಕೊಡಲಿ, ಇನ್ನೂ ಉತ್ತರೋತ್ತರವಾಗಿ ತಮ್ಮ ರಾಜಕೀಯ ಜೀವನ ಬೆಳೆಯಲಿ ಎಂಬ ಆಶಯವನ್ನು ವ್ಯಕ್ತಪಡಿಸಿ, ಈ ಅವಕಾಶಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಸಭಾಪತಿಯವರು:-** ನೂತನವಾಗಿ ಆಯ್ಕೆಯಾದಂತಹ ಉಪ ಸಭಾಪತಿಗಳಾದ ಡಾ: ಉಮಾಶ್ರೀಯವರೇ, ಸಭಾನಾಯಕರೇ, ವಿರೋಧ ಪಕ್ಷದ ನಾಯಕರೇ, ಮಂತ್ರಿಮಂಡಲದ ಸದಸ್ಯರೇ ಹಾಗೂ ಎಲ್ಲಾ ಗೌರವಾನ್ವಿತ

ಸದಸ್ಯರೇ, ಡಾ: ಉಮಾಶ್ರೀ ಅವರು ಅವಿರೋಧವಾಗಿ ಆಯ್ಕೆಯಾದ ನಂತರ ಒಂದು ಗಂಟೆಯಲ್ಲಿ ಅಭಿನಂದನಾ ಭಾಷಣವನ್ನು ಮುಗಿಸಬೇಕೆಂದು ನಾನು ಹೇಳಿದ್ದೆ. ಆದರೆ ಈಗ ಸುಮಾರು ಎರಡು ಗಂಟೆಗಳ ಕಾಲವಾಗಿದೆ. ಅದೇ ನಾವು ಮಹಿಳೆಯರಿಗೆ ಕೊಟ್ಟಂತಹ ದೊಡ್ಡ ಗೌರವ. ಇವತ್ತು ಡಾ: ಉಮಾಶ್ರೀ ಅವರು ಮಂತ್ರಿಯಾಗಿ, ಶಾಸಕರಾಗಿ, ಸಮಾಜಮುಖಿಯಾಗಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದಾರೆ. ನನ್ನ ಜೀವನದ ದೊಡ್ಡ ಒಂದು ಕಾರ್ಯಕ್ರಮದಲ್ಲಿ ಅವರ ಪ್ರತಿಭೆ ಬಗ್ಗೆ ಅವತ್ತೇ ನನಗೆ ಬಹಳಷ್ಟು ಗೊತ್ತಾಗಿದ್ದು. ನಾವು ಚಿಕ್ಕವರಾಗಿದ್ದಾಗ ಅವರ film ಗಳನ್ನು ನೋಡುತ್ತಿದ್ದೆವು, ಸಂತೋಷ ಪಡುತ್ತಿದ್ದೆವು. ನನ್ನ ಕ್ಷೇತ್ರ ಹಾವೇರಿ. ಗದಗ, ಧಾರವಾಡದಲ್ಲಿ ನಾಟಕಗಳನ್ನು ನೋಡುತ್ತಿದ್ದೆವು. ಆದರೆ ‘ಶರ್ಮಿಷ್ಠೆ’ ಎಂಬ ಒಂದು ನಾಟಕ ನೋಡಲು ನಾನು ಮತ್ತು ಮುಖ್ಯಮಂತ್ರಿಗಳು ಹೋಗಿದ್ದೆವು, ಕೆಲವು ಮಾನ್ಯ ಸದಸ್ಯರು ಬಂದಿದ್ದರು. ಆ ನಾಟಕ ನೋಡಿದ ಮೇಲೆ ಅವರ ಮೇಲೆ ನನಗೆ ಹೆಚ್ಚು ಗೌರವ ಬಂದಿತು. ಆ ಸಂದೇಶ, ಅವರ ಭಾವನೆ, ಹಾವ-ಭಾವ ನೋಡಿ ನನಗೆ ರೋಮಾಂಚನವಾಯಿತು. ಅದನ್ನು ನೋಡಿ ನನಗೆ ಇನ್ನೂ ಹೆಚ್ಚಿನ ಗೌರವ ಅವರ ಮೇಲೆ ಬಂದಿತು. ಅಪರೂಪದ ಕಲಾವಿದೆ ಅವರು. ಅದ್ಭುತವಾದ ವ್ಯಕ್ತಿತ್ವ, ಅವರ ಸಮಾಜದ ಬಗ್ಗೆ ಕಾಳಜಿ. ಇದೇ ಸದನದಲ್ಲಿ ನಾವು ವಿರೋಧ ಪಕ್ಷದಲ್ಲಿರುವಾಗ ಸನ್ಮಾನ್ಯ ಹೆಚ್.ಕೆ.ಪಾಟೀಲರು ವಿರೋಧ ಪಕ್ಷದ ನಾಯಕರಾಗಿದ್ದರು. ಇವರು ಕೂಡ ಸದಸ್ಯರಾಗಿದ್ದರು. ಒಂದು ವಿಚಾರದಲ್ಲಿ ನಮ್ಮ ಸಮಾಜಕ್ಕೆ ಅನ್ಯಾಯವಾಗುತ್ತಿದೆ ಎಂದು ಕಣ್ಣೀರು ಹಾಕಿದ ಘಟನೆ ಇವತ್ತಿಗೂ ನನಗೆ ಜ್ಞಾಪಕವಿದೆ. ಅವತ್ತು ಇಡೀ ಸದನ ಏನಾಯಿತು ಎಂದು ಅವರ ಬಳಿಗೆ ಹೋಗಿ ಕೇಳಿದೆವು. ನನ್ನ ಸಮಾಜಕ್ಕೆ ಅನ್ಯಾಯವಾಗುತ್ತಿದೆ, ನಾನು ಇದ್ದು ಕೂಡ ಏನೂ ಪ್ರಯೋಜನವಾಗಿಲ್ಲ ಎಂಬ ಮಾತನ್ನು ಬಹಳ ನೊಂದು ಕಣ್ಣಿರು ಹಾಕಿಕೊಂಡು ಹೇಳಿದರು.

(ಮುಂದು)

(747) 18-08-2026 1-20 KH/VK (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿರಬಹುದು. ನಾವೆಲ್ಲಾ ಹೇಳಿ, ನಿಮ್ಮ ಸಮಸ್ಯೆಗೆ ಪರಿಹಾರ ಕೊಡುತ್ತೇವೆ ಎಂದ ಕೂಡಲೇ ಆವತ್ತು `ಮಂತ್ರಿಗಳ ವೇದಿಕೆ’ ಎಂದು ಘೋಷಣೆ ಮಾಡಿದರು. ಆಗ ಮಾನ್ಯ ಉಮಾಶ್ರೀಯವರನ್ನು ನೋಡಿದೆ. ಅದರಿಂದ ಅವರ ವ್ಯಕ್ತಿತ್ವಕ್ಕೆ ಹಾಗೂ... She is a very good social worker. ಯಾರಾದರೂ ಬಂದು ಸಮಸ್ಯೆ ಹೇಳಿಕೊಂಡರೆ, ಆ ಸಮಸ್ಯೆಗೆ ಪರಿಹಾರವಾಗಿ ಪ್ರಾಮಾಣಿಕ ಪ್ರಯತ್ನ ಕೂಡ ಮಾಡುತ್ತಿದ್ದರು. 5 ವರ್ಷಗಳ ಕಾಲ ಮಂತ್ರಿಗಳಾಗಿ ಒಳ್ಳೆಯ ಕೆಲಸ ಕೂಡ ಮಾಡಿದ್ದಾರೆ. ಅವರದ್ದು ಬಹುಮುಖ ವ್ಯಕ್ತಿತ್ವ. ಅವರು ಅಪರೂಪದ ರಾಜಕಾರಣಿ. ಆ ಹಿನ್ನೆಲೆಯಲ್ಲಿ ತಾವೆಲ್ಲಾ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ. ಮಾನ್ಯ ಉಪ ಸಭಾಪತಿಗಳಾಗಿ ಅವರು ಅವರ ಕರ್ತವ್ಯಗಳನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ

ನಿರ್ವಹಿಸುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಅವರಿಗೆ ಶುಭವನ್ನು ಕೋರುತ್ತಾ, ಅವರಿಗೆ ಒಳ್ಳೆಯದಾಗಲಿ. ಅವರಿಗೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

**ಡಾ: ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಇವತ್ತು ನನ್ನ ಜೀವಮಾನದ . . .

**ಶ್ರೀ ಯು.ಟಿ.ಖಾದರ್:-** ಮಾನ್ಯ ಉಪ ಸಭಾಪತಿಯವರೇ, ತಾವು ಪೀಠದಲ್ಲಿ ಕುಳಿತು ಸಂದೇಶ ಕೊಡಬೇಕೆಂದು ನಮ್ಮ ಮನವಿ.

**೩. ಅಭಿನಂದನೆ ಸ್ವೀಕರಿಸಿದ ನೂತನ ಉಪ ಸಭಾಪತಿಯವರಿಂದ ಧನ್ಯವಾದ ಸಮರ್ಪಣೆ**

**ಡಾ: ಉಮಾಶ್ರೀ (ಉಪ ಸಭಾಪತಿಯವರು):-** ಮಾನ್ಯ ಸಚಿವರೇ, ಧನ್ಯವಾದಗಳು. ಮಾನ್ಯ ಸಭಾಪತಿಯವರೇ, ಇವತ್ತು ನನ್ನ ಜೀವಮಾನದ ಅತ್ಯಂತ ಎತ್ತರದ ಸಂತೋಷದ ಕ್ಷಣಗಳು. ಈ ಒಂದು ಉಪಸಭಾಪತಿಯಾಗಿ ಆಯ್ಕೆಯಾಗಿರುವಂತಹ ಈ ಸಂದರ್ಭದಲ್ಲಿ ನಮ್ಮ ಈ ಸದನದಲ್ಲಿ ಪಕ್ಷಾತೀತವಾಗಿ ಮಾನ್ಯ ಸಭಾನಾಯಕರಾದಿಯಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು, ಎರಡು ಪಕ್ಷದ ಸದಸ್ಯರುಗಳು, ನನ್ನ ಸಹೋದರರಾದಿಯಿಂದಾಗಿ, ಮಾನ್ಯ ಮಂತ್ರಿಗಳು, ಮಾನ್ಯ ಸಭಾಪತಿಯವರುಗಳಿಂದ ಇಷ್ಟೊಂದು ಪ್ರಶಂಸೆ ಮತ್ತು ಪ್ರೋತ್ಸಾಹದ ನುಡಿಗಳನ್ನು ಕೇಳಿ ನನಗೆ ಮನಸ್ಸು ತುಂಬಿ ಬಂದಿದೆ. ನಿಮ್ಮೆಲ್ಲರಿಗೂ ಶರಣು. ಬಹುಶಃ ಇದು ನನ್ನ ಬದುಕಿನಲ್ಲಿ ಭಾವನಾತ್ಮಕ ಕ್ಷಣವೂ ಕೂಡ ಆಗಿದೆ. ನಾನು ಇಲ್ಲಿ ಕುಳಿತು ಇಷ್ಟೆಲ್ಲಾ ಮಾನ್ಯ ಸದಸ್ಯರುಗಳು ಮಾತನಾಡುವಂತಹ ಈ ಸಂದರ್ಭದಲ್ಲಿ ಪದೇ ಪದೇ ನನಗೆ ಜ್ಞಾಪಕ ಬಂದಂತಹ ಒಬ್ಬ ವ್ಯಕ್ತಿ ಮತ್ತು ನನ್ನ ಸಾಧನೆಯ ಶಕ್ತಿ ಎಂದರೆ, ನನ್ನ ಹಡೆದ ತಾಯವ್ವ. ನನ್ನ ಹಡೆದ ತಾಯಿಯ ಹೆಸರು ನಿಂಗಮ್ಮ. ನನ್ನ ಹಾಗೆ ಒಂಟಿ ಬದುಕನ್ನು ಕಂಡ ಜೀವ. ನನ್ನನ್ನೇ ನಾನು ಕಂಡು ಕೊಂಡಾಗ ಇದು ಹೌದೇ ಅನಿಸುವಷ್ಟು ವಿಸ್ಮಯ ನನ್ನ ಬದುಕು. ಇಲ್ಲಿಯವರೆಗೂ ನನ್ನನ್ನು ತಂದು ಮುಟ್ಟಿಸಿದ್ದಾರೆ ಎಂದರೆ, ಇದು ಸಾಮಾನ್ಯವಾದಂತಹ ವಿಷಯವಲ್ಲ. ಅತ್ಯಂತ ಬಡತನದಿಂದ ಕೂಡಿದಂತಹ, ಕೂಲಿ ಕೆಲಸ ಮಾಡುತ್ತಿದ್ದ ಒಬ್ಬ ಹೆಣ್ಣು ಮಗಳ ಗರ್ಭ ಇನ್ನೆಷ್ಟು ಗಟ್ಟಿ. ಅದೆಷ್ಟು ಶಕ್ತಿ. ಆ ತಾಯಿಯ ಗರ್ಭದಲ್ಲಿ ನಾನು ಏನು ಮಾಡಿದ್ದೇನಲ್ಲವೇ? ಅದನ್ನೆಲ್ಲವನ್ನೂ ತಾನು ತನ್ನ ಗರ್ಭದಲ್ಲಿ ತುಂಬಿ ಈ ಶಿಶುವನ್ನು ಭೂಮಿಗೆ ಇಳಿಸಿ ಹೋಗಿದ್ದಾಳೆಯಲ್ಲವೇ? ಅದಕ್ಕೆ ಶರಣು. ಹಾಗೆಯೇ, ೮ ತಿಂಗಳ ಮಗುವನ್ನು ತಂದು ನನ್ನನ್ನು ದತ್ತು ಪುತ್ರಿಯಾಗಿ ಸ್ವೀಕರಿಸಿ ಸಾಕಿ ಸಲುಹಿದ ಸ್ವಾತಂತ್ರ ಹೋರಾಟಗಾರರು, ಕಾಂಗ್ರೆಸ್ ಪಕ್ಷದ ಸದಸ್ಯರು, ಕೂಲಿ ಕಾರ್ಮಿಕರ ನೇಕಾರರು ಆದ ನನ್ನ ತಂದೆ ಮುನಿ ನರಸಪ್ಪನವರು. ಅವರ ಶ್ರೀಮತಿ ರೇವಮ್ಮ ನವರು. ಇವರನ್ನು ಮೊದಲು ನಾನು ನೆನಪು ಮಾಡಿಕೊಳ್ಳುತ್ತಾ, ಅವರಿಗೆ ಇದನ್ನು ಸಮರ್ಪಿಸುತ್ತಾ ನನ್ನ ಈ ತೊದಲು ಮಾತುಗಳನ್ನು ಪ್ರಾರಂಭ ಮಾಡಬೇಕೆಂದು ನನಗನಿಸುತ್ತದೆ.

ಇವತ್ತು ಈ ಉಪಸಭಾಪತಿಯವರ ಸ್ಥಾನವನ್ನು ಕೊಟ್ಟಿರುವಂತಹ ನನ್ನ ಪಕ್ಷದ ಹಿರಿಯ ನಾಯಕರಾದ ಶ್ರೀಮತಿ ಸೋನಿಯಾ ಗಾಂಧಿಯವರು, ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಮಾನ್ಯ ರಾಹುಲ್ ಗಾಂಧಿಯವರು, ಇಂದಿನ ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಮತ್ತು ಅಧ್ಯಕ್ಷರು ಆಗಿರುವಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ನಮ್ಮ ರಾಜ್ಯದ ಉಸ್ತುವಾರಿ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಣದೀಪ್ ಸಿಂಗ್ ಸುರ್ಜೆವಾಲಾ ರವರು ಮತ್ತು ಕೆ.ಸಿ.ವೇಣುಗೋಪಾಲ್ ರವರು, ನಮ್ಮ ಮುಖ್ಯಮಂತ್ರಿಗಳಾದ

ಡಿ.ಕೆ.ಶಿವಕುಮಾರ್‌ರವರು, ಮತ್ತೋರ್ವ ಧೀಮಂತ ನಾಯಕರು, ಹಿಂದುಳಿದ ವರ್ಗದ ಮಹಾನ್ ಶಕ್ತಿಯಾದಂತಹ ಮಾಜಿ ಮುಖ್ಯಮಂತ್ರಿಗಳಾದಂತಹ ಮಾನ್ಯ ಸಿದ್ದರಾಮಯ್ಯನವರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು ನನ್ನೊಂದಿಗೆ ಬೆರೆತು ಪ್ರೀತಿಯನ್ನು ಹಂಚಿದಂತಹ ಅನೇಕ ಜೀವಗಳು. ನನಗೆ ಮಾರ್ಗದರ್ಶನ ಮಾಡುತ್ತಾ, ನನ್ನನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದು ನನಗೆ ಅವಕಾಶಗಳನ್ನು ಕೊಟ್ಟಂತಹವರು. ನಾನು ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಈ ಹೆಣ್ಣುಮಗಳು ರಾಜಕೀಯಕ್ಕೆ ಹೇಗೆ ಬಂದರು, ಏಕೆ ಬರಬೇಕು ಅನಿಸಿತು ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಮಾನ್ಯ ಬಂಗಾರಪ್ಪನವರ ಪಕ್ಷದಲ್ಲಿ ನೋಡಿದ್ದೆ ಎಂದು ಹೇಳಿದರು. ನಿಜವಾಗಿಯೂ ನಾನು ಹೇಳಬೇಕೆಂದರೆ, ನಮ್ಮ ತಂದೆಯದ್ದು ಕಾಂಗ್ರೆಸ್ ಕುಟುಂಬವಾದ್ದರಿಂದ, ಕುಟುಂಬದಲ್ಲಿ ನಡೆಯುತ್ತಿದ್ದಂತಹದ್ದನ್ನು ನೋಡಿದ್ದೆ. ನನ್ನ ತಂದೆ ಹೊರಗಡೆ ಹೋಗುತ್ತಿದ್ದರು, ಬರುತ್ತಿದ್ದರು. ಸಂಪರ್ಕ ಅದು ಇದು. ಇವೆಲ್ಲಾ ಮಗುವಿನಿಂದಲೇ ನನ್ನ ಮೇಲೆ ಪ್ರಭಾವ ಬೀರಿದ್ದು ಹೌದು. ತದನಂತರದಲ್ಲಿ ಮದುವೆ, ವಿದ್ಯಾಭ್ಯಾಸ, ಬೇರೆ ಬೇರೆ ರಂಗಭೂಮಿ, ಎಲ್ಲವೂ ಆಗುತ್ತಾ ಬಂದಾಗ ಸಿನಿಮಾ ನಟಿ ಆದೆ. ಬಹುಶಃ ಅನುಭವ ಕಾಲದಲ್ಲಿ ಅನುಭವ ಚಿತ್ರವನ್ನು ನೋಡಿದಂತಹ ಗೆಳೆಯರು ಇಲ್ಲಿ ಇರಬಹುದು ಎಂದು ಅಂದುಕೊಳ್ಳುತ್ತೇನೆ. ಅನುಭವ ಚಿತ್ರವನ್ನು ನೋಡಿರುವಂತಹ ಬಹಳಷ್ಟು ಜನರು 60 ದಾಟಿದ್ದಾರೆ ಎಂದು ಅಂದುಕೊಳ್ಳುತ್ತೇನೆ. ಇದನ್ನು ಕಾಶೀನಾಥ್ ರವರು ಕೊಟ್ಟಿರುವಂತಹ ಸಿನಿಮಾ. 1980ನೇ ಸಾಲಿನಲ್ಲಿ ಚಿತ್ರರಂಗಕ್ಕೆ ಬಂದೆ. 1978 ರಲ್ಲಿ ಗ್ರಾಮೀಣ ರಂಗಭೂಮಿಯ ಪೌರಾಣಿಕ ನಾಟಕಗಳ ಪಾತ್ರಗಳನ್ನು ಆ ಕಾಲದಲ್ಲಿ ಮಾಡುತ್ತಿದ್ದೆ. ಪೌರಾಣಿಕ ನಾಟಕಗಳು, ಹವ್ಯಾಸಿ ನಾಟಕಗಳು, ಗ್ರಾಮೀಣ ನಾಟಕಗಳು, ವೃತ್ತಿ ರಂಗಭೂಮಿ, ಕಂಪನಿ ನಾಟಕಗಳನ್ನು ಮಾಡುತ್ತಾ ಸಿನಿಮಾ ಜಗತ್ತಿಗೂ ಬಂದು ಬಿಟ್ಟೆ. ನಾನು ಒಂದೇ ರಾತ್ರಿಯಲ್ಲಿ ತಾರೆ ಆಗಿಬಿಟ್ಟೆ. ಯಾರಿಗೂ ಅಂತಹ ಅವಕಾಶ ಸಿಗಲಿಲ್ಲ. ನನ್ನ ಜೀವನದಲ್ಲಿ ಸಿಕ್ಕಿತು. ಆ ಚಿತ್ರ ಎರಡು ವರ್ಷ ಇತ್ತು. ನಾನು ಒಂದೇ ರಾತ್ರಿಗೆ ತಾರೆ ಆಗಿಬಿಡುತ್ತೇನೆ ಎಂದು ಚಿತ್ರ ರಿಲೀಸ್ ಆಗುವವರೆಗೂ ನನಗೆ ಗೊತ್ತಿರಲಿಲ್ಲ. ನಾನು ಯಾರ ಮನೆ ಬಾಗಿಲಿಗೂ ಪಾತ್ರ ಕೇಳಿಕೊಂಡು ಹೋದವಳೇ ಅಲ್ಲ. ಮರುದಿನ ನೋಡಿದರೆ ಇಡೀ ಚಿತ್ರರಂಗದಲ್ಲಿ ಎಷ್ಟೊಂದು ಪಾತ್ರಗಳು ಸಿಗುತ್ತಾ ಹೋಯಿತು. ಏನೆಲ್ಲಾ ಆಗುತ್ತಾ ಹೋಯಿತು. ಎಲ್ಲಾ ಪ್ರಡ್ಯೂಸರ್‌ಗಳು ಉಮಾಶ್ರೀ, ಉಮಾಶ್ರೀ ಎಂದು ಹೇಳುತ್ತಿದ್ದರು. ಮೊದಲ ಬಾರಿಗೆ ನಾನು ಅನುಭವ ಚಿತ್ರದಲ್ಲಿ ಶೃಂಗಾರ ಪಾತ್ರವನ್ನು ಮಾಡಿದ್ದೆ. ತದನಂತರದಲ್ಲಿ ಹಾಸ್ಯ ಪಾತ್ರಗಳು, ದಂದ್ವ ಸಂಭಾಷಣೆ, ಅದು ಇದು ಎಲ್ಲಾ ಆಗಿ ಕೊನೆಗೆ ರವಿಚಂದ್ರನ್ ರವರ 'ಪುಟ್ನಂಜ' ಸಿನಿಮಾ ಬರುವವರೆಗೂ ಕೂಡ ಉಮಾಶ್ರೀಗೆ ಇಂತಹದೊಂದು ದೊಡ್ಡ ಶಕ್ತಿ ಇದೆ. ಇಷ್ಟು ದೊಡ್ಡ ಕಲಾವಿದಳು ಆಗಿದ್ದಾಳೆ ಎನ್ನುವುದು ಗೊತ್ತೇ ಇಲ್ಲ. ಪುಟ್ನಂಜ ಸಿನಿಮಾ ಆದ ಮೇಲೆಯೇ ಗೊತ್ತಾಗಿದ್ದು. ದೇವನೂರು ಮಹದೇವರ 'ಒಡಲಾಳ' ನಾಟಕದಲ್ಲಿ ಹವ್ಯಾಸಿ ರಂಗಭೂಮಿಯಲ್ಲಿ ನಾನು ಪಾತ್ರವನ್ನು

ಮಾಡಿದ್ದೆ. 21-22ನೇ ವಯಸ್ಸಿನ ಹೆಣ್ಣುಮಗಳು 75-80ನೇ ವಯಸ್ಸಿನ ಮುದುಕಿ ಪಾತ್ರವನ್ನು ಮಾಡಿದಾಗ ಈ ಹೆಣ್ಣುಮಗಳಿಗೆ 'ಆಸ್ಕರ್' ಆವಾರ್ಡ್ ಕೊಡಬೇಕೆಂದು ನ್ಯಾಷನಲ್ ಪೇಪರ್‌ನಲ್ಲಿ ಬಂದಿತ್ತು. ನಾನು ರಂಗಭೂಮಿಯಲ್ಲಿ ತಯಾರಾದ ಹೆಣ್ಣುಮಗಳು. ತದನಂತರದಲ್ಲಿ ಪುಟ್ಟಂಜ ಆಯಿತು. ಆಗ ನನಗೆ ನಾನು ರಾಜಕೀಯಕ್ಕೆ ಹೋಗಬೇಕು, ನಾನು ಸಮಾಜ ಸೇವೆ ಮಾಡಬೇಕು, ಹಾಗೆ ಹೀಗೆ ಎಲ್ಲಾ ಅನಿಸುತ್ತಿತ್ತು. ನಮ್ಮ ಸಮಾಜದ ದಯಾನಂದಪುರಿ ಸ್ವಾಮೀಜಿಗಳು ಒಂದು ದಿನ ಕರೆದು ಹೇಳಿದರು. ನಿನಗೆ ತುಂಬಾ ಒಳ್ಳೆಯ ಶಕ್ತಿ ಮತ್ತು ಒಳ್ಳೆಯ ಬುದ್ಧಿಶಕ್ತಿ ಇದೆ. ನಮ್ಮ ಸಮುದಾಯದ ಕಡೆಯಿಂದ ಏಕೆ ರಾಜಕೀಯಕ್ಕೆ ಹೋಗಬಾರದು ಎಂದು ಅವರ ಕಡೆಯಿಂದ ಒಂದು ಪ್ರೇರಣಾ ಶಕ್ತಿ ಸಿಕ್ಕಿತು.

(ಮುಂದು)

(748) 18.8.2026 1.30 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**ಡಾ: ಉಮಾಶ್ರೀ (ಮುಂದು)**

1984ರಲ್ಲಿ ಮಾನ್ಯ ರಾಮಲಿಂಗಾ ರೆಡ್ಡಿಯವರ ಶಾಸಕ ಸ್ಥಾನದ ಚುನಾವಣಾ ಪ್ರಚಾರಕ್ಕೆಂದು ನಾನು ಹೋಗಿದ್ದೆ. ನಾನು "ಅನುಭವ" ಚಿತ್ರದಲ್ಲಿ ನಟಿಯಾಗಿ ಅಭಿನಿಯಿಸಿ, ಹೆಸರು ಬಂದಿದ್ದರಿಂದ ನಾನು ಪ್ರಚಾರಗಳಿಗೆ ಹೋಗುತ್ತಿದ್ದೆ. ಮಾನ್ಯ ವಜ್ರಮುನಿಯವರನ್ನು ಮತ್ತು ಇತರರನ್ನು, ನನಗೆ ಕಾಂಗ್ರೆಸ್ ಪಕ್ಷದ ಸದಸ್ಯತ್ವ ಕೊಡಿಸಿ ಎಂದು ಕೇಳುತ್ತಿದ್ದೆ. ಆಗ ಆ ಕೆಲಸ ಆಗಲಿಲ್ಲ. "ಅಂಗೈಯಲ್ಲಿ ಅಪ್ಸರೆ" ಎನ್ನುವ ಚಿತ್ರವನ್ನು ಮಾಡುವಾಗ ಆ ಸಿನಿಮಾದ ನಾಯಕರಾಗಿದ್ದ ಕುಮಾರ ಬಂಗಾರಪ್ಪನವರಿಗೆ, ನಾನು ರಾಜಕೀಯಕ್ಕೆ ಬರಬೇಕು, ಯಾವುದಾದರೂ ಪಕ್ಷಕ್ಕೆ ನನ್ನನ್ನು ತೆಗೆದುಕೊಳ್ಳುವುದಕ್ಕೆ ಹೇಳಿ, ಕಾಂಗ್ರೆಸ್ ಪಕ್ಷಕ್ಕೆ ಸದಸ್ಯಳನ್ನಾಗಿ ತೆಗೆದುಕೊಳ್ಳುವುದಕ್ಕೆ ಹೇಳಿ ಎಂದು ಕೇಳಿದ್ದೆ. ಆಗ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಕುಮಾರ್ ಬಂಗಾರಪ್ಪನವರು, ಎರಡು ದಿವಸ ಸುಮ್ಮನಿರಿ, ನಾನು ಹೇಳುತ್ತೇನೆ ಎಂದು ಹೇಳಿದರು. ಮಾನ್ಯ ಮಹಾ ಸಭಾಪತಿಗಳೇ, ನಂತರ, ಮಾನ್ಯ ಬಂಗಾರಪ್ಪನವರೇ ಒಂದು ಸ್ವಂತ ಪಕ್ಷವನ್ನು ಕಟ್ಟಿದರು. ಆ ಪಕ್ಷಕ್ಕೆ ನನ್ನನ್ನು ಸದಸ್ಯಳನ್ನಾಗಿ ತೆಗೆದುಕೊಂಡರು.

**ಸಭಾಪತಿಯವರು:-** ನಾನು ಸಭಾಪತಿ, ಮಹಾ ಸಭಾಪತಿಯಲ್ಲ.

**ಡಾ: ಉಮಾಶ್ರೀ:-** ಮಹಾ ಸಭಾಪತಿ ಎಂದು ಸಂಬೋಧನೆ ಮಾಡುವುದೂ ಕೂಡ ಒಂದು ಒಳ್ಳೆಯ ಸಂಬೋಧನೆಯಾಗಿದೆ. ಮಾನ್ಯ ಸಭಾಪತಿಗಳೆ, ಹುಬ್ಬಳ್ಳಿ ಗ್ರಾಮಾಂತರ ಕ್ಷೇತ್ರಕ್ಕೆ ತೆಂಗಿನ ಮರದ ಗುರುತಿನೊಂದಿಗೆ ವಿಧಾನಸಭೆಯ ಮೊದಲನೇ ಚುನಾವಣೆವನ್ನು ಎದುರಿಸಿದೆ. ಏನೋ ಒಂದು ಹುಂಬತನ, ನನಗೆ ಏನೂ ಗೊತ್ತಿಲ್ಲ. ಇವತ್ತು ನನ್ನ ಮಗ, ಮಗಳು, ನನ್ನ ಸೊಸೆ ಮತ್ತು ಅಳಿಯ ಇಲ್ಲಿಗೆ ಬಂದಿದ್ದಾರೆ. ನಾನು ಮತ್ತು ನನ್ನ ಮಗ ವಿಜಯ್‌ಕುಮಾರ್, ಕೈಯಲ್ಲಿ ಸುಮಾರು ರೂ. 75,000 ತೆಗೆದುಕೊಂಡು, ಒಂದು ಸೂಟ್‌ಕೇಸ್ ಹಿಡಿದುಕೊಂಡು ಅಲ್ಲಿಗೆ ಹೋದೆವು. ಅಲ್ಲಿ ನಾನು ಮಾನ್ಯ ಜಗದೀಶ್ ಶೆಟ್ಟರ್, ಶ್ರೀ ಬಸವರಾಜ ಬೊಮ್ಮಾಯಿಯವರ ವಿರುದ್ಧ

ಚುನಾವಣೆಗೆ ನಿಂತಿದ್ದೆ. ಪಕ್ಷೇತರರಾಗಿ ಶ್ರೀ ಪಪ್ಪುರಾಯನ ಗೌಡರವರು ಚುನಾವಣೆಗೆ ನಿಂತಿದ್ದರು. ಆಗ ನಾನು 4,000 ಮತಗಳನ್ನು ತೆಗೆದುಕೊಂಡೆ. ಇದು ದೊಡ್ಡ ಸಾಧನೆಯೇ ಅಗಿತ್ತು. ಉತ್ತರ ಕರ್ನಾಟಕದ ಭೂಮಿಯಿಂದ ನನ್ನ ರಾಜಕೀಯ ಬದುಕು ಎನ್ನುವುದು, ಚುನಾವಣೆ ಎನ್ನುವುದು ಪ್ರಾರಂಭವಾಯಿತು. ಆಗ ನಾನು ಸೋತೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾದರು, ನಂತರ ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾದರು. ನಾನು ಇವತ್ತು ಉಪ ಸಭಾಪತಿಯಾಗಿದ್ದೇನೆ. ಇದು ಭಗವಂತನ ಆಶೀರ್ವಾದ. ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ನನಗೆ ಕೊಟ್ಟಂಥ ಶಕ್ತಿ ಅಪಾರವಾದುದು. ನನ್ನನ್ನು ಕಲಾವಿದೆಯಾಗಿ ಜನ, ನಿರ್ಮಾಪಕರು, ನಿರ್ದೇಶಕರು ಬೆಳೆಸಿದರು. ಅಲ್ಲಿ ಸಿಕ್ಕ ಸದಾವಕಾಶಗಳನ್ನು ಬಳಸಿಕೊಂಡು ನಾನು ಅಲ್ಲಿಯೂ ಬೆಳೆದೆ. ಒಂದು ಸಿದ್ಧಾಂತ, ಬದ್ಧತೆ, ಕಾರ್ಯಕ್ರಮ ಮಾಡತಕ್ಕಂಥದ್ದು, ಕೆಲಸ ಮಾಡುವ ರೀತಿ-ನೀತಿ, ಜನಪರವಾಗಿ ಹೇಗಿರಬೇಕು ಎಂಬುದನ್ನು ಕಾಂಗ್ರೆಸ್ ಪಕ್ಷ ಕಲಿಸಿಕೊಟ್ಟಿತು. ನನಗೆ ಅವಕಾಶಗಳನ್ನು ಕೊಡುತ್ತಾ ಹೋಯಿತು. ಮಂತ್ರಿಯನ್ನಾಗಿ ಮಾಡಿತು, ಶಾಸಕಳನ್ನಾಗಿ ಮಾಡಿತು, ಇವತ್ತು ಉಪ ಸಭಾಪತಿಯನ್ನಾಗಿ ಮಾಡಿದೆ. ಆದ್ದರಿಂದ ನನ್ನ ಪಕ್ಷಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ನನಗೆ ಬೆಂಬಲವಾಗಿ ಮಾನ್ಯ ಬಂಗಾರಪ್ಪನವರು, ನಂತರ, ಮಾನ್ಯ ಎಸ್.ಎಂ.ಕೃಷ್ಣರವರೂ ಇದ್ದರು.

ನಾನು ಮಾನ್ಯ ಎಸ್.ಎಂ.ಕೃಷ್ಣರವರ ಜೊತೆಗೆ ಚುನಾವಣಾ ಪ್ರಚಾರಕ್ಕೆ ಹೋಗುತ್ತಿದ್ದೆ, ಜಿಲ್ಲಾ ಪಂಚಾಯಿತಿಗಳ ಚುನಾವಣೆಯಲ್ಲೂ ಭಾಷಣ ಮಾಡುವುದಕ್ಕೆ ಹೋಗುತ್ತಿದ್ದೆ. ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನನ್ನನ್ನು ಗುರುತಿಸಿದರು. ಈ ಹುಡುಗಿಯಲ್ಲಿ ಪ್ರತಿಭೆ ಇದೆ ಎಂದು ಗುರುತಿಸಿ, ನಿನ್ನನ್ನು ಬಳ್ಳಾರಿ ಚುನಾವಣೆಯ ಕಾರ್ಯಕ್ಕೆ ಕಳುಹಿಸಿ ಕೊಡುತ್ತಿದ್ದೇವೆ, ನೀನು ಅಲ್ಲಿಗೆ ಹೋಗು, ನಿನಗೆ ಒಳ್ಳೆಯದಾಗುತ್ತದೆ ಎಂದು ಹೇಳಿದರು. ನನಗೆ ಅವರ ಮಾತಿನ ಅರ್ಥ ಆಗ ಗೊತ್ತಾಗಲಿಲ್ಲ. ನಾನು ಇಡೀ ಬಳ್ಳಾರಿಯಲ್ಲಿ ಕೆಲಸ ಮಾಡಿದೆ. "Umashree is traveling like a wind" ಎಂದು ಪತ್ರಿಕೆಗಳಲ್ಲಿ ಬಂತು. ಶ್ರೀಮತಿ ಸುಷ್ಮಾ ಸ್ವರಾಜ್ ಮತ್ತು ಶ್ರೀಮತಿ ಸೋನಿಯಾ ಗಾಂಧಿಯವರು ಆ ಚುನಾವಣೆಗೆ ನಿಂತಿದ್ದರು. ಶ್ರೀಮತಿ ಸೋನಿಯಾ ಗಾಂಧಿಯವರು ಗೆದ್ದರು. ನಂತರ, ನಾನು ಮಾನ್ಯ ಡಿ.ಕೆ.ಶಿವಕುಮಾರ್ ಅವರ ಮನೆಯ ಬಾಗಿಲಿಗೆ ಬಂದು ನಿಂತಿದ್ದೆ. ಆಗ ಎಂ.ಎಲ್.ಸಿ.ಗಳ ಆಯ್ಕೆ ನಡೆದಿತ್ತು. ಅವರ ಮನಸ್ಸಿನಲ್ಲಿ ಏನಿತ್ತು ಎನ್ನುವುದು ಗೊತ್ತಿರಲಿಲ್ಲ. ಮಾನ್ಯ ಡಿ.ಕೆ.ಶಿವಕುಮಾರ್‌ರವರು, ಇಲ್ಲಿ ಬಾರಮ್ಮ ಎಂದು ಕರೆದರು. ನೀನು ದೆಹಲಿಗೆ ಹೋಗಿ ಬಾ ಎಂದು ಹೇಳಿದರು. ನನಗೆ ದೆಹಲಿ ಎಂದರೆ ಗೊತ್ತಿಲ್ಲ, ಹೇಗೆ ಹೋಗಬೇಕು, ಹೇಗೆ ಬರಬೇಕು ಎನ್ನುವುದು ಗೊತ್ತಿರಲಿಲ್ಲ. ನಾವು ಆಚೆ ಕಡೆ ಎಲ್ಲೂ ಹೋಗಿರಲಿಲ್ಲ, ಇಲ್ಲೇ ಇದ್ದು ಬೆಳೆದಿದ್ದೆವು. ಆವತ್ತು ದೆಹಲಿಗೆ ಹೋದರೂ, ಎಐಸಿಸಿ ಆಫೀಸ್ ಎಲ್ಲಿದೆ ಎನ್ನುವುದು ಗೊತ್ತಿರಲಿಲ್ಲ, ಅಲ್ಲಿ ಯಾರನ್ನು ಭೇಟಿ ಆಗಬೇಕು ಎನ್ನುವುದೂ ಗೊತ್ತಿರಲಿಲ್ಲ. ಅಲ್ಲಿ ಒಬ್ಬರು ರಂಜಿ ಥಾಮಸ್ ಎನ್ನುವವರು ಸಿಕ್ಕಿದರು. ಆಗ ಅವರು, ಇಂಗ್ಲಿಷ್‌ನಲ್ಲಿ, ನೀವು ಕರ್ನಾಟಕದವರೇ ಎಂದು ಕೇಳಿದಾಗ ನಾನು, ಹೌದು ಎಂದು ಹೇಳಿದೆ. ಅದಕ್ಕೆ ಅವರು, ನಾನೂ ಕೂಡ ಕನ್ನಡ ಮಾತನಾಡುತ್ತೇನೆ ಎಂದು ಹೇಳಿದರು. ಇವರು ಕೇರಳದವರಾಗಿದ್ದರು. ಬಳ್ಳಾರಿ

ಚುನಾವಣೆಯಲ್ಲಿ ನೀವು ಓಡಾಡಿದ್ದೀರಿ ಅಲ್ಲವೇ ಎಂದು ಕೇಳಿದರು. ನಾನು, ಹೌದು ಎಂದು ಹೇಳಿದೆ. ಅವರು ಕಚೇರಿಗೆ ಕರೆದುಕೊಂಡು ಹೋಗಿ, ಕೂರಿಸಿ ಕಾಫಿ ಕೊಟ್ಟರು. ನಂತರ, ಹಿಮಾಚಲ ಪ್ರದೇಶದ ಪಕ್ಷದ ಮಹಿಳಾ ಅಧ್ಯಕ್ಷರ ಹತ್ತಿರ ಕರೆದುಕೊಂಡು ಹೋಗಿ, ಇವರು ಮೊನ್ನೆಯ ಬಳ್ಳಾರಿ ಚುನಾವಣೆಯಲ್ಲಿ ಓಡಾಡಿದ ಹೆಣ್ಣು ಮಗಳು ಎಂದು ಪರಿಚಯ ಮಾಡಿಸಿದರು. ಆಗ ಅವರು ಕೂಡ ದೊಡ್ಡ ಕಣ್ಣುಗಳಿಂದ ನೋಡಿದರು. ಅಲ್ಲಿದ್ದ ಎಲ್ಲರೊಂದಿಗೆ ಪರಿಚಯ ಮಾಡಿಸಿದರು. ಅವರು, ಏತಕ್ಕೆ ಬಂದಿದ್ದೀರಿ ಎಂದು ಕೇಳಿದಾಗ ನಾನು, ಈ ತರಹ ನನಗೆ ಕಳುಹಿಸಿದ್ದಾರೆ, ಈ ರೀತಿ ಕೇಳಿಕೊಂಡು ಬಾ ಎಂದು ಕಳುಹಿಸಿದ್ದಾರೆ, ಶ್ರೀಮತಿ ಸೋನಿಯಾ ಮೇಡಂ ಅವರನ್ನು ಭೇಟಿ ಆಗಿ ಬಾ ಎಂದು ಕಳುಹಿಸಿದ್ದಾರೆ ಎಂದು ಹೇಳಿದೆ. ಈಗಲೇ ನಮ್ಮಗಳಿಗೆ ಭೇಟಿ ಆಗುವುದಕ್ಕೆ ಕಷ್ಟವಾಗಿರುವಾಗ ಆಗಿನ ಕಾಲದಲ್ಲಿ ಹೇಗೆ ಭೇಟಿ ಆಗಬೇಕಿತ್ತು? ಆದರೆ ತಕ್ಷಣ ಆ ಮಹಿಳೆ ಒಂದು ಫ್ಯಾಕ್ಸ್ ಮಾಡಿದರು. ಅದಾದ ಒಂದು ಗಂಟೆಯ ನಂತರ ಶ್ರೀಮತಿ ಸೋನಿಯಾ ಗಾಂಧಿಯವರು ಮನೆಗೆ ಕರೆಸಿ ಮಾತನಾಡಿ ಕಳುಹಿಸಿದರು. ಅಲ್ಲಿಂದ ಬರುವಷ್ಟರಲ್ಲಿ ನನಗೆ ಎಂ.ಎಲ್.ಸಿ.ಯ ಅಭ್ಯರ್ಥಿ ಎಂದು ಅನೌನ್ಸ್ ಮಾಡಿದ್ದರು. ಆವತ್ತಿನ ಕಾಲದಿಂದ ಇವತ್ತಿನವರೆಗೂ ನನ್ನ ಪಕ್ಷ ನನಗೆ ಗೌರವದಿಂದ ನಡೆಸಿಕೊಂಡು ಬಂದಿದೆ. ಮಾನ್ಯ ಧರಂಸಿಂಗ್ ಮತ್ತು ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ಎಂ.ಎಲ್.ಸಿ.ಆಗಿದ್ದೆ.

ಮಾನ್ಯ ಸಭಾಪತಿಗಳೆ, ನೇಕಾರರ ದೊಡ್ಡ ಹೋರಾಟ ಆದಾಗ, ಮಾನ್ಯ ಸಿದ್ದರಾಮಯ್ಯನವರ ಬಳಿ ಆ ಜನರನ್ನು ಕರೆದುಕೊಂಡು ಹೋದ ಸಂದರ್ಭದಲ್ಲಿ, ಮೊದಲನೆಯ ಬಾರಿ ಅವರು ನಮಗೆ ಪ್ಯಾಕೇಜ್ ಕೊಟ್ಟರು. ವಿದ್ಯುತ್ ಸಬ್ಸಿಡಿ, ಯಶಸ್ವಿನಿ ಯೋಜನೆ, ಸಾಲ ಮನ್ನಾ, ಬಡ್ಡಿ ಮನ್ನಾ ಈ ರೀತಿಯ ಯೋಜನೆಗಳನ್ನು ನಾನು ಎಂ.ಎಲ್.ಸಿ.ಯಾಗಿ ನಮ್ಮ ಸಮಾಜಕ್ಕೆ ಕೊಡಿಸಿಕೊಡುವುದಕ್ಕೆ ಅನುಕೂಲವಾಯಿತು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತೇರದಾಳದಲ್ಲಿ ಚುನಾವಣೆಗೆ ನಿಲ್ಲಲು ಟಿಕೆಟ್ ಕೊಟ್ಟರು. ಮಾನ್ಯ ಸಭಾಪತಿಗಳೆ, ನಾನು ಮೂರು ಕಡೆ ಅಪ್ಲೈ ಮಾಡಿದ್ದೆ. ಎಲ್ಲರೂ ಹೇಗೆ ಕೇಳುತ್ತಾರೋ ಹಾಗೆಯೇ ನಾನು ಸುಮ್ಮನೆ ಎಂ.ಎಲ್.ಎ. ಟಿಕೆಟ್ ಕೇಳಿದ್ದೆ. ಬೆಂಗಳೂರು ಗ್ರಾಮಾಂತರದಲ್ಲಾಗಲಿ, ಬೆಳಗಾವಿ ಸಿಟಿಯಲ್ಲಾಗಲಿ ಮತ್ತು ತೇರದಾಳದಲ್ಲಾಗಲಿ ಎಲ್ಲಾದರೂ ಕೊಡಲಿ ಎಂದು ಬಯಸಿದ್ದೆ. ನಾನು ಕೇಳಿದ್ದು ಸಕ್ಸಸ್ ಆಯಿತು. ಮತ್ತೆ ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಬಳಿ ಹೋಗಿ, ಬೇಡ ಸರ್, ನಾನು ನಿಲ್ಲುವುದಿಲ್ಲ, ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದೆ. ಅದಕ್ಕೆ ಅವರು, ನೀನು ತಮಾಷೆ ಮಾಡುತ್ತೀಯಾ, ಎಲ್ಲಾ ಆರ್ಡರ್ ಆಗಿದೆ ಹೋಗು ಎಂದು ಹೇಳಿದರು. ಕಲ್ಲಪ್ಪ-ಮಲ್ಲಪ್ಪ ಗೊತ್ತಿಲ್ಲ, ಯಾವುದೂ ಓಣಿ ಗೊತ್ತಿಲ್ಲ, ಒಟ್ಟು ಆ ಊರೇ ನೋಡಿಲ್ಲ. ಏನೂ ನೋಡದೇ ನುಗ್ಗಿಬಿಟ್ಟೆ. ಆಗ ಅಲ್ಲಿ ದೊಡ್ಡ ಗಲಾಟೆಯಾಯಿತು, ಮಾನ್ಯ ಸವದಿಯವರಿಗೆ ಅದೆಲ್ಲಾ ಗೊತ್ತಿದೆ. ಜಗಳ, ಕಿತ್ತಾಟ ಆಯಿತು. ಚುನಾವಣೆಗೆ ಕೊನೆಯ 10 ದಿವಸ ಇದ್ದಾಗಲೂ, ಇವರು ಎಲ್ಲಿಂದ ಬಂದರು, ಎಲ್ಲಿಂದ ಕರೆದುಕೊಂಡು ಬಂದರು ಎಂದು ಜನ ನನ್ನನ್ನು ಊರಿನೊಳಗೆ ಬಿಟ್ಟುಕೊಳ್ಳಲಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಸಿದ್ದು ನ್ಯಾಮಗೌಡರಿಗೆ ದೂರವಾಣಿ ಮಾಡಿದರು. ನನ್ನ ನಾಮಿನೇಷನ್ ಹೇಗಾಯಿತು ಗೊತ್ತೇ? ನನಗೆ ಹಾರ ಹಾಕಿ ಊರಿನೊಳಗೆ

ಕರೆದುಕೊಂಡು ಹೋಗಲಿಲ್ಲ. ಮಾನ್ಯ ಸಿದ್ದು ನ್ಯಾಮಗೌಡರು ನಾಮಿನೇಷನ್ ಮಾಡುವ ಸಂದರ್ಭದಲ್ಲಿ ನನ್ನನ್ನು ಜೊತೆಗೆ ಕರೆದುಕೊಂಡು ಹೋಗಿ ಅವರೇ ನನ್ನ ನಾಮಿನೇಷನ್ ಮಾಡಿದರು. ಮಾನ್ಯ ಸಿದ್ದು ನ್ಯಾಮಗೌಡರು, ಹಿಪ್ಪರಗಿ ಮತ್ತು ಇನ್ನೂ 6-7 ಹಳ್ಳಿಯ ಜನರನ್ನು ಕರೆದು, ಹೀಗಾದರೆ ಬಿ.ಜೆ.ಪಿ.ಯ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿಬಿಡುತ್ತಾರೆ, ಹಾಗೆ ಮಾಡಿಕೊಳ್ಳಬೇಡಿ. ನೀವು ಹೋಗಿ ಅವರಿಗೆ ಹೇಳಿ ಎಂದು, ಈ ಏಳು ಹಳ್ಳಿಯಗಳ ಜನರನ್ನು ತೇರದಾಳಕ್ಕೆ ಕಳುಹಿಸಿ, ಅಲ್ಲಿ ಸಮಸ್ಯೆಯನ್ನು ಬಗೆಹರಿಸಿ, ನಂತರ ನನ್ನನ್ನು ಹಾರ ಹಾಕಿ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಚುನಾವಣೆಗೆ 10 ದಿವಸ ಮಾತ್ರ ಇತ್ತು. ಆ 10 ದಿವಸದಲ್ಲಿ ಯಾರಿಗೆ ಏನು ಕೊಟ್ಟೆನೋ, ಬಿಟ್ಟೆನೋ ಗೊತ್ತಿಲ್ಲ. ಒಟ್ಟಿನಲ್ಲಿ ಚುನಾವಣೆ ಆಯಿತು, ಆ ಜನ 56,000 ಮತಗಳನ್ನು ಕೊಟ್ಟಿದ್ದರು. ನಾನು ಅಲ್ಲೇ ಮನೆ ಮಾಡಿಕೊಂಡು 5 ವರ್ಷ ಇದ್ದು, ಪಕ್ಷ ಕಟ್ಟಿ, ಬೆಳೆಸಿ, ಅವರೆಲ್ಲರ ವಿಶ್ವಾಸ ಪಡೆದುಕೊಳ್ಳುವ ಕಾರ್ಯ ಮಾಡಿದೆ. ಈ ನಿಟ್ಟಿನಲ್ಲಿ ನಮ್ಮ ಕಾರ್ಯಕರ್ತರು ಮತ್ತು ಮುಖಂಡರು ದುಡಿದೆವು, ಶಾಸಕರೂ ಆದೆವು. ಜನ ನನಗೆ ಅವಕಾಶ ಮಾಡಿಕೊಟ್ಟರು. ನೀನು ಗೆದ್ದು ಬಾ, ನಿನ್ನನ್ನು ಮಂತ್ರಿ ಮಾಡುತ್ತೇನೆ ಎಂದು ಮಾನ್ಯ ಸಿದ್ದರಾಮಯ್ಯನವರು ಯಾವಾಗಲೂ ಹೇಳುತ್ತಿದ್ದರು. ಅದೇ ಪ್ರಕಾರ ನಾನು ಮಂತ್ರಿ ಕೂಡ ಆದೆ. ನನ್ನ ಶ್ರಮದ ಜೊತೆ ಬಹುಶಃ ಅದೃಷ್ಟ ಕೂಡ ಕೆಲಸ ಮಾಡಿರಬಹುದು ಎಂದು ನಾನು ಭಾವಿಸುತ್ತೇನೆ. ಮಂತ್ರಿಯೂ ಆದೆ, ನಿಮ್ಮೆಲ್ಲರ ಜೊತೆ ಕೆಲಸ ಮಾಡಿದೆ. ನಿಮ್ಮೆಲ್ಲರ ಜೊತೆ ಇರುವುದಕ್ಕೆ ಅವಕಾಶವಾಯಿತು. 2023ರಲ್ಲಿ ರಾಜಕೀಯ ಕಾರಣಕ್ಕೋಸ್ಕರ . . . ನಾನು ಅದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನನ್ನು ಎಂ.ಎಲ್.ಸಿ.ಯನ್ನಾಗಿಯೂ ಮಾಡಿದರು, ಉಪ ಸಭಾಪತಿಯನ್ನಾಗಿಯೂ ಮಾಡಿದರು. ನನ್ನನ್ನು ಎಲ್ಲರೂ ಕಲಾವಿದೆಯನ್ನಾಗಿ ನೋಡುತ್ತಿದ್ದರು. ನಾನು ಪಕ್ಷಕ್ಕೆ ಸೇರಿಕೊಂಡು ಒಬ್ಬ ಕಾರ್ಯಕರ್ತಳಾಗಿ ಯಾವ ಯಾವ ಹೆಜ್ಜೆಯನ್ನಿಟ್ಟು ಮುಂದೆ ಬಂದೆನೋ ಅಲ್ಲೂ ಕೂಡ ಮುಳ್ಳಿನ ದಾರಿಯನ್ನು ದಾಟಿದ್ದೇನೆ, ಏಳು-ಬೀಳುಗಳನ್ನು ಕಂಡಿದ್ದೇನೆ. ಎರಡೂ ಕ್ಷೇತ್ರಗಳಲ್ಲಿ ಅವಮಾನ-ಸನ್ಮಾನಗಳನ್ನು ಅನುಭವಿಸಿಕೊಂಡು ಬಂದಿದ್ದೇನೆ. ಇಲ್ಲಿಯವರೆಗೂ ಬಂದಿರುವ ನನಗೆ ಈ ಒಂದು ಸ್ಥಾನ ಕೂಡ ಹೂವಿನ ಸ್ಥಾನ ಅಲ್ಲ. ಈ ಹಿಂದೆ ಯಾರು ಸಭಾಪತಿಗಳಾಗಿದ್ದವರ, ಉಪ ಸಭಾಪತಿಗಳಾಗಿದ್ದವರ ನಡವಳಿಯನ್ನು ಗಮನಿಸಿ, ಇತಿಹಾಸ ಏನು ಹೇಳುತ್ತದೆ, ಸಂವಿಧಾನ ಏನು ಹೇಳುತ್ತದೆ, ನಿಯಮಗಳು ಏನು ಹೇಳುತ್ತವೆ ಎಂಬುದರ ಅಡಿಯಲ್ಲಿ ಕೆಲಸ ಮಾಡಬೇಕಿದೆ. ಎರಡೂ ಪಕ್ಷದವರು ನಮ್ಮವರೇ ಆಗಿದ್ದಾರೆ.

(ಮುಂದು)

(749) 18-8-2026 1.40 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಉಮಾಶ್ರೀ (ಮುಂದು):-**

ಎರಡೂ ಪಕ್ಷದವರೂ ನಮ್ಮವರೇ ಎನ್ನುವ ಭಾವನೆಯಿಂದ ಎಲ್ಲರನ್ನು ಸಮಾನವಾಗಿ ತೆಗೆದುಕೊಂಡು ಹೋಗುವಂಥದ್ದು ಮತ್ತು ಸಭಾಪತಿಯವರ ಜೊತೆಯಲ್ಲಿ ಕೆಲಸ ಮಾಡುವಂಥದ್ದು, ಅವರಿಗೆ ಅನುಸರಣೆಯಾಗಿ ಖಂಡಿತವಾಗಿಯೂ ಕೆಲಸ ಮಾಡಿಕೊಂಡು ಹೋಗುತ್ತೇನೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ.

ಇದರ ಜೊತೆಯಲ್ಲಿ ನಿರಂತರ ಶಕ್ತಿಯಾಗಿ ನನಗೆ ನಿಂತಿರುವುದು ನನ್ನ ಕುಟುಂಬ. ವಿಶೇಷವಾಗಿ ನನ್ನ ಮಗ, ಮಗಳು, ನನ್ನ ತಾಯಿ ಎನಿಸಿಕೊಂಡಿರುವಂಥ ಸೊಸೆ ಶ್ವೇತಾ, ಇವತ್ತು ನನ್ನ ಮನೆಗೆ ತಾಯಿಯಾಗಿದ್ದಾಳೆ ಮತ್ತು ನನ್ನ ಅಳಿಯ ಡಾ॥ ರಮೇಶ್. ಇವರೆಲ್ಲರ ಬೆಂಬಲ ಇರುವುದರಿಂದ ನಾನು ನಿರ್ಮಲವಾಗಿ ಜೀವನ ಮಾಡುತ್ತಾ ಬಂದಿದ್ದೇನೆ. ಬಹಳ ಮುಖ್ಯವಾಗಿ ನಾನು ತಮಗೆಲ್ಲರಿಗೂ ಹೇಳುತ್ತೇನೆ, ನನ್ನ ಮಗ ನನ್ನ ಹೊಟ್ಟೆಯಲ್ಲಿ ಎರಡು ತಿಂಗಳ ಭ್ರೂಣ. ನನ್ನ ಮಗಳಿಗೆ ಎರಡು ವರ್ಷ. ಆ ಮಕ್ಕಳನ್ನು ಹಿಡಿದುಕೊಂಡು ನಾನು ಜೀವನ ಮಾಡಿಕೊಂಡು ಹೋಗುತ್ತಿದ್ದಾಗ, ಮಕ್ಕಳು ಬೆಳೆಯುತ್ತಾ ನನ್ನ ಮಗಳಿಗೆ 5-6 ವರ್ಷ. ಶ್ರೀ ಟಿ.ಎನ್.ಸೀತಾರಾಂರವರು, ರಂಗಭೂಮಿಯವರೆಲ್ಲರೂ ಹೇಳಿದರು. 'ಎಷ್ಟು ವರ್ಷ ಅಂತ ನೀನು ಹೀಗೆ ಇರುತ್ತೀಯಾ, ಮುಂದೆ ನಿನಗೆ ವಯಸ್ಸಾಗುತ್ತದೆ, ನಿನಗೊಬ್ಬ ಸಂಗಾತಿ ಬೇಕು, ನೀನು ಮದುವೆ ಮಾಡಿಕೋ, ಶ್ರೀ ರಮೇಶ್ ಬಂದಗದ್ದೆಯವರನ್ನು ಮದುವೆಯಾಗು' ಎಂದು ಹೇಳುತ್ತಿದ್ದರು. ನಿನಗೆ ಅಪ್ಪನನ್ನು ತಂದು ಕೊಡುತ್ತೇನೆ ಎಂದು ನಾನು ನನ್ನ ಮಗಳನ್ನು ಕೇಳಿದೆ, "No, I don't want to share my mummy with anybody" ಎಂದು ಮಗಳು ಹೇಳಿದಳು. ನನ್ನ ಬದುಕು ಯಾರಿಗಾಗಿಯೂ ಅಲ್ಲ, ನನ್ನ ಮಕ್ಕಳಿಗಾಗಿ ಈ ಬದುಕನ್ನು ಬೇರೆಯವರೊಂದಿಗೆ ಹಂಚಿಕೊಳ್ಳಬಾರದು ಎಂದು ಆಗ ನಿರ್ಧಾರ ಆಯಿತು. ಅವತ್ತಿನಿಂದ ಇವತ್ತಿನವರೆಗೂ ಕೂಡ ಹೀಗೆ ಬಂದಿದ್ದೇನೆ. ನಾನು ಯೋಚನೆ ಮಾಡುತ್ತಿದ್ದೆ, 'ಈಗ ನಿನಗೆ 35 ವರ್ಷ, ನಾವು ಹೇಳುವುದನ್ನು ಕೇಳು ಉಮಾಶ್ರೀ' ಎಂದು ನನ್ನ ರಂಗಭೂಮಿ ಗೆಳೆಯರು ಹೇಳುತ್ತಿದ್ದರು, ನಮ್ಮ ಲೋಕೇಶ್‌ರವರು "ತುಂಬಾ ಹಿಂಸೆ ಅನುಭವಿಸುತ್ತೀಯಾ, ವಯಸ್ಸಾದ ಮೇಲೆ ಒಂಟಿಯಾಗಿ ಬದುಕುವುದು ತುಂಬಾ ಕಷ್ಟ ಇದೆ. ನೀನು 60 ವರ್ಷದ ನಂತರ ತುಂಬಾ ನೋವು ಪಡುತ್ತೀಯಾ" ಎಂದು ಹೇಳುತ್ತಿದ್ದರು. ಇಲ್ಲ, ನಾನು ನೋವು ಪಡುವುದಿಲ್ಲ. ನನ್ನ ಬದುಕನ್ನು ಹೇಗೆ ನಿಭಾಯಿಸುತ್ತೇನೆ ನೋಡು ಎಂದು ಸದಾಕಾಲ ನಾನು ಕೆಲಸ ಮಾಡುತ್ತಲೇ ಇರಬೇಕು, ಬ್ಯುಸಿಯಾಗಿರಬೇಕು. ನನ್ನನ್ನು ನಾನು ದಣಿಸಿಕೊಳ್ಳಬೇಕು. ದಣಿಸಿಕೊಂಡು ನನ್ನ ರಾತ್ರಿಗಳನ್ನು ಮುಗಿಸಿಕೊಳ್ಳಬೇಕು. ದಣಿಸಿಕೊಂಡಾಗ ನಿದ್ರೆ ಬಂದು ಬಿಡುತ್ತದೆ. ಆ ಕಾರಣಕ್ಕೆ ಎಲ್ಲಿ ಹೋಗುವುದು? ರಾಜಕೀಯ ಕ್ಷೇತ್ರಕ್ಕೆ ಹೋಗೋಣ, ಅಲ್ಲಿ ಜನ ಇರುತ್ತಾರೆ, ಹಗಲು-ರಾತ್ರಿ ಅವರ ಜೊತೆ ದುಡಿಯಬಹುದು, ದುಡಿದು ಹೈರಾಣ ಆಗಬಹುದು, ಬದುಕು ಮರೆತು ಹೋಗುತ್ತದೆ, ಕುಟುಂಬ ಮರೆತು ಹೋಗುತ್ತದೆ, ರಾತ್ರಿ ನೆಮ್ಮದಿಯಾಗಿ ನಿದ್ದೆ ಮಾಡಬಹುದು, ಯಾವ ಗಂಡಿನ ಪ್ರೀತಿ ಪ್ರೇಮಗಳ ನೋವು ನನಗೆ ಆಗುವುದಿಲ್ಲ ಎಂದು ಅಂದುಕೊಂಡು ನಾನು ಈ ರಾಜಕೀಯ ಕ್ಷೇತ್ರಕ್ಕೆ ಬಂದಿದ್ದೇನೆ. ಅದರಲ್ಲಿ ನಾನು ಯಶಸ್ವಿಯಾಗಿದ್ದೇನೆ. ನನ್ನ ನೋವುಗಳೆಲ್ಲಾ ಮರೆತು, ನನ್ನ ದಿನಗಳನ್ನು ಮರೆತು, ನನ್ನ ರಾತ್ರಿಗಳ ಬಗ್ಗೆ ಚಿಂತೆ ಇಲ್ಲದೆ ನನ್ನ ಬದುಕನ್ನು ಮುಗಿಸುತ್ತಿದ್ದೇನೆ. ಈಗ ನನಗೆ 70ರ ಹರೆಯ. 'ರಾತ್ರಿಯ ನಾಟಕಗಳನ್ನು ಮಾಡುವುದರ ಮೂಲಕವೇ ತನ್ನ ರಾತ್ರಿಗಳನ್ನು, ಯೌವ್ವನವನ್ನು ಮುಗಿಸಿಕೊಂಡ ಉಮಾಶ್ರೀ' ಎಂದು ಒಬ್ಬ ಪತ್ರಕರ್ತರು ಬರೆದಿದ್ದರು. ಅದು ಸತ್ಯ ಕೂಡ ಆಗಿದೆ.

ಸ್ನೇಹಿತರೇ, ನಿಮ್ಮ ಜೊತೆಯಲ್ಲಿ ಏಕೆ ಹೀಗೆ ನಗು ನಗುತ್ತಾ ಇರುತ್ತೇನೆ, ಏಕೆ ಸಮಾಜದ ಎಲ್ಲರ ಜೊತೆಯಲ್ಲಿ ನಗು ನಗುತ್ತಾ ಇರುತ್ತೇನೆ, ಏಕೆ ನನ್ನನ್ನು ನಾನು ಇಷ್ಟು ಬಳಸಿಕೊಳ್ಳುತ್ತಿದ್ದೇನೆ ಎಂದರೆ, ಈ ದೇಹ ಹುಟ್ಟಿದೆ, ಅದು ಬರೀ ಕುಟುಂಬಕ್ಕೋಸ್ಕರ ಅಲ್ಲ, ಈ ದೇಹದ ಪ್ರತಿಯೊಂದು ಕಣಕಣವೂ ಕೂಡ ಸಮಾಜಮುಖಿಯಾಗಿ ಇದ್ದು, ಕರಗಿ ಹೋಗುವ ಜೀವಕ್ಕೆ ಎಲ್ಲರಿಂದಲೂ ಪ್ರೀತಿ ಸಿಕ್ಕರೆ ಸಾಕು, ಒಬ್ಬ ಗಂಡಸಿನಿಂದ, ಒಬ್ಬ ಗಂಡನಿಂದ ಮಾತ್ರವೇ ಪ್ರೀತಿ ಸಿಗಬೇಕಾ? ಒಬ್ಬ ತಾಯಿಯಿಂದ ಮಾತ್ರ ಪ್ರೀತಿ ಸಿಗಬೇಕಾ? ನನ್ನನ್ನು ಪ್ರೀತಿಸುವುದಕ್ಕೆ ಇಡೀ ಜಗತ್ತೇ ಇರುವಾಗ, ನನ್ನ ಪ್ರೀತಿಯನ್ನು ಎಲ್ಲರಿಗೂ ಹಂಚಿ, ಎಲ್ಲರಿಂದಲೂ ಪ್ರೀತಿ ತೆಗೆದುಕೊಳ್ಳುತ್ತಾ ಈ ಜೀವನವನ್ನು ಪೂರ್ತಿ ಮಾಡಬೇಕೆಂದು ಈ ರಾಜಕೀಯ ಕ್ಷೇತ್ರಕ್ಕೆ ಬಂದೆ. ಅದು ಸಾಧ್ಯ ಆಗಿದೆ. ಅದು ಸಾಧ್ಯತೆಯಾಗಿಸಿರುವ ನಿಮಗೆಲ್ಲರಿಗೂ ನನ್ನ ಕನ್ನಡದ ಜನತೆಗೂ, ನನ್ನ ಪಕ್ಷಕ್ಕೂ, ನನ್ನ ಕುಟುಂಬಕ್ಕೂ ಎಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಒಂದು ಸ್ಥಾನದಲ್ಲಿ ನಾನೇನಾದರೂ ತಪ್ಪು-ಒಪ್ಪುಗಳನ್ನು ಮಾಡಿದರೆ ತಿದ್ದಿ ಬುದ್ಧಿ ಹೇಳಿ, ನಮಸ್ಕಾರ.

**ಸಭಾಪತಿಯವರು:-** ಈಗ ಸುಮಾರು 26 ಸದಸ್ಯರಗಳು ಮಾತನಾಡಿದ್ದಾರೆ. ಯಾರ್ಯಾರು ಮಾತನಾಡಬೇಕೆಂದು ಕೇಳಿದ್ದರು ಅವರಿಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಒಂದು ಪ್ರಕಟಣೆ ಇದೆ.

4. **ಪ್ರಕಟಣೆ**

**ವಿಷಯ:- ಅಧಿವೇಶನದ ಸಮಯದಲ್ಲಿ ಮಾನ್ಯ ಶಾಸಕರು ಹಾಗೂ ಸಚಿವರಿಗೆ ಉಪಹಾರ ಹಾಗೂ ಭೋಜನ ವ್ಯವಸ್ಥೆ ಮಾಡಿರುವ ಕುರಿತು.**

\- - - - - -

**ಸಭಾಪತಿಯವರು:-** ಪ್ರಸಕ್ತ ಅಧಿವೇಶನವನ್ನು ಸುಗಮವಾಗಿ ನಡೆಸಿಕೊಂಡು ಹೋಗುವ ಉದ್ದೇಶದಿಂದಾಗಿ ತಾತ್ಕಾಲಿಕವಾಗಿ ಮಾನ್ಯ ಶಾಸಕರುಗಳಿಗೆ ಉಪಹಾರದ ವ್ಯವಸ್ಥೆಯನ್ನು ಆಡಳಿತ ಪಕ್ಷದ ಮೊಗಸಾಲೆಯ ಮುಂಭಾಗದಲ್ಲಿ ವ್ಯವಸ್ಥೆ ಮಾಡಲಾಗಿರುತ್ತದೆ. ಸಾಕಷ್ಟು ಜಾಗ ಇರಲಿಲ್ಲ, ಆದರೂ ಕೂಡ ಮೊಗಸಾಲೆಯ ಮುಂದೆ ಒಂದು ಸಣ್ಣ cafeteria ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮುಂದೆ ಅದನ್ನು ಸರಿ ಮಾಡುತ್ತೇನೆ. ಬೆಳಗಿನ ಉಪಹಾರ ಬೆಳಗ್ಗೆ 9 ರಿಂದ 10-30 ರವರೆಗೆ ಹಾಗೂ ಭೋಜನವನ್ನು ಮಧ್ಯಾಹ್ನ 1-00 ರಿಂದ 3-00 ಗಂಟೆಯವರೆಗೆ. ತದನಂತರ ಸಾಯಂಕಾಲ ಕಾಫಿ, ಟೀ ವ್ಯವಸ್ಥೆಯನ್ನು ಅಧಿವೇಶನ ಮುಗಿಯುವವರೆಗೆ ವ್ಯವಸ್ಥೆ ಮಾಡಲಾಗಿದ್ದು, ಮಾನ್ಯ ಸಚಿವರು ಹಾಗೂ ಮಾನ್ಯ ಶಾಸಕರುಗಳು ಇದನ್ನು ಬಳಸಿಕೊಳ್ಳಬಹುದಾಗಿದೆ. ಒಂದು ಸಲ 20 ಜನರು ಕುಳಿತುಕೊಳ್ಳಬಹುದು. ಒಂದೇ ಸಲ ಎಲ್ಲರೂ ಹೋದರೆ ಕಷ್ಟವಾಗುತ್ತದೆ. ಆದರೆ ಅಕ್ಕಪಕ್ಕ ಬೇರೆ ಯಾವುದೇ ಜಾಗ ಇಲ್ಲ. ಸಾಯಂಕಾಲ ಕಾಫಿ, ಟೀ ಸಿಗುವುದಿಲ್ಲ, ತೊಂದರೆಯಾಗುತ್ತಿದೆ ಎಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದರು. ಆದ್ದರಿಂದ ಒಂದು ಸಣ್ಣ cafeteria ಮಾಡಿದ್ದೇನೆ. ಅದನ್ನು ಮಾನ್ಯ ಸದಸ್ಯರುಗಳು ಬಳಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಅದನ್ನು ಸರಿ ಮಾಡುತ್ತೇನೆ.

ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ಈಗ ಸದನವನ್ನು 2 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

(750) 18-08-2026 (3.00 ) ಕೆಜಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03 ಗಂಟೆ 04 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಕೆ.ಶಿವಕುಮಾರ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ರಾಜ್ಯದಲ್ಲಿ ಹಲವಾರು ಸಮಸ್ಯೆಗಳು ಇವೆ. ಕೆ.ಪಿ.ಎಸ್.ಸಿ.ಯಿಂದ ಹಿಡಿದು ರೈತರದ್ದು, ಬರಗಾಲದ್ದು, ಈ ರೀತಿ ಬೇಕಾದಷ್ಟು ಸಮಸ್ಯೆಗಳು ಇವೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಎಲ್ಲವನ್ನು ಚರ್ಚೆ ಮಾಡೋಣ. ನಾನು ಚರ್ಚೆ ಮಾಡಬೇಡಿ ಎಂದು ನಿಮಗೆ ಹೇಳಲೇ ಇಲ್ಲ. ದಯವಿಟ್ಟು, ಬೇರೆ ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮದು ಒಂದೇ ಒಂದು ವಿಷಯ. ಅದು "ಕಳಂಕಿತ ಸಚಿವ"ರನ್ನು ಕೈಬಿಡಿ ಎನ್ನುವುದಾಗಿದೆ. ಅವರು ರಾಜಿನಾಮೆ ಕೊಡುವವರೆಗೂ ನಮ್ಮ ಹೋರಾಟ ನಡೆದೇ ನಡೆಯುತ್ತದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, 'ಕಳಂಕಿತ ಸಚಿವರು' ಎಂದರೆ, ಏನು ಅರ್ಥ?

**(ಗೊಂದಲ)**

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾರವರೇ, ತಾವು ಒಂದು ನಿಮಿಷ. ನಾನು ಮಾತನಾಡುತ್ತಿದ್ದೇನೆ. You have to understand. When I am speaking don't interrupt. ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವುದನ್ನು ಕೇಳಿ. ನಾನು ಯಾವುದನ್ನು ಚರ್ಚೆ ಮಾಡಬೇಡಿ ಎಂದು ನಿಮಗೆ ಹೇಳುತ್ತಿಲ್ಲ. ದಯವಿಟ್ಟು ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. ನಿನ್ನೆ ದಿವಸ ಎಷ್ಟೋ ಪ್ರಶ್ನೆಗಳು ಚರ್ಚೆಗೆ ಬರದೆ ಹೋದವು. ಬಾರಿ ಕಷ್ಟದಿಂದ ಪ್ರಶ್ನೆಗಳು ಬರುತ್ತವೆ. ತಾವು ದಯವಿಟ್ಟು ಸಹಕರಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ತಾವು ಹೇಳಿದ್ದೀರಿ. ಅದಕ್ಕೆ ನಮ್ಮದು ಏನು ಅಡ್ಡಿ ಇಲ್ಲ. ನಮಗೆ ಒಂದೇ ಉತ್ತರ ಬೇಕು. ಅದು ಮಾನ್ಯ ಸಭಾನಾಯಕರಿಂದ ಆಗಬಹುದು ಅಥವಾ ಮಾನ್ಯ ಮುಖ್ಯಮಂತ್ರಿಗಳಿಂದ ಆಗಬಹುದು, ಮಾನ್ಯ ಸಚಿವರಾದ ಬಿ.ನಾಗೇಂದ್ರರವರು ರಾಜಿನಾಮೆ ಕೊಟ್ಟಿದ್ದಾರೆಂದರೆ, ಅಲ್ಲಿಗೆ ನಮ್ಮದು ಯಾವುದೇ ಸಮಸ್ಯೆ ಇಲ್ಲ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಆಯಿತು. ನಾನು ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಚರ್ಚೆ ಬೇಕಾಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಅದನ್ನು ನೀವು ನಿಮ್ಮ ಚರ್ಚೆಯಲ್ಲಿ ಹೇಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು, ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಪರಸ್ಪರ ಮಾತನಾಡತೊಡಗಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಇನ್ನೂ clean chit ಸಿಕ್ಕಿಲ್ಲ.

**(ಗೊಂದಲ)**

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು “ಕಳಂಕಿತ ಸಚಿವರು” ಎಂಬ ಪದವನ್ನು ಉಪಯೋಗಿಸಿದ್ದಾರೆ. ಅದು ತಪ್ಪು. ಮಾನ್ಯ ಸಚಿವರ ಮೇಲೆ ಆರೋಪ ಅಷ್ಟೇ ಬಂದಿದೆ. ಮಾನ್ಯ ಸಚಿವರ ಮೇಲಿನ ಆರೋಪ ಇನ್ನೂ ಸಾಬೀತಾಗಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ಮಾನ್ಯ ಸಚಿವರಾದ ಆರ್.ನಾಗೇಂದ್ರರವರ ಭಾವಚಿತ್ರ ಇರುವ ಫಲಕಗಳನ್ನು ಹಿಡಿದುಕೊಂಡು ಸದನಕ್ಕೆ ಪ್ರದರ್ಶಿಸಿತ್ತಾ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಆ ಕಾರಣದಿಂದ, ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನಾನು ಎರಡನೇ ಬಾರಿಗೆ ಮನವಿ ಮಾಡುತ್ತಿದ್ದೇನೆ. ದಯವಿಟ್ಟು, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು. ನಾವು ಯಾವುದೇ ಕಾರಣಕ್ಕೂ ಒಪ್ಪುವುದಕ್ಕೆ ಸಾಧ್ಯವಿಲ್ಲ.

(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರುಗಳು ಒಟ್ಟಿಗೆ ಪರಸ್ಪರ ಮಾತನಾಡತೊಡಗಿದರು)

**(ಗೊಂದಲ)**

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಸಚಿವರಾದ ಶ್ರೀ ಬಿ.ನಾಗೇಂದ್ರರವರ ವಿಷಯಕ್ಕೆ ಚರ್ಚೆ ಮಾಡಲಿ. ನಾವು ಚರ್ಚೆಗೆ ಸಿದ್ಧರಿದ್ದೇವೆ. ಇಲ್ಲವೆಂದರೆ, ನಾವು ಚರ್ಚೆ ಮಾಡಿದಾಗ ಅವರು ಮಾಡಿರುವಂತಹ ಆರೋಪಕ್ಕೆ ಉತ್ತರ ಕೊಡುತ್ತೇವೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಅವರ ಉತ್ತರ ಬೇಕಾಗಿಲ್ಲ. ನಮಗೆ ಅವರ ರಾಜಿನಾಮೆ ಬೇಕು.

**(ಗೊಂದಲ)**

**ಡಾ॥ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನ್ಯಾಯಾಲಯ ಏನಾದರೂ ಮಾನ್ಯ ಸಚಿವರನ್ನು ಅಪರಾಧಿ ಎಂದು ಹೇಳಿದೆಯೇ? ಅವರ ಮೇಲಿನ ಆರೋಪ ಸಾಬೀತಾಗಿದೆಯೇ? ಆರೋಪ ಸಾಬೀತಾಗಿಲ್ಲ. ಈಗ ಅವರ ರಾಜಿನಾಮೆ ಏಕೆ? ಪ್ರಕರಣ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಉತ್ತರ ಬೇಕಾಗಿಲ್ಲ. ಲೂಟಿ ಮಾಡಿ ಉತ್ತರವನ್ನು ಕೊಡುವುದೇ?

**ಡಾ॥ ಯತೀಂದ್ರ ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಲೂಟಿ ಮಾಡಿಲ್ಲ. ಅವರು ಹೇಳುವುದು ಸುಳ್ಳು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಅದು ಗೊತ್ತಿಲ್ಲ. ಅವರು ಅವರ ತಂದೆಯವರನ್ನು ಕೇಳಲಿ. ಲೂಟಿ ಹೊಡೆದಿರುವವರನ್ನು ಸರ್ಕಾರದಲ್ಲಿ ಇನ್ನು ಇಟ್ಟುಕೊಂಡಿರುವುದರಿಂದ ನಮಗೆ ಚರ್ಚೆ ಬೇಕೇ? ನಮಗೆ ಉತ್ತರ ಬೇಕು. ಅವರು ಲೂಟಿ ಮಾಡಿ ಉತ್ತರ ಕೊಡುತ್ತಾರೆಯೇ?

**(ಗೊಂದಲ)**

(ಆಡಳಿತ ಪಕ್ಷದ ಹಾಗೂ ವಿರೋಧ ಪಕ್ಷದ ಸದಸ್ಯರು ಪರಸ್ಪರ ಮಾತನಾಡತೊಡಗಿದರು)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಎಲ್ಲರೂ ಕುಳಿತುಕೊಳ್ಳಿ. ನಾನು ನಿನ್ನೆ ದಿವಸ ಕೂಡ ಇದನ್ನೇ ಹೇಳಿದ್ದೇನೆ. ಇವತ್ತು ಕೂಡ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಯಾವುದೇ ಕಾರಣಕ್ಕೂ ಪ್ರಶ್ನೋತ್ತರ ವೇಳೆಯನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ನಿಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಆಗ ತಾವುಗಳು ಮಾತನಾಡಿ. ಅದಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ನಿನ್ನೆ ದಿವಸ ಸಹ ಹೇಳಿದ್ದೇನೆ. ಇವತ್ತು ಹೇಳುತ್ತಿದ್ದೇನೆ. ಇದು ಹೊಸದನ್ನೆಲ್ಲಾ. ನಾನು ಪ್ರತಿ ಬಾರಿ ಹೇಳುತ್ತಿದ್ದೇನೆ. ನಾವು ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಂಡು ಮತ್ತೆ ಚರ್ಚೆ ಮಾಡೋಣ. ಈಗ ಪ್ರಶ್ನೋತ್ತರ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಎರಡನೇ ಬಾರಿಗೆ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ. ಒಂದು ವಿಷಯ. ನಾವು ಇದನ್ನು ಚರ್ಚೆಗೆ ಕೊಡಿ ಎಂದು ಕೇಳಿಲ್ಲ. ಈ ಹಗರಣದ ಬಗ್ಗೆ ಬೇಕಾದರೆ, ಚರ್ಚೆ ಆಗಲಿ.

**(ಗೊಂದಲ)**

**ಡಾ॥ ಯತೀಂದ್ರ ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಒಬ್ಬ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಚಿವರನ್ನು ಅಪರಾಧಿ ಎಂದು ಹೇಳುತ್ತಿದ್ದಾರೆ. ಅವರ ಮೇಲಿನ ಆರೋಪ ಇನ್ನು ಸಾಬೀತಾಗಿಲ್ಲ.

**ಸಭಾಪತಿಯವರು:–** ಪ್ರಶ್ನೋತ್ತರದ ವಿಷಯವನ್ನು ಬಿಟ್ಟು ಬೇರೆ ಯಾವುದೂ ದಾಖಲೆಗೆ ಹೋಗಬಾರದು. Nothing will go on record.

(ಗೊಂದಲ)

(ಮಾನ್ಯ ಸಭಾಪತಿಯವರು ಪ್ರಶ್ನೋತ್ತರದ ವಿಷಯ ಬಿಟ್ಟು ಬೇರೆ ಯಾವುದು ದಾಖಲೆಗೆ ಹೋಗಬಾರದೆಂದು ತಿಳಿಸಿದ ಸೂಚನೆಯ ಮೇರೆಗೆ ಈ ಹಂತದಲ್ಲಿ ಮುಂದಿನ ನಡವಳಿಯನ್ನು ದಾಖಲಿಸಿರುವುದಿಲ್ಲ)

(ಮುಂದು)

(751) 18.08.2026/3.10/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

5. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ:220**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಶಿವಕುಮಾರ್. ಕೆ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ನನ್ನ ಪ್ರಶ್ನೆಗೆ ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಸುಮಾರು 11,357 ಸಹಕಾರ ಸಂಘಗಳಿವೆ. ಅದು ಪಟ್ಟಣ ಸಹಕಾರ ಸಂಘಗಳು ಇರಬಹುದು, P.A.C.S. (Primary Agricultural Credit Society) ಗಳು ಇರಬಹುದು, ಯೂನಿಯನ್ ಬ್ಯಾಂಕ್‌ಗಳು ಇರಬಹುದು, ಡಿ.ಸಿ.ಸಿ. ಬ್ಯಾಂಕ್‌ಗಳು ಇರಬಹುದು ಮತ್ತು ಅಪೆಕ್ಸ್ ಬ್ಯಾಂಕ್ ಇರಬಹುದು. ಅವುಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ನಾನು ಏನು ಕೇಳುತ್ತೇನೆಂದರೆ, ಇವರು ಇದರಲ್ಲಿ ಎಷ್ಟು ಜನ ಎಸ್.ಸಿ./ಎಸ್.ಟಿ.ಯವರನ್ನು ಸದಸ್ಯರನ್ನಾಗಿ ಮಾಡಿದ್ದಾರೆ? ಮತ್ತೆ ಎಷ್ಟು ಜನರಿಗೆ ಸಾಲವನ್ನು ನೀಡಿದ್ದಾರೆ? ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು ಎಲ್ಲಾ ಜನರಿಗೂ ಸಾಲವನ್ನು ನೀಡಿದ್ದೇವೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಎಸ್.ಸಿ./ಎಸ್.ಟಿ.ಗಳಿಗೆ ಸುಮಾರು 5,987 ಕೋಟಿ ರೂಪಾಯಿ ಕೊಡಬೇಕಾಗಿತ್ತು. ಅಂದರೆ, ಶೇಕಡಾ 23ರಷ್ಟು ಮಾತ್ರ. ಅಂದರೆ, ಅವರು ಕೇವಲ 3,094 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಆದರೆ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಹಣವನ್ನು ಉಪಯೋಗಿಸಿಕೊಂಡು ಎಸ್.ಸಿ./ಎಸ್.ಟಿ.ಗಳನ್ನು ಸದಸ್ಯರನ್ನಾಗಿ ಮಾಡಬೇಕಾಗಿತ್ತು. ಈ provision ಅನ್ನು ಅಂದಿನ ಡಿ.ದೇವರಾಜು ಅರಸುರವರು ಇರಬಹುದು, Sri K.H.Ranganath ಸಾಹೇಬರು ಇರಬಹುದು, ಶ್ರೀ ವಿಶ್ವನಾಥ್‌ರವರು ಇರಬಹುದು ಮತ್ತು ಶ್ರೀ ಕೆ.ಎನ್. ರಾಜಣ್ಣನವರು ಎಲ್ಲಾ ಎಸ್.ಸಿ./ಎಸ್.ಟಿ.ಯವರನ್ನು ಸದಸ್ಯರನ್ನಾಗಿ ಮಾಡಲೇಬೇಕೆಂದು ಪ್ರಯತ್ನಪಟ್ಟಿದ್ದರು. ಆದರೆ, ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ತೆಗೆದುಕೊಂಡು ಕೊಡುತ್ತಿಲ್ಲ. ಈಗ ಸೊಸೈಟಿಗಳಲ್ಲಿ ಏನಾಗಿದೆ ಎಂದರೆ, ಎಸ್.ಸಿ./ಎಸ್.ಟಿ.ಯವರಿಗೆ ಸದಸ್ಯತ್ವ ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಅದನ್ನು ಸಾಮಾನ್ಯ ಸಭೆಯಲ್ಲಿ ಇಟ್ಟು approval ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಹಾಗಾದರೆ, ಇವರು ಎಲ್ಲಿಗೆ ಹೋಗಿ ಸದಸ್ಯತ್ವ ತೆಗೆದುಕೊಳ್ಳುವುದು? ಅದಕ್ಕೆ ನಾನು ಏನು ಹೇಳುತ್ತೇನೆಂದರೆ, inclusive growth ಎಂದು ಏನು ಹೇಳುತ್ತೇವೆ, ಎಲ್ಲರ participation ಇರಬೇಕು. ಅಂದರೆ, ಎಸ್.ಸಿ./ಎಸ್.ಟಿ.ಗಳು, ಓ.ಬಿ.ಸಿ.ಗಳು ಮತ್ತು ಅಲ್ಪಸಂಖ್ಯಾತರು ಈ ಎಲ್ಲರನ್ನು ಸದಸ್ಯರನ್ನಾಗಿ ಮಾಡಬೇಕಾಗಿತ್ತು. ಈಗ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಸಾಲ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರು non-crop loan ಎಷ್ಟು ಕೊಟ್ಟಿದ್ದಾರೆ? ಈ non-crop loan ಕೊಡುವುದಕ್ಕೆ ಏನು ಪ್ರಯತ್ನಪಡುತ್ತಿದ್ದಾರೆ? ಹಾಗಾಗಿ, ಈ ಸಮುದಾಯಗಳನ್ನು ಸಹಕಾರಿ ಕ್ಷೇತ್ರದ ಒಳಗಡೆ ತರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಲಕ್ಷ್ಮಣ ಎಸ್. ಸವದಿ (ಸಹಕಾರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಎಸ್.ಸಿ./ಎಸ್.ಟಿ. ಜನಾಂಗಕ್ಕೆ ಸದಸ್ಯತ್ವ ನೀಡುವುದಕ್ಕೆ ಹಣ ತೆಗೆದುಕೊಂಡು ಅವರನ್ನು ಸದಸ್ಯರನ್ನಾಗಿ ಮಾಡಿ, ಅವರಿಗೆ ಸಾಲ ಕೊಡಬೇಕೆಂದು ಕೇಳಿದ್ದಾರೆ. ನಾನು ಎಲ್ಲಾ ಡಿ.ಸಿ.ಸಿ ಬ್ಯಾಂಕ್‌ಗಳಿಗೆ ಮತ್ತು P.A.C.S. (Primary Agricultural Credit Society) ಗಳಿಗೆ ಸೂಚನೆಯನ್ನು ಕೊಡುತ್ತೇನೆ. ಅವರು ಎಲ್ಲಿ ಸದಸ್ಯರಾಗುವುದಕ್ಕೆ ಬರುತ್ತಾರೆ, ಅಂತಹರನ್ನು ಕಡ್ಡಾಯವಾಗಿ ಸದಸ್ಯರನ್ನಾಗಿ ಮಾಡಿಕೊಂಡು ಅವರಿಗೆ ಸಾಲ ಕೊಡುವುದಕ್ಕೆ ಸೂಚನೆ ಕೊಡುತ್ತೇನೆ.

**ಶ್ರೀ ಶಿವಕುಮಾರ್. ಕೆ:-** ಮಾನ್ಯ ಸಭಾಪತಿಯವರೇ, ಈಗ ಸದಸ್ಯತ್ವ ಮಾಡಿಕೊಳ್ಳುವುದಕ್ಕೆ ಬಹಳಷ್ಟು ಸೊಸೈಟಿಗಳಲ್ಲಿ ಸದಸ್ಯತ್ವವನ್ನು ಮಾಡಿಕೊಳ್ಳುತ್ತಿಲ್ಲ. ಅದಕ್ಕೆ ಮಾನ್ಯ ಮಂತ್ರಿಗಳು ಏನು ಕ್ರಮ ಕೈಗೊಳ್ಳುತ್ತಾರೆಂದು ಕೇಳುತ್ತೇನೆ. ಏಕೆಂದರೆ, ಇವತ್ತು ಎಲ್ಲಿ ಎಸ್.ಸಿ./ಎಸ್.ಟಿ., ಓ.ಬಿ.ಸಿ. ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಜಾಸ್ತಿ ಇದೆ. ಅಲ್ಲಿ ಇವರಿಗೆ ಪ್ರತ್ಯೇಕವಾಗಿ ಸೊಸೈಟಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವರು ಸೊಸೈಟಿಗಳನ್ನು ಮಾಡಿಕೊಂಡಾಗ, ಅವರಿಗೆ ಇವರು funding ಮಾಡಬೇಕು. ಅವರು lend ಮಾಡುವುದಕ್ಕೆ ಹಣಕಾಸು ಕೊಡಬೇಕು. ನಾನು ಯಾರ್ಯಾರು, ಎಷ್ಟೆಷ್ಟು defaulter ಇದ್ದಾರೆಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು ಸುಮಾರು 1,45,000 ಜನರು defaulter ಇದ್ದಾರೆಂದು ತಿಳಿಸಿದ್ದಾರೆ. ಇದರಲ್ಲಿ ಯಾವ category ಯವರು ಎಷ್ಟೆಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಆದರೆ, ಇವರು ಊಟವನ್ನೇ ಕೊಟ್ಟಿಲ್ಲ. ಅದರೆ, ಅರ್ಜೀಣವಾಗುತ್ತದೆಂದರೆ ಹೇಗೆ? ಇವರು ಎಸ್.ಸಿ./ಎಸ್.ಟಿ., ಓ.ಬಿ.ಸಿ. ಮತ್ತು ಅಲ್ಪಸಂಖ್ಯಾತರಿಗೆ ಸಾಲವನ್ನು ನೀಡಬೇಕು. ಈ defaulters list ಅನ್ನು ನೋಡಿದರೆ, ಇವರು ಬಹಳ ಕಡಿಮೆ ಇದ್ದಾರೆ. ಹಾಗಾಗಿ, ಇವರು ಅವರಿಗೆ ಹೆಚ್ಚಿನ ಸಾಲ ನೀಡಬೇಕು. ಇವತ್ತಿನ ದಿವಸ ಹತ್ತಾರು ಬ್ಯಾಂಕುಗಳಲ್ಲಿ ಮತ್ತು ಕೋಲಾರ ಜಿಲ್ಲೆಯಲ್ಲಿ ನೂರಾರು ಕೋಟಿ ರೂಪಾಯಿಗಳ ಹಗರಣವಾಗಿದೆ. ಆದರೆ, ಇವತ್ತಿನವರೆಗೂ ಸಹ ಅದನ್ನು enquiry ಮಾಡಿಲ್ಲ. ಅವರು ನ್ಯಾಯಾಲಯಗಳಲ್ಲಿ stay ತೆಗೆದುಕೊಂಡು ಬಂದು ಮುಂದುವರೆಯುತ್ತಿದ್ದಾರೆ. ನೂರಾರು ಕೋಟಿ ರೂಪಾಯಿಗಳ ಹಗರಣವಿರುವ ಸೊಸೈಟಿಗಳನ್ನು ಬಿಟ್ಟಿದ್ದಾರೆ. ಆದರೆ, ಈ ಸಮುದಾಯಗಳಿಗೆ inclusive growth ಎಂದು ಹೇಳುತ್ತಾರೆ. ಒಳಗೊಳ್ಳುವಿಕೆ ಅಂದರೆ financial inclusiveness ಒಳಗೊಂಡು ಬರಬೇಕೆಂದರೆ ಇವರೆಲ್ಲರನ್ನು ಒಳಗಡೆಗೆ ತರಬೇಕು. ಈ ಸಮುದಾಯಗಳಿಗೆ ಸಾಲವನ್ನು ನೀಡಬೇಕು. ಇಲ್ಲಿಯವರೆಗೆ ಇದು ಏನು ಆಗಿಲ್ಲ ಅದು recruitment ನಲ್ಲಿ ಇರಬಹುದು ಮತ್ತು ಸಾಲ ಕೊಡುವುದರಲ್ಲಿ ಇರಬಹುದು. ಅದನ್ನು ಈ ಸಮುದಾಯಗಳಿಗೆ ಕೊಡಬೇಕು. ಸರ್ಕಾರ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ತೆಗೆದುಕೊಂಡು ಬರುತ್ತಿದೆ. ಅದಕ್ಕೆ ದಯಮಾಡಿ ಹೇಳುತ್ತೇನೆ. ಎಸ್.ಸಿ./ಎಸ್.ಟಿ., ಓ.ಬಿ.ಸಿ. ಮತ್ತು ಅಲ್ಪಸಂಖ್ಯಾತರನ್ನು ಮೇಲಕ್ಕೆ ತೆಗೆದುಕೊಂಡು ಬಂದರೆ, ಮಾನ್ಯ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರುತ್ತದೆ. ಇವತ್ತು ಬೆನಾಮಿ ಸೊಸೈಟಿಗಳಿವೆ. ಅವರು ಬೆನಾಮಿಗಳಿಗೆ ಸಾಲ ಕೊಟ್ಟು, ಅವರು loss ಎಂದು ತೋರಿಸುತ್ತಿದ್ದಾರೆ. ಮತ್ತೆ ಅವರು ಮಜಾ ಮಾಡುತ್ತಿದ್ದಾರೆ. ಅಂತಹವರನ್ನು ಬಿಟ್ಟು ಈ ಸಮುದಾಯದವರನ್ನು ತಂದು ಏನು ಕಾಂಗ್ರೆಸ್

ಪಕ್ಷದ ಸಿದ್ಧಾಂತವಿದೆ ಮತ್ತು ಕೋ-ಆಪರೇಟಿವ್ ಸಿದ್ಧಾಂತವಿದೆ ಅದರ ಒಳಗಡೆ ಅವರನ್ನು ತೆಗೆದುಕೊಂಡು ಬರಬೇಕು. ಈಗ ಯೂನಿಯನ್ ಎಂದು ಹೇಳುತ್ತಾರೆ. ಅಲ್ಲೂ ಸಹ ಮೀಸಲಾತಿ ಇಲ್ಲ. ಮತ್ತೆ District Banks ಎಂದು ಹೇಳುತ್ತಾರೆ. ಅಲ್ಲೂ ಸಹ ಮೀಸಲಾತಿ ಇಲ್ಲ. ಹಾಗಾದರೆ, ಇವರೆಲ್ಲರೂ ಸಹ ಎಲ್ಲಿಗೆ ಹೋಗಬೇಕು? ಇವರಿಗೆ ಏಕೆ ಮೀಸಲಾತಿ ಕೊಡುವುದಕ್ಕೆ ಆಗಿಲ್ಲ? ಆದುದರಿಂದ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಹಣವನ್ನು ತೆಗೆದುಕೊಂಡು ದಯಮಾಡಿ ಯಾರು ಅದನ್ನು ಮಾಡುವುದಿಲ್ಲ ಎನ್ನುತ್ತಾರೆ ಅಂತಹರನ್ನು ವಜಾ ಮಾಡಲಿ. ಈ ಸಮುದಾಯಗಳನ್ನು ತೆಗೆದುಕೊಂಡು ಬಂದು ಅವರಿಗೆ ಸಾಲಗಳನ್ನು ನೀಡಲಿ. ಇವರಿಗೆ ಸಾಲಗಳನ್ನು ನೀಡಿದಾಗ ಮಾತ್ರ ನ್ಯಾಯಯುತವಾದಂತಹ ಸಮಾಜವನ್ನು ಕಟ್ಟುವುದಕ್ಕೆ ಆಗುತ್ತದೆ. ಅವರನ್ನು ಆರ್ಥಿಕವಾಗಿ ಹಿಂದುಳಿಯುವಂತೆ ಮಾಡಬಾರದೆಂದು ಒತ್ತಾಯ ಮಾಡುತ್ತೇನೆ. ನಾನು ಇದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಬಯಸುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಎಸ್. ಸವದಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಈಗ ಯಾವ್ಯಾವ ಸಂಸ್ಥೆಯಲ್ಲಿ ಅವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವುದಕ್ಕೆ ಹಿಂದೇಟು ಹಾಕುತ್ತಾರೆ, ಅವರಿಗೆ ಸೂಚನೆಯನ್ನು ಕೊಡುತ್ತೇನೆ. ಅಂತಹರನ್ನು ಸದಸ್ಯರನ್ನಾಗಿ ಮಾಡಿ, ಅವರ ಜಮೀನಿನ ಅಳತೆಯನ್ನು ನೋಡಿಕೊಂಡು, ಆ ಜಮೀನಿನ ಅಳತೆಯ ಮತ್ತು ನಮ್ಮ guidelines ಪ್ರಕಾರ ಅವರಿಗೆ ಸಾಲ ನೀಡುವಂತಹ ಜವಾಬ್ದಾರಿಯನ್ನು ನಾನು ಮಾಡುತ್ತೇನೆ.

**ಶ್ರೀ ಶಿವಕುಮಾರ್. ಕೆ:-** ಮಾನ್ಯ ಸಭಾಪತಿಯವರೇ, ಈ ಆರ್ಥಿಕ ವರ್ಷದಲ್ಲಿಯೇ ಎಲ್ಲಾ ಸೊಸೈಟಿಗಳಿಗೆ ಫಂಡಿಂಗ್ ಮಾಡಬೇಕು. ಇದರಿಂದ ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಪಕ್ಷಕ್ಕೆ ಒಳ್ಳೆಯ ಹೆಸರು ಬರುತ್ತದೆ. ಈ ವರ್ಷದಲ್ಲಿ next April ಒಳಗಡೆ ಈ ಸಮುದಾಯದವರನ್ನು ಒಳಗಡೆ ತೆಗೆದುಕೊಂಡು ಬರುವಂತೆ ಮಾಡಬೇಕು. ಎಸ್.ಸಿ./ಎಸ್.ಟಿ., ಓ.ಬಿ.ಸಿ. ಮತ್ತು ಅಲ್ಪಸಂಖ್ಯಾತರು ಇವರೆಲ್ಲರನ್ನೂ ಸಹ encourage ಮಾಡಬೇಕು. ದಯಮಾಡಿ ಅವರನ್ನು ಇದರ ಒಳಗಡೆ ತೆಗೆದುಕೊಂಡು ಬರಬೇಕು.

**ಶ್ರೀ ಲಕ್ಷ್ಮಣ ಎಸ್. ಸವದಿ:-** ಮಾನ್ಯ ಸಭಾಪತಿಯವರೇ, ಆಯಿತು.

**ಪ್ರಶ್ನೆ ಸಂಖ್ಯೆ: 242**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ: 271**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ: 227**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶರವಣ ಟಿ.ಎ.ರವರು ಸದನದಲ್ಲಿ ಹಾಜರಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ: 233**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸರ್ಕಾರದ ವಿರುದ್ಧದ ಘೋಷಣೆಯಲ್ಲಿ ನಿರತರಾಗಿದ್ದರು)**

**ಪ್ರಶ್ನೆ ಸಂಖ್ಯೆ: 275**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ನವೀನ್‌ರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಪ್ರಶ್ನೆ ಸಂಖ್ಯೆ: 217**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು ಎರಡು ವರ್ಷದಿಂದ ಕೇಳುತ್ತಿದ್ದೇನೆ. 2025ರಲ್ಲಿ ಇದಕ್ಕೆ ಒಂದು ಸಮಿತಿ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮಾಡಲಿಲ್ಲ. ಎರಡನೇ ಬಾರಿ ಕೇಳಿದಾಗ, ಅದಕ್ಕೆ 15 ದಿನಗಳ ಕಾಲಾವಕಾಶ ಕೇಳಿದ್ದರು. ಈಗ ಮತ್ತೆ ಕಾಲಾವಕಾಶ ಕೇಳುತ್ತಿದ್ದಾರೆ.**

**ಸಭಾಪತಿಯವರು:-** ಈಗ ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡಬೇಕು.

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮಂತ್ರಿಗಳ ಬಳಿ ಒಂದು ಪ್ರಶ್ನೆ ಕೇಳಬೇಕಾಗಿತ್ತು.**

**ಶ್ರೀ ಲಕ್ಷ್ಮಣ ಎಸ್. ಸವದಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಅಧಿವೇಶನ ಮುಕ್ತಾಯವಾಗುವುದರೊಳಗೆ ಮಾಹಿತಿ ಕೊಡುತ್ತೇನೆ.**

**ಪ್ರಶ್ನೆ ಸಂಖ್ಯೆ: 247**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರೈತ ವಿರೋದಿ, ವಿರೋಧ ಪಕ್ಷದವರು ನಮಗೆ ತೊಂದರೆಯನ್ನು ಕೊಡುತ್ತಿದ್ದಾರೆ. ನಾನು ಕೇಳುತ್ತಿರುವುದು ರೈತರ ಪರವಾದ ಪ್ರಶ್ನೆಯಾಗಿದೆ. ನನಗೆ ವಿರೋಧ ಪಕ್ಷದವರು ಮಾತನಾಡುವುದಕ್ಕೆ ಅನುವು ಮಾಡಿಕೊಡದೇ ಇರುವುದು ಬಹಳ ವಿಷಾಧನಿಯ. ತಾವು ಇದನ್ನು ರೆಕಾರ್ಡ್ ಮಾಡಿಕೊಳ್ಳಬೇಕೆಂದು ತಮ್ಮನ್ನು ಕೇಳಕೊಳ್ಳುತ್ತೇನೆ. ಮಾನ್ಯ ಸಹಕಾರ ಸಚಿವರು ನಾನು ಕೇಳಿದಂತಹ ಪ್ರಶ್ನೆಗೆ ಸರಿಯಾದ ಉತ್ತರವನ್ನು ನೀಡಿದ್ದಾರೆ. ಆದರೆ, ಸಮಸ್ಯೆಯಾಗಿರುವುದು ಏನೆಂದರೆ, ರೈತರಿಗೆ ಹೊಸದಾಗಿ ಸಾಲಗಳನ್ನು ಕೊಡುತ್ತಿಲ್ಲ.

(ಮುಂದು)

(752) 18.08.2026 ವೈಎಲ್-ಎಕೆ 3.20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಧು ಜಿ.ಮಾದೇಗೌಡ (ಮುಂದು):**

ಹಿಂದೆ ಕೊಟ್ಟಿರುವಂಥ ಸಾಲಗಳನ್ನು ನವೀಕರಣ ಮಾಡುವಂಥ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಅದರ ಬಗ್ಗೆ ಗಮನಹರಿಸಬೇಕು, ಜೊತೆಗೆ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಕಛೇರಿಗೆ ಕರೆಸಿಕೊಂಡು, ಅವರ ಡಿಮ್ಯಾಂಡ್ ಏನಿದೆ, ಅದನ್ನು ನಿರ್ವಹಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಶ್ರೀ ಮಧು ಜಿ.ಮಾದೇಗೌಡ:-** ಅದರ ಜೊತೆಗೆ ಇವತ್ತು ರಾಜ್ಯದಲ್ಲಿ ಬರ ಇರುವುದರಿಂದ ಸಾಲ ಮನ್ನಾ ಮಾಡುವಂಥ ಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಾಲ ಮನ್ನಾ ಮಾಡುವ ಬಗ್ಗೆ ಡಿಮ್ಯಾಂಡ್ ಮಾಡುತ್ತಿದ್ದು, ಆ ಅಧಿಕಾರ ನಮಗೆ ಇರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ, ಉತ್ತರ ನೀಡುತ್ತೇನೆ.

**ಪ್ರಶ್ನೆ ಸಂಖ್ಯೆ: 25**

**(ಈ ಹಂತದಲ್ಲಿ ಮಾನ್ಯ ಎಸ್.ವ್ಹಿ.ಸಂಕನೂರರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಪ್ರಶ್ನೆ ಸಂಖ್ಯೆ: 26**

**(ಈ ಹಂತದಲ್ಲಿ ಮಾನ್ಯ ಟಿ.ಎನ್.ಜವರಾಯಿಗೌಡರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

ಪ್ರಶ್ನೆ ಸಂಖ್ಯೆ: 262
(ಉತ್ತರವನ್ನು ಲಗತ್ತಿಸಲಾಗಿದೆ)

**ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯ ರೈತರ ಜೀವನಾಡಿ ಬಿ.ಎಸ್.ಎಸ್.ಕೆ. ಸಕ್ಕರೆ ಕಾರ್ಖಾನೆ ಅತ್ಯಂತ ಹಳೆಯ ಕಾರ್ಖಾನೆಯಾಗಿದೆ. ಇದರಲ್ಲಿ ಸುಮಾರು 25,760 ಷೇರುಗಳಿವೆ. ಜೊತೆಗೆ ಇದರಲ್ಲಿ farmers' share and Government share ಗಳನ್ನು ಹೊಂದಿರುವ ಈ ಕಾರ್ಖಾನೆ ಬೀದರ್ ಜಿಲ್ಲೆಯ ಮಧ್ಯದಲ್ಲಿ, ಅಂದರೆ centre place ನಲ್ಲಿ ಇದ್ದು, ಸುಮಾರು 6 ತಾಲ್ಲೂಕಿನ ಕಬ್ಬು ಅರೆಯುವ capacity ಇದೆ. ದಿನಾಂಕ: 18.12.2024 ರಂದು ಬೆಳಗಾವಿ ಸುವರ್ಣ ಸೌಧದಲ್ಲಿ ಸಕ್ಕರೆ ಸಚಿವರಾದ್ದ ಮಾನ್ಯ ಶಿವಾನಂದ ಪಾಟೀಲ್, ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವರು, ಮಾಜಿ ಸಚಿವರು ಹಾಗೂ ಬೀದರ್ ಜಿಲ್ಲೆಯ ಎಲ್ಲಾ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು, ಸಕ್ಕರೆ ನಿರ್ದೇಶಕರು, M.D., ಕಾರ್ಖಾನೆ ಅಧ್ಯಕ್ಷರು ಮತ್ತು ಡಿ.ಸಿ.ಸಿ.ಬ್ಯಾಂಕ್‌ನ ಸಿ.ಇ.ಓ. ರವರೆಲ್ಲರ ಸಮಕ್ಷಮದಲ್ಲಿ ಸಭೆ ಜರುಗಿತ್ತು. **Lease, Rehabilitate, Operate, and Transfer** ಆಧಾರದ ಮೇಲೆ ಗುತ್ತಿಗೆ ನೀಡುವ ಬಗ್ಗೆ ತೀರ್ಮಾನಿಸಲಾಗಿತ್ತು. ಈಗ 40 ವರ್ಷಗಳ ಅವಧಿಗೆ ಕೊಡಲು ಸರ್ಕಾರಕ್ಕೆ ಯಾವುದೇ ಧನ ಸಹಾಯ ಕೇಳುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಏನಾಗಬೇಕಾಗಿದೆ ಅದನ್ನು ಮಾತ್ರ ಹೇಳಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಸಕ್ಕರೆ ಮತ್ತು ಜವಳಿ ಸಚಿವರು):-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಸಹಕಾರಿ ಸಕ್ಕರೆ ಕಾರ್ಖಾನೆ 1968-69ನೇ ಸಾಲಿನಲ್ಲಿ ಪ್ರಾರಂಭಗೊಂಡಿದೆ. 2019-20ನೇ ಸಾಲಿನಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿದ್ದು, ಇಲ್ಲಿಯವರೆಗೂ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿಲ್ಲ. ಈಗಾಗಲೇ ಮಾನ್ಯ ಸದಸ್ಯರು ಸದರಿ ವಿಚಾರವನ್ನು ಬಹಳಷ್ಟು ಬಾರಿ ಪ್ರಸ್ತಾಪ ಮಾಡಿದ್ದಾರೆ. ಅಂದಿನಿಂದ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಕ್ಕರೆ ಸಚಿವರು ಕೂಡ ಇದಕ್ಕೆ ಎರಡು ಸಲ ಟೆಂಡರ್ ಸಹ ಕರೆದಿದ್ದಾರೆ. ಟೆಂಡರ್ ಕರೆದಿದ್ದು, ಯಾರೂ ಕೂಡ ಆಗ ಟೆಂಡರ್‌ನಲ್ಲಿ ಭಾಗವಹಿಸಲಿಲ್ಲ. ಕಬ್ಬು ಮತ್ತು ಸಕ್ಕರೆ ನಿರ್ದೇಶಕರು ಮತ್ತೊಮ್ಮೆ ಅವಕಾಶ ಕೇಳಿದ್ದಾರೆ. ಆದರೆ, ಇಲ್ಲಿಯವರೆಗೂ ಯಾವುದೇ ಟೆಂಡರ್‌ದಾರರು ಬಂದಿಲ್ಲ. ನಾನು ಕೂಡ ಈಗ ಖಾತೆಯನ್ನು ವಹಿಸಿಕೊಂಡಿದ್ದು, ಈ ಹಿಂದೆ ಸಂಬಂಧಪಟ್ಟ ಸಚಿವರನ್ನು ಕರೆಸಿ, ಅವರೊಂದಿಗೆ ಚರ್ಚೆ ಮಾಡುತ್ತೇನೆ. ಹಾಗೆಯೇ ಮಾನ್ಯ ಸದಸ್ಯರು ಒಳಗೊಂಡ ಹಾಗೆ ಸಭೆ ಕರೆಯುತ್ತೇನೆ. ಈಗಾಗಲೇ ಕೇಂದ್ರದಲ್ಲಿರುವ N.C.D.C. (National Cooperative

Development Corporation) ಕಳುಹಿಸಿರುವ ಪತ್ರದಲ್ಲಿ ಸಾಲ 'ಕೊಡಲಿಕ್ಕೆ ಆಗುವುದಿಲ್ಲ' ಎಂದು ರಿಜೆಕ್ಟ್ ಮಾಡಿದ್ದಾರೆ. ಹಾಗಾಗಿ, ಪುನಃ ಸದರಿ ವಿಚಾರದ ಕುರಿತು ಸಚಿವ ಸಂಪುಟ ಸಭೆಯ ಮುಂದೆ ತಂದು, ಚರ್ಚಿಸುತ್ತೇನೆ. ಮಾನ್ಯ ಸದಸ್ಯರ ಕಳಕಳಿ ಏನೆಂದು ಅರ್ಥವಾಗುತ್ತಿದ್ದು, ಅದನ್ನು ಸರಿಪಡಿಸುವಂಥ ಎಲ್ಲಾ ಪ್ರಯತ್ನ ಮಾಡುತ್ತೇನೆ.

**ಡಾ॥ ಚಂದ್ರಶೇಖರ ಬಸವರಾಜ ಪಾಟೀಲ:-** ಮಾನ್ಯ ಸಭಾಪತಿಯವರೇ, ಏನಾದರೂ ಮಾಡಿ, ಎರಡು ತಿಂಗಳುಗಳಲ್ಲಿ ಟೆಂಡರ್ recall ಮಾಡುವ ಮೂಲಕ ಫ್ಯಾಕ್ಟರಿ ಚಾಲನೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯು ಸಂಬಂಧಪಟ್ಟ ಮಾಜಿ ಸಚಿವರನ್ನು ಹಾಗೂ ಮಾನ್ಯ ಸದಸ್ಯರನ್ನು ಕರೆಸಿ ಸಭೆ ಮಾಡುತ್ತೇನೆ.

**ಸಭಾಪತಿಯವರು:-** ಆದಷ್ಟು ಬೇಗ ಅವರೊಡನೆ ಸಭೆ ಮಾಡಿ.

**ಶ್ರೀ ಯು.ಟಿ.ಖಾದರ್ ಫರೀದ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಪ್ರತಿಭಟನೆ ಮಾಡುವುದಾದರೆ, ಮಾಡಲಿ. ಆದರೆ, ಪೋಸ್ಟರ್ ಇಟ್ಟುಕೊಂಡು ಏತಕ್ಕೆ ಪ್ರತಿಭಟನೆ ಮಾಡಬೇಕು? ಪೋಸ್ಟರ್ ಇಟ್ಟುಕೊಂಡು ಪ್ರತಿಭಟನೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬಾರದು. ಅವರು debate ಮಾಡಲಿ. ಏತಕ್ಕಾಗಿ ರಾಜೀನಾಮೆ ಕೊಡಬೇಕೆಂದು ಚರ್ಚೆಗೆ ಬರಲಿ.

**ಪ್ರಶ್ನೆ ಸಂಖ್ಯೆ: 201**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ.ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಸರಿಯಾದ ಉತ್ತರ ಕೊಟ್ಟಿಲ್ಲ. ಹಾಗಾಗಿ, ಉಪ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. 'ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆ ಎಷ್ಟು; ಮತ್ತು ಈ ಸಮುದಾಯದವರಿಗೆ ಆರ್ಥಿಕ, ಶಿಕ್ಷಣ ಮತ್ತು ಅವರ ಮೂಲ ಕಸಬುಗಳ ಬಗ್ಗೆ ಏನಾದರೂ ಅಂಕಿಅಂಶಗಳಿವೆ;' ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಅಂಕಿಅಂಶಗಳ ಬಗ್ಗೆ ನಮ್ಮಲ್ಲಿ ದಾಖಲೆಗಳಿಲ್ಲ; ಇತ್ತೀಚೆಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ-2025ರ ವರದಿಯು ದಿನಾಂಕ: 27.05.2026 ರಂದು ಸ್ವೀಕೃತವಾಗಿರುತ್ತದೆ. ಆ ವರದಿಯನ್ನು ಮಾನ್ಯ ಉಚ್ಛ ನ್ಯಾಯಾಲಯದ ಆದೇಶದನ್ವಯ ಗೌಪ್ಯವಾಗಿಡಲಾಗಿದೆ. ಹಾಗಾಗಿ, ಮುಂದಿನ ದಿನಗಳಲ್ಲಿ ತಿಳಿಸುತ್ತೇವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ನಾನು ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ, ಇವತ್ತಿನ ದಿವಸ ನಮ್ಮ ಸಮುದಾಯದ ಜನರು ಮೀಸಲಾತಿಯಲ್ಲಿ ಯಾವುದೇ ಪ್ರಯೋಜನವನ್ನು ಪಡೆಯುತ್ತಿಲ್ಲ. ನಮ್ಮ ಸಮುದಾಯಕ್ಕೆ ಉದ್ಯೋಗದಲ್ಲಿ, ಶಿಕ್ಷಣದಲ್ಲಿ ಸೇರಿದಂತೆ ಯಾವುದೇ ವಿಚಾರಗಳಲ್ಲಿ ಮೀಸಲಾತಿ ಇರುವುದಿಲ್ಲ. ಹಾಗಾಗಿ, ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಕ್ರೈಸ್ತ ಸಮುದಾಯದವರು ಶ್ರೀಮಂತರು, ಮುಂದುವರೆದವರು ಎಂಬ ಗ್ರಂಥಿ ಇದೆ. ಆದರೆ, ದತ್ತಾಂಶದ ಪ್ರಕಾರ ಶೇಕಡ 74 ರಷ್ಟು ಕ್ರೈಸ್ತರು ನಿರ್ದೋಶಿತರಾಗಿದ್ದಾರೆ, ಸಮಾಜದಲ್ಲಿ ಹಿಂದುಳಿದಿದ್ದಾರೆ. ಹಾಗಾಗಿ, ಅಧ್ಯಯನದ ಪ್ರಕಾರ ಶೇಕಡ 40 ರಷ್ಟು ವಿದ್ಯಾರ್ಥಿಗಳು, ಶೇಕಡ 60 ರಷ್ಟು ಅಲೆಮಾರಿಗಳು ನಿರುದ್ಯೋಗಿಗಳಾಗಿದ್ದಾರೆ. ಯಾವುದೇ ಸ್ಥಳೀಯ ಪ್ರದೇಶದಲ್ಲಿ ಸರಿಯಾದ ಉದ್ಯೋಗ ಇರುವುದಿಲ್ಲ. ಹಾಗಾಗಿ, ಕ್ರೈಸ್ಥ ಸಮುದಾಯದವರನ್ನು 3ಬಿ ವರ್ಗಕ್ಕೆ ಸೇರಿಸಲಾಗಿದೆ. ಅದಕ್ಕಾಗಿ ಪ್ರತ್ಯೇಕವಾಗಿ ಉಪ ವರ್ಗದಲ್ಲಿ ಶೇಕಡ 2 ರಷ್ಟು ಮೀಸಲಾತಿ ನೀಡಬೇಕು. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದೂಳಿದ ವರ್ಗವೆಂದು ಪರಿಗಣಿಸಬೇಕು. ವೈಷ್ಣವ ಧರ್ಮದಲ್ಲಿ ಮತಾಂತರಗೊಂಡವರಿಗೆ ಪ್ರವರ್ಗ-1ಎ ಅಡಿ ಅವಕಾಶ ಕಲ್ಪಿಸಲಾಗಿದೆ. ಆದರೆ, ಕ್ರೈಸ್ತ ಧರ್ಮದಲ್ಲಿ 380ಕ್ಕೂ ಅಧಿಕ ಜಾತಿಗಳು, ಸಮುದಾಯಗಳಿವೆ. ಪ್ರಸ್ತುತ ಕ್ರೈಸ್ತ ಸಮುದಾಯವನ್ನು 3ಬಿ ರಡಿ ಸೇರಿಸಲಾಗಿದೆ. ಇದರಲ್ಲಿ 18 ಸಮುದಾಯಗಳಿವೆ. ಅದರಲ್ಲಿಯೂ ಕೂಡ ಪ್ರಬಲವಾದ ಸಮುದಾಯಗಳಾದ ಲಿಂಗಾಯತರು, ಮರಾಠಿ, ಬಂಟರು ಇದ್ದಾರೆ. ಹಾಗಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಅಲ್ಪಸಂಖ್ಯಾತರ ಹಿಂದೂಳಿದ ವರ್ಗಗಳ ಪ್ರವರ್ಗ-1ಬಿ ರಡಿ ಪ್ರತ್ಯೇಕವಾಗಿ ಮುಸ್ಲಿಂ ಸಮುದಾಯದವರಿಗೆ ಶೇಕಡ 4 ರಷ್ಟು ಮೀಸಲಾತಿ ಇದೆ.

ಅದೇ ರೀತಿ ಕ್ರೈಸ್ತ ಸಮುದಾಯದವರಿಗೂ ಪ್ರತ್ಯೇಕವಾದ ಮೀಸಲಾತಿಯನ್ನು ನೀಡಿದರೆ, ಸರ್ಕಾರದ ಉದ್ಯೋಗ, ಶಿಕ್ಷಣದಲ್ಲಿ ವಂಚಿತರಾದವರು ಸೌಲಭ್ಯವನ್ನು ಪಡೆಯಲು ಸಾಧ್ಯವಾಗುತ್ತದೆ.

(ಮುಂದು)

**(753) 18.08.2026 3.30 ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)**

**(ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ಸ್ಥಾನಗಳಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಐವನ್ ಡಿ' ಸೋಜಾ (ಮುಂದು):**

ಹಾಗಾಗಿ ಕ್ರೈಸ್ತ ಸಮುದಾಯದವರಿಗೂ ಒಂದು ಪ್ರವರ್ಗವನ್ನು ಮಾಡಿ. ಪ್ರವರ್ಗ 2ಬಿ ಯಾವ ರೀತಿ ಇದೆಯೋ ಅದೇ ರೀತಿ ಪ್ರವರ್ಗ 2ಸಿ ಅನ್ನೂ ಮಾಡಿ. ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಒಂದು ಪ್ರತ್ಯೇಕ ವರದಿಯನ್ನು ತಯಾರಿಸಿದರೆ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಅವರ ಸಮುದಾಯದವರಿಗೆ ಸೌಲಭ್ಯ ಸಿಗುತ್ತದೆ ಎಂದು ನಾನು ತಮ್ಮ ಮುಂದೆ ಹೇಳಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ಕರ್ನಾಟಕದ ನ್ಯಾಯಾಂಗದಲ್ಲಿ 1,127 ಅಧಿಕಾರಿಗಳ ಪೈಕಿ, ಬರೀ 9 ಜನರು ಮಾತ್ರ ಕ್ರಿಶ್ಚಿಯನ್‌ನವರು ಮಾತ್ರ ಇದ್ದಾರೆ. ಅಂದರೆ ಶೇಕಡಾ 1 ಕ್ಕಿಂತ ಕಡಿಮೆ ಇದ್ದಾರೆ. ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ ಎನ್ನುವಂತಹ ರೀತಿಯಲ್ಲಿ ಇದ್ದಾರೆ. ಹಾಗಾಗಿ ನಾನು ಒತ್ತಾಯ ಮಾಡುತ್ತೇನೆ. ಕ್ರೈಸ್ತ ಸಮುದಾಯಕ್ಕೆ ಪ್ರತ್ಯೇಕವಾದಂತಹ ಮೀಸಲಾತಿ ಅಂದರೆ ಪ್ರವರ್ಗ-2ಬಿ ಮುಸ್ಲಿಂ ಸಮುದಾಯಕ್ಕೆ ಶೇ.4 ಯಾವರೀತಿ ಮೀಸಲಾತಿ ಇದೆಯೋ, ಅದೇ ರೀತಿ ಪ್ರವರ್ಗ 2ಸಿ ಪ್ರತ್ಯೇಕವಾದ ವರ್ಗಕ್ಕೆ ಮಾಡಿ, ಕ್ರೈಸ್ತ ಸಮುದಾಯದ ಜನಸಂಖ್ಯೆಗನುಗುಣವಾಗಿ ಒಂದು ಅವಕಾಶ ಮಾಡಿಕೊಟ್ಟರೆ, ಅವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಅವಕಾಶ ಸಿಗುತ್ತದೆ ಎನ್ನುವುದು ನನ್ನ ಕಳಕಳ ವಿನಂತಿಯಾಗಿದೆ. ಮಾನ್ಯ ಸಚಿವರು ಉತ್ತರ ಹೇಳಿದ ನಂತರ ನಾನು ಉಪ ಪ್ರಶ್ನೆಯನ್ನು ಕೇಳಬಯಸುತ್ತೇನೆ.

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, 2019ನೇ ಸಾಲಿನಲ್ಲಿ 11,42,000 ಜನಸಂಖ್ಯೆ ಇತ್ತು. ತದನಂತರ ಶ್ರೀ ಕಾಂತರಾಜ್ ವರದಿಯಲ್ಲಿ ಏನೊಂದು ಸರ್ವೆಯಾಗಿತ್ತು ಮತ್ತು ಶ್ರೀ ಮಧುಸೂದನ್ ಆರ್ ನಾಯಕ್‌ರವರ ಸಮಿತಿ ಸಭೆ ಏನಾಗಿತ್ತು **(ಗೊಂದಲ)** ಅದರ ವರದಿ ಇನ್ನೂ ಬಂದಿಲ್ಲ. ಅದರ ವರದಿ ಬಂದಾಗ ಸ್ಪಷ್ಟತೆ ಸಿಗುತ್ತದೆ. **(ಗೊಂದಲ)** ಎರಡನೇ ವಿಚಾರಕ್ಕೆ ಸಂಬಂಧಪಟ್ಟಂತೆ, ಈಗ ಪ್ರವರ್ಗ 3ಬಿಯಲ್ಲಿ ಅವರಿಗೆ ಅವಕಾಶವಿದೆ. ಅವರಿಗೆ ಹೆಚ್ಚುವರಿಯಾಗಿ ಬೇರೊಂದು ವರ್ಗವನ್ನು ಸ್ಥಾಪನೆ ಮಾಡಿಕೊಡಬೇಕೆಂದರೆ reservation ಕೊಡುವುದು ಮತ್ತು reservation ನಿಗದಿಪಡಿಸುವುದು National Commission for Backward Classes (N.C.B.C.) ಅವರು. N.C.B.C. ಗೆ ಮನವಿಯನ್ನು ಸಲ್ಲಿಸಿ, **(ಗೊಂದಲ)** ಆ ಕಮಿಷನ್‌ನಿಂದ ವರದಿ ಬಂದ ಮಾಹಿತಿ ನೀಡಬಯಸುತ್ತೇನೆ.

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಕ್ರೈಸ್ತ ಸಮುದಾಯಕ್ಕೆ ಸಂಬಂಧಪಟ್ಟಂತೆ, 2025-26ನೇ ಸಾಲಿನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ರೂ.250 ಕೋಟಿ ಅನುದಾನ ನೀಡಿದ್ದೀರಿ. ತದನಂತರ ಕಡಿಮೆ ಅನುದಾನ ರೂ. 85 ಕೋಟಿಗಳನ್ನು ಕೊಟ್ಟಿದ್ದಾರೆ. ಈ ಬಾರಿ ರೂ. 93 ರೂಪಾಯಿಗಳಷ್ಟು ಅನುದಾನ ಕೊಟ್ಟಿದ್ದಾರೆ. ಈ ಕ್ರೈಸ್ತ ಸಮುದಾಯಕ್ಕೆ ಅನೇಕ ಯೋಜನೆಗಳನ್ನು ಕೊಟ್ಟರೆ ಅದನ್ನು ಸರಿಯಾಗಿ ಬಳಕೆ ಮಾಡಿ ಅದರ ಪ್ರಯೋಜನವನ್ನು ತೆಗೆದುಕೊಳ್ಳುತ್ತೇವೆ. ರೂ. 250 ಕೋಟಿಯಿಂದ, ರೂ.93 ಕೋಟಿಗಳ ಕಡಿಮೆ ಅನುದಾನ ಕೊಟ್ಟರೆ ಅದು ನಮ್ಮ ಸಮುದಾಯದ ಬಡವರಿಗೆ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, 93 ಕೋಟಿ ರೂಪಾಯಿಗಳನ್ನು ಬಳಕೆ ಮಾಡಿ ಪುನಃ ಕೊಡುತ್ತೇವೆಂದು ಹೇಳಿದ್ದಾರೆ. ನಾವು ಖಂಡಿತವಾಗಿಯೂ ಅನುದಾನವನ್ನು ಬಳಕೆ ಮಾಡುತ್ತೇವೆ. ಇನ್ನು ಮುಂದೆ ನಮ್ಮ ಸಮುದಾಯಕ್ಕೆ ಸರಿಸಮಾನ ರೀತಿಯಲ್ಲಿ ಅನುದಾನವನ್ನು ಮಾನ್ಯ ಸಚಿವರು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ. ಕ್ರೈಸ್ತ ಸಮುದಾಯಕ್ಕೆ, ಕ್ರೈಸ್ತ ಅಭಿವೃದ್ಧಿ ನಿಗಮ ಮಾಡಿದ್ದೀರಿ. ಆ ನಿಗಮಕ್ಕೆ ಕಟ್ಟಡ ಇಲ್ಲ. ಆ ನಿಗಮಕ್ಕೆ ಜಾಗ ಕೊಟ್ಟಿಲ್ಲ. ಕಟ್ಟಡ ಮತ್ತು ಜಾಗ ಕೊಡಬೇಕಾಗಿರುವ ಜವಾಬ್ದಾರಿ ಸರ್ಕಾರದ್ದು. **(ಗೊಂದಲ)** ನಮಗೆ ಕೊಟ್ಟಿರುವಂತಹ ಅನುದಾನದಿಂದ ಮಾಡುವುದಲ್ಲ. ಹಾಗಾಗಿ ನಾನು ತಮಗೆ ವಿನಂತಿ ಮಾಡುತ್ತೇನೆ. ಬೇರೆ ನಿಗಮಗಳಿಗೆ ಕೊಟ್ಟಂತೆ, ನಮ್ಮ ಕರ್ನಾಟಕ ಕ್ರೈಸ್ತ ಸಮುದಾಯ ಅಭಿವೃದ್ಧಿ ನಿಗಮಕ್ಕೂ ಜಾಗ ಮತ್ತು ಕಟ್ಟಡವನ್ನು ಕೊಡುವ ಜವಾಬ್ದಾರಿ ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವಹಿಸಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಕ್ರೈಸ್ತ ಡೆವಲಪ್‌ಮೆಂಟ್ ಕಮಿಟಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಕೂಡ ಸದಸ್ಯರಾಗಿದ್ದರು. **(ಗೊಂದಲ)** ಅದಕ್ಕೆ ರೂ.85 ಕೋಟಿಗಳು ಆರ್ಥಿಕ ಇಲಾಖೆ ಮುಖಾಂತರ ಬಿಡುಗಡೆಯಾಗಿತ್ತು. ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮಕ್ಕೆ ರೂ.93.50 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ. ಪ್ರಸ್ತುತ ನಿಗಮದಲ್ಲಿ ಒಟ್ಟು ರೂ.103.74 ಕೋಟಿಗಳ ಅನುದಾನವು ಲಭ್ಯವಿದ್ದು, ಆ ಸಮಿತಿಯಿಂದ ಬಂದಂತಹ ಏನು Action Plan ಏನಿದೆ, ಅದರ ಪ್ರಕಾರ ಸದರಿ ಅನುದಾನವು ಸಂಪೂರ್ಣವಾಗಿ ವೆಚ್ಚವಾದ ನಂತರ ಬೇಡಿಕೆಯಾನುಸಾರ ಆರ್ಥಿಕ ಇಲಾಖೆಗೆ ಹೆಚ್ಚುವರಿ ಅನುದಾನ ಕೋರಲಾಗುವುದು. ಎರಡನೆಯದಾಗಿ, ನಿಗಮಕ್ಕೆ ಜಾಗವನ್ನು ಕೇಳಿದ್ದಾರೆ. **(ಗೊಂದಲ)** ಕಂದಾಯ ಇಲಾಖೆಯ ಜಾಗ ಅಥವಾ C.A. site ಸಿಕ್ಕಿದರೆ, ಆ ಸ್ಥಳಗಳನ್ನು ಬಳಸಿಕೊಂಡು ಅಥವಾ ಎಲ್ಲಿಯಾದರೂ ಸ್ಥಳವನ್ನು ನೋಡಿದರೆ, ಸುಸಜ್ಜಿತವಾದ ಕಛೇರಿ ನಿರ್ಮಿಸಿ,.......**(ಗೊಂದಲ)** ಕ್ರೈಸ್ತ ಡೆವಲಪ್‌ಮೆಂಟ್ ಕಮಿಟಿಗೆ ಪ್ರತ್ಯೇಕವಾದ ಅಧಿಕಾರಿಯನ್ನು ಕೊಡಲು ಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ 256**

**ಡಾ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನಕ್ಕೆ ಬಂದಿಲ್ಲ. ನಂತರ ಉತ್ತರವನ್ನು ಕೊಡಿಸಲಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇನ್ನೊಂದು ಬಾರಿ ಕೊಡುತ್ತೇವೆಂದು ಹೇಳಿ.

**ಡಾ ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, okay.

**ಪ್ರಶ್ನೆ ಸಂಖ್ಯೆ 237**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಒಟ್ಟು 405 ಅಲ್ಪಸಂಖ್ಯಾತರ ವಸತಿ ನಿಲಯಗಳಿವೆ. ಆದರೆ ಅದರಲ್ಲಿ ನೂರು ಮಕ್ಕಳ capacity ಯ ಹಾಸ್ಟೆಲ್ ಇದೆ. ನನಗೆ ಗೊತ್ತಿರುವ ಪ್ರಕಾರ ನೂರಕ್ಕಿಂತ ಹೆಚ್ಚು ಮಕ್ಕಳನ್ನು admission ಮಾಡಿಸಿದ್ದರಿಂದ ಅಲ್ಲಿ ಇರುವಂತಹ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಆದಷ್ಟು ಬೇಗ ಮಕ್ಕಳ ಸಂಖ್ಯೆ ಜಾಸ್ತಿ ಮಾಡುವುದರಿಂದ ಏನೇನು ಕೊರತೆಗಳಿವೆಯೋ ಅದನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಎಲ್ಲಾ ವಸತಿ ನಿಲಯಗಳಲ್ಲಿ ಬೆಡ್‌ಗಳು ಇಲ್ಲ. ಹಾಗಾಗಿ ಬೆಡ್‌ಗಳು shortage ಇದೆ ಎಂದು ಗೊತ್ತಾಗಿದೆ. Bed shortage ಜೊತೆಗೆ ಸ್ಥಾನಗೃಹದ ಕೊರತೆ, ಅಡುಗೆ ಮನೆಗಳು ಇಲ್ಲ. ಎಲ್ಲಾ Women's Hostel ಗಳಿಗೆ Watchman, security ಇಲ್ಲ ಎಂಬುದು ಗೊತ್ತಾಗಿದೆ. ದಾವಣಗೆರೆಯಲ್ಲಿ ಹನ್ನೊಂದು ಹಾಸ್ಟೆಲ್‌ಗಳಿವೆ. ಅದರಲ್ಲಿ ನಾಲ್ಕು ಹಾಸ್ಟೆಲ್‌ಗಳು ಬಾಡಿಗೆಯಲ್ಲಿವೆ. ಬಾಡಿಗೆಲ್ಲಿರುವಂತಹ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಸರಿಯಾದ ಸವಲತ್ತುಗಳು ಇರುವುದಿಲ್ಲ. ಅಲ್ಲಿರುವ ಮೂರು-ನಾಲ್ಕು ರೂಮ್‌ಗಳಲ್ಲಿ ಅಷ್ಟೊಂದು ಮಕ್ಕಳು ಇರುತ್ತಾರೆ. **(ಗೊಂದಲ)** ಅದಕ್ಕೆ ತಾವು ದಯವಿಟ್ಟು, ಅದರದೇ ಆದಂತಹ C.A. site ತೆಗೆದುಕೊಂಡು ಉಳಿದಿರುವ ಜಾಗದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಬಾಡಿಗೆಗಳಲ್ಲಿ ಇವೆಯೋ ಅವುಗಳಿಗೆ permanent ಆಗಿ ಹಾಸ್ಟೆಲ್‌ಗಳನ್ನು ಕಟ್ಟಬೇಕೆಂದು ಹೇಳುತ್ತೇನೆ. ಅನೇಕ ಜಾಗದಲ್ಲಿ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ allotment ಆಗಿದೆ. ಅದಕ್ಕೆ ಅನುದಾನ ಕೂಡ ಬಿಡುಗಡೆಯಾಗಿದೆ. ಆದರೆ construction ವಿಳಂಬವಾಗುತ್ತಿದೆ. ತಾವು ದಯವಿಟ್ಟು, ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಹೊಸ ಹಾಸ್ಟೆಲ್ ಮಾಡಬೇಕಾದರೆ, ಹಳೆಯ ಹಾಸ್ಟೆಲ್‌ಗಳಲ್ಲಿ ಏನೇನು ಕೊರತೆಯಿದೆಯೋ ಅದನ್ನು ಸರಿಪಡಿಸಿದರೆ, ಓದುವ ಮಕ್ಕಳಿಗೆ ಬಹಳಷ್ಟು ಸಹಾಯ ಮಾಡಿದಂತಾಗುತ್ತದೆ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 405 ಹಾಸ್ಟೆಲ್‌ಗಳಿವೆ. ಅದರಲ್ಲಿ 114 ಹಾಸ್ಟೆಲ್‌ಗಳು ಬಾಡಿಗೆಯಲ್ಲಿ ನಡೆಯುತ್ತಿವೆ. ಎಲ್ಲಿ ಇವತ್ತು permanent building ಇದ್ದಾವೆಯೋ, ಅಲ್ಲೆಲ್ಲ ಹಾಸ್ಟೆಲ್‌ಗಳಿವೆ. ಎಲ್ಲಿ rented building ಹಾಸ್ಟೆಲ್‌ಗಳಲ್ಲಿ ವ್ಯವಸ್ಥೆ ಕಡಿಮೆ ಇದೆ. ಅದನ್ನೆಲ್ಲಾ ನೋಡಿಕೊಂಡು ಸುಸಜ್ಜಿತವಾದ ವ್ಯವಸ್ಥೆ ಮಾಡುತ್ತೇನೆ. **(ಗೊಂದಲ)** ಅದರ ಜೊತೆಗೆ ಇರುವ rented building ಅನ್ನು permanent ಆಗಿ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಎಲ್ಲಿ ಜಾಗ ಸಿಗುತ್ತದೆಯೋ, ಜಾಗವನ್ನು ಗುರುತಿಸಿಕೊಂಡು

permanent hostel building ಮಾಡುವುದಕ್ಕೆ Action Plan ರೂಪಿಸುತ್ತೇವೆ. ಎಲ್ಲೆಲ್ಲಿ ಕಟ್ಟಡ ಅರ್ಧಂಬರ್ಧ ಕಟ್ಟಿರುವುದು ಬಾಕಿ ಇದೆಯೋ, ಅದನ್ನು ಆದಷ್ಟು ಬೇಗನೇ ಪೂರ್ಣಗೊಳಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮೇಲೆ ನನಗೆ ಭರವಸೆ ಇದೆ. ಮಾನ್ಯ ಸಚಿವರು ಹೊಸದಾಗಿ charge ಅನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸಚಿವರು ಅದರ ಬಗ್ಗೆ ಸರಿಯಾದ ಗಮನ ವಹಿಸಿದರೆ, ಬಹಳಷ್ಟು ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಏಕೆಂದರೆ ಶೇಕಡಾ 99 ರಷ್ಟು ಬಡ ಮಕ್ಕಳು ಇದ್ದಾರೆ. ಎರಡನೇ ವಿಚಾರವೇನೆಂದರೆ, ಕಲಬುರಗಿ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹಾಸ್ಟೆಲ್‌ನಲ್ಲಿ ಊಟ ಮಾಡಿದ ಹದಿನೈದು ಜನ ಮಕ್ಕಳು ಆರೋಗ್ಯ ಬಹಳಷ್ಟು ಗಂಭೀರಗೊಂಡು ಆಸ್ಪತ್ರೆಗೆ admit ಆಗಿದ್ದರು. ಮಾನ್ಯ ಸಚಿವರು ಅದರ ಬಗ್ಗೆ ತಿಳಿದುಕೊಂಡು, ಯಾವುದೇ ಹಾಸ್ಟೆಲ್‌ಗಳಲ್ಲಿ ಇನ್ನು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಯಿಂದ ಅದರ ವರದಿಯನ್ನು ತರಸಿಕೊಳ್ಳುತ್ತೇನೆ. ಮುಂದೆ ಈ ರೀತಿಯಾಗದಂತೆ ಕ್ರಮವನ್ನು ಸೂಚಿಸುತ್ತೇನೆ. ಒಂದುವೇಳೆ ಆ ಹಾಸ್ಟೆಲ್‌ನಲ್ಲಿ ಸ್ವಯಂಕೃತ ಅಪರಾಧವಾಗಿದ್ದರೆ, ಆ ಅಧಿಕಾರಿಗಳ ಮೇಲೆ ಕ್ರಮ ವಹಿಸುತ್ತೇನೆ.

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಯತೀಂದ್ರ ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 18ನೇ ಆಗಸ್ಟ್ 2026, ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 121 ಪ್ರಶ್ನೆಗಳ ಪೈಕಿ, 73 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ನಾವು ಚರ್ಚೆಗೆ ತಯಾರಿದ್ದೇವೆ. ಮಾನ್ಯ ಸಚಿವರು ಏತಕ್ಕೆ ರಾಜೀನಾಮೆ ಕೊಡಬೇಕೆಂಬ ಬಗ್ಗೆ ಕಾರಣ ಹೇಳಿ, ಅವರು ಚರ್ಚೆ ಮಾಡಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ವಿರೋಧ ಪಕ್ಷದವರು ಯಾರೂ ನೋಟಿಸ್ ಕೊಡುತ್ತಿಲ್ಲ.

**(ಗೊಂದಲ)**

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಅವರು ಯಾವುದೇ ಮಾಹಿತಿ ನೀಡದೇ ಸುಮ್ಮನೆ ಇವರು ಪ್ರತಿಭಟನೆ ಮಾಡುತ್ತಾರೆಂದರೆ, ಜನರು ಅವರನ್ನು ಕ್ಷಮಿಸುವುದಕ್ಕೆ ಹೋಗುವುದಿಲ್ಲ. ಅವರು ಮೊದಲು ಚರ್ಚೆ ಮಾಡಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ಸದಸ್ಯರು):–** ನಾವು ಎಲ್ಲಿಗೆ ಹೋಗಬೇಕು, ಇದರ ಬಗ್ಗೆ ಎಲ್ಲಿ ಕೇಳಬೇಕು ಎಂದು details ಕೊಡಬೇಕೆ? ಇಲ್ಲಿ ಸದನ ನಡೆಯುತ್ತಿದೆ.

**(ಗೊಂದಲ)**

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಮೊದಲು ಇವರು ಇಲ್ಲಿ ಚರ್ಚೆಗೆ ಬರಲಿ, ಚರ್ಚೆ ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:– ಮಾನ್ಯ** ವಿರೋಧ ಪಕ್ಷದ ನಾಯಕರೇ. ಒಂದು ನಿಮಿಷ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**(ಮುಂದು)**

(754) 18.08.2026 3.40 TCH-RN (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಡಾ: ಯತೀಂದ್ರ. ಎಸ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ರಾಜೀನಾಮೆ ಕೊಡಬೇಕು ಎಂದರೆ ಹೇಗೆ? ಅವರು ಚರ್ಚೆ ಮಾಡಲಿ. ನಿಮ್ಮೆಲ್ಲರ ಪ್ರಶ್ನೆಗೆ ಮಾನ್ಯ ಸಚಿವರೇ ಬಂದು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ. ಅವರು ಚರ್ಚೆಯೇ ಮಾಡದೇ ಸುಮ್ಮನೆ ರಾಜೀನಾಮೆ ಕೊಡಿ ಎಂದರೆ ಹೇಗೆ?

**(ಗೊಂದಲ)**

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಯು.ಟಿ.ಖಾದರ್‌ರವರೇ, ತಾವು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ, ತಾವು ಕೂಡ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು ಏನೋ ಹೇಳುತ್ತಾರೆ, ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ.

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದಲ್ಲಿ ಈ ರೀತಿ ಹೇಳಿದೆ: "**ಸದಸ್ಯರು ಪಾಲಿಸಬೇಕಾದ ನಿಯಮಗಳು: 303 ಸದನದಲ್ಲಿ ಉಪಸ್ಥಿತರಿದ್ದಾಗ ಸದಸ್ಯರು ಪಾಲಿಸಬೇಕಾದ ನಿಯಮಗಳು**; (14) "ಸದನದಲ್ಲಿ ಬ್ಯಾಡ್ಜುಗಳು ಅಥವಾ ಯಾವುದೇ ವಸ್ತುವನ್ನು ಧರಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ" ಎಂದು ಹೇಳಲಾಗಿದೆ. ತಾವೆಲ್ಲಾ ಅದನ್ನು violate ಮಾಡುತ್ತಿದ್ದೀರಿ. ಇವತ್ತು ನಾನು Marshalರವರಿಗೆ ಆದೇಶ ಮಾಡುತ್ತಿದ್ದೇನೆ. ನಾಳೆಯಿಂದ ಯಾರೂ ಕೂಡ ಈ ಸದನಕ್ಕೆ ಈ placard ಆಗಲೀ ಅಥವಾ ಇತರೆ ವಸ್ತುಗಳನ್ನು ತರುವುದನ್ನು ನಿಷೇಧ ಮಾಡಿದ್ದೇನೆ.

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ:–** ಮಾನ್ಯ ಸಭಾಪತಿಯವರೇ, ಆ ಕಡೆ ಹೇಳಿ, ಇಲ್ಲಿ ಅಲ್ಲ.

**ಸಭಾಪತಿಯವರು:–** ನಾನು ಎಲ್ಲರಿಗೂ ಹೇಳುತ್ತಿದ್ದೇನೆ. ತಮಗೂ ಕೂಡ ಹೇಳುತ್ತಿದ್ದೇನೆ. ಆದ್ದರಿಂದ ದಯವಿಟ್ಟು ನಾಳೆಯಿಂದ ಈ ರೀತಿ ಮಾಡುವುದಕ್ಕೆ ಹೋಗಬೇಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾಳೆಯಿಂದ ತರಬೇಡಿ ಎಂದು ಹೇಳಿದ್ದೀರಿ, ಇದೇನು ಹೊಸದೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ತಾವು ಈ ಸಂಬಂಧ ನನಗೆ ನೋಟೀಸ್ ಕೊಟ್ಟಿಲ್ಲ. ನೀವು ನನಗೆ ಒಂದು ನೋಟೀಸ್ ಕೊಡಿ. ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಚರ್ಚೆ ಆಗಿಲ್ಲವೆ? ಇದರಲ್ಲಿ ಲೂಟಿಯಾಗಿದೆ. ಎರಡೂ ಸದನಗಳಲ್ಲಿ ಚರ್ಚೆ ಆಗಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ನನಗೆ ಒಂದು ನೋಟೀಸ್ ಕೊಡಿ. ಮಾನ್ಯ ಸಚಿವರು ಚರ್ಚೆ ಮಾಡುವುದಕ್ಕೆ ready ಇದ್ದಾರೆ. ಮಾನ್ಯ ಸಭಾನಾಯಕರು ನಾವು ಚರ್ಚೆ ಮಾಡುತ್ತೇವೆ ಮತ್ತು ಹೇಳಿಕೆ ಕೊಡುತ್ತೇವೆ ಎಂಬ ಮಾತನ್ನು ಕೂಡ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಹಿಂದೆ ರಾಜೀನಾಮೆ ಕೊಟ್ಟಿದ್ದರು. ಸರ್ಕಾರ ಮತ್ತೆ ಅವರನ್ನು ಮಂತ್ರಿಮಂಡಲಕ್ಕೆ ಸೇರಿಸಿದೆ. ಆದ್ದರಿಂದ ಈ ಚರ್ಚೆ ನಮಗೆ ಅವಶ್ಯಕತೆ ಇಲ್ಲ. ಕಳಂಕಿತರ ಬಗ್ಗೆ ಮತ್ತೊಮ್ಮೆ ಚರ್ಚೆ ಮಾಡಬೇಕಾಗಿಲ್ಲ.

**(ಗೊಂದಲ)**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**(ಗೊಂದಲ)**

**ಡಾ: ಯತೀಂದ್ರ. ಎಸ್:–** ಮಾನ್ಯ ಸಭಾಪತಿಯವರೇ, ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. **(ಗೊಂದಲ)** ಮಂತ್ರಿಗಳ ಮೇಲೆ ಯಾವುದೇ ಆರೋಪ ಸಾಬೀತಾಗಿಲ್ಲ. **(ಗೊಂದಲ)** ಅವರೇಕೆ ರಾಜೀನಾಮೆ ಕೊಡಬೇಕು? ದಯವಿಟ್ಟು ಚರ್ಚೆಗೆ ಬನ್ನಿ, ಮಾನ್ಯ ಸಚಿವರೇ ಬಂದು ಉತ್ತರ ಕೊಡುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವಿರೋಧ ಪಕ್ಷದ ಮುಖ್ಯಸಚೇತಕರು ಹಾಗೂ ಮಾನ್ಯ ಯು.ಟಿ.ಖಾದರ್‌ರವರು ಮಾತನಾಡಿದ್ದು ಯಾವುದೂ ದಾಖಲೆಗೆ ತೆಗೆದುಕೊಳ್ಳಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಎನ್.ರವಿಕುಮಾರ್ ರವರು ಹಾಗೂ ಶ್ರೀ ಯು.ಟಿ.ಖಾದರ್ ರವರು ಮಾತನಾಡಿದ್ದನ್ನು ಯಾವುದನ್ನೂ ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:–** ಶ್ರೀ ರಾಮೋಜಿಗೌಡರವರೇ, ತಾವು ಓದಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

## 6. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವನೆಗಳು

**ಅ) ವಿಷಯ:- ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದೆಂಬ ದೃಷ್ಟಿಯಿಂದ 'ನಿರಂತರ ಆಪ್' ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಿಸುವ ಕುರಿತು.**

----

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ದಿನಾಂಕ: 14.08.2026ರ 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ, ಶಿಕ್ಷಣದಿಂದ ಯಾವುದೇ ಮಕ್ಕಳು ವಂಚಿತರಾಗಬಾರದು ಎಂಬ ದೃಷ್ಟಿಯಿಂದ ಸರ್ಕಾರ 'ನಿರಂತರ ಆಪ್' ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಗೆ ಮುಂದಾಗಿದೆ. ಆದರೆ, ಜಿಲ್ಲೆಯಲ್ಲಿ ತಾಂತ್ರಿಕ ದೋಷ ಹಾಗೂ ಇನ್ನಿತರ ಸಮಸ್ಯೆಗಳು ಶಿಕ್ಷಕರನ್ನು ಬಿಟ್ಟೂ ಬಿಡದಂತೆ ಕಾಡುತ್ತಿದ್ದು ಶಿಕ್ಷಕರು ನಿತ್ಯವೂ ಮಕ್ಕಳ ಹಾಜರಾತಿಗೆ ಕಸರತ್ತು ನಡೆಸುವಂತಾಗಿದೆ. ಸರ್ಕಾರ ಪ್ರಸಕ್ತ ವರ್ಷದಿಂದ ಸರ್ಕಾರಿ ನೌಕರರಿಗೆ "ಕರ್ತವ್ಯ" ಆಪ್ ಮೂಲಕ ಹಾಜರಾತಿ ಕಡ್ಡಾಯ ಮಾಡಿ ಆದೇಶಿಸಿದೆ. ಇದರ ಜೊತೆಗೆ ಶಾಲಾ ಶಿಕ್ಷಣ ಇಲಾಖೆ ಶಾಲೆಯಿಂದ ಹೊರಗುಳಯುತ್ತಿದ್ದ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳುವುದರ ಜತೆಗೆ ಶಿಕ್ಷಣ ಇಲಾಖೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು 'ನಿರಂತರ ಆಪ್' ಬಳಕೆಗೆ ತಂದಿದೆ. ಈ ಮೂಲಕ ವಿದ್ಯಾರ್ಥಿಗಳ ಹಾಜರಾತಿಯನ್ನು ಡಿಜಿಟಲ್ ಮಾಡಿ, ಆಪ್ ಮೂಲಕ ಕಡ್ಡಾಯವಾಗಿ ದಾಖಲಿಸಲು ಆದೇಶಿಸಿದೆ. ಆದರೆ, 'ನಿರಂತರ ಆಪ್'ನಲ್ಲಿರುವ ತಾಂತ್ರಿಕ ಸಮಸ್ಯೆಗಳು ಸೇರಿದಂತೆ, ಇನ್ನಿತರೆ ತೊಂದರೆಗಳು ಶಿಕ್ಷಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಬೋಧನೆ ನಡುವೆ ನಿರಂತರ ಹಿಂಸೆ ಎಂಬುದು ಘೋಷವಾಕ್ಯವಾಗಿಬಿಟ್ಟಿದೆ. ಮಲೆನಾಡು ಸೇರಿದಂತೆ ಬಯಲು ಭಾಗದ ಶಾಲೆಗಳಲ್ಲಿಯೂ ನಿತ್ಯದ ಹಾಜರಾತಿ ಸಂದರ್ಭ ಒಂದಲ್ಲಾ ಒಂದು ತಾಂತ್ರಿಕ ಸಮಸ್ಯೆಗಳು ಶಿಕ್ಷಕರನ್ನು ಕಾಡುತ್ತಿವೆ. ಕೆಲವು ಮಕ್ಕಳು ಶಾಲೆಗೆ ಹಾಜರಾಗಿದ್ದರೂ ಆಪ್‌ನಲ್ಲಿ ಅವರ ಮುಖ ದಾಖಲು ಆಗದಿರುವುದರಿಂದ, 'ಗೈರು' ಎಂದು ನಮೂದಾಗುತ್ತಿದೆ. ಇದರಿಂದ ಬಿಸಿಯೂಟದ ಆಹಾರ ಪೂರೈಕೆ, ತರಕಾರಿ ಖರ್ಚು-ವೆಚ್ಚ ಶಿಕ್ಷಕರ ಮೇಲೆ ಬರುತ್ತಿದೆ. ಇದರ ಜೊತೆಗೆ, ಸರ್ವರ್ ಸಮಸ್ಯೆ, ಟೆಕ್ನಿಕಲ್ ಎರರ್, ನೆಟ್ವರ್ಕ್ ಸಮಸ್ಯೆ, ಇಂಟರ್ನೆಟ್ ಸಮಸ್ಯೆಗಳಿಂದ ಶಿಕ್ಷಕರು ಮಕ್ಕಳ ಹಾಜರಾತಿಗೆ ಕಾಲಹರಣ ಮಾಡುವಂತಹ ಪರಿಸ್ಥಿತಿ ಎದರಾಗಿದೆ. ಈ ರೀತಿಯ ಹಲವು ತಾಂತ್ರಿಕ ಸಮಸ್ಯೆಗಳನ್ನು ತುರ್ತಾಗಿ ಸರಿಪಡಿಸಿ, ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಅನುಕೂಲ ಮಾಡಿಕೊಡುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಬಳಿ ಪ್ರಸ್ತಾಪಿಸಬಯಸುತ್ತೇನೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಾನ್ಯ ಸಚಿವರಿಂದ ನಂತರ ಉತ್ತರವನ್ನು ಕೊಡಿಸಲಾಗುವುದು.

**ಆ) ವಿಷಯ:- SC/ST ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳ ವಿಲೇವಾರಿ ಮತ್ತು ತ್ವರಿತ ನ್ಯಾಯ ಒದಗಿಸುವ ಕುರಿತು.**

----

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ, ಹತ್ಯೆ ಹಾಗೂ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಮತ್ತು ತನಿಖೆ/ವಿಚಾರಣೆ ವಿಳಂಬವಾಗುತ್ತಿರುವ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿದ್ದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳು.

ರಾಜ್ಯದಲ್ಲಿ ಪ್ರತಿ ವರ್ಷ ಸರಾಸರಿ 2,000ಕ್ಕೂ ಅಧಿಕ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಕಳೆದ ಮೂರು ವರ್ಷಗಳಲ್ಲಿ 327 ದಲಿತರ ಹತ್ಯೆ ಹಾಗೂ 620 ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ವರದಿಯಾಗಿರುವ ತೀವ್ರ ಕಳವಳಕಾರಿ ಸಂಗತಿ ದಿನಾಂಕ 18.08.2026ರ 'ವಾರ್ತಾ ಭಾರತಿ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

2023 ರಿಂದ 2026ರ ಜೂನ್ ಅಂತ್ಯದವರೆಗೆ ರಾಜ್ಯಾದ್ಯಂತ ಒಟ್ಟು 8,069 ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. 2023ರಲ್ಲಿ 2,142 ಪ್ರಕರಣಗಳು, 2024ರಲ್ಲಿ 2,121 ಪ್ರಕರಣಗಳು, 2025ರಲ್ಲಿ 2,411 ಪ್ರಕರಣಗಳು, 2026 (ಜೂನ್ ವರೆಗೆ) ಒಟ್ಟು 1,395 ಪ್ರಕರಣಗಳು ವರದಿಯಾಗಿರುವುದು ತಿಳಿದುಬಂದಿರುತ್ತದೆ. ಈ ಪೈಕಿ 4,643 ಪ್ರಕರಣಗಳ ವಿಚಾರಣೆಯೇ ನಡೆಯದಿರುವುದು, ಅಪರಾಧಿಗಳ ಬಂಧನ ಹಾಗೂ ಪ್ರಕರಣಗಳ ವಿಲೇವಾರಿ ಅತ್ಯಂತ ಕಡಿಮೆಯಿದ್ದು, ನೂರಾರು ಪ್ರಕರಣಗಳು ತನಿಖೆಯ ಹಂತದಲ್ಲೇ ಬಾಕಿ ಉಳಿದಿವೆ. ನೈಜ ಸಂತ್ರಸ್ತರಿಗೆ ತ್ವರಿತ ನ್ಯಾಯ ಸಿಗುವಲ್ಲಿ ಮತ್ತು ಕಾಯ್ದೆಯ ದುರುಪಯೋಗ ತಡೆಯುವಲ್ಲಿ ಸೂಕ್ತ ಮೇಲ್ವಿಚಾರಣೆಯ ಅಗತ್ಯವಿದೆ.

ಬಾಕಿ ಇರುವ ಪ್ರಕರಣಗಳಿಗೆ ನಿಗದಿತ ಕಾಲಮಿತಿಯಲ್ಲಿ ನ್ಯಾಯ ದೊರಕಿಸಲು ವಿಶೇಷ ನ್ಯಾಯಾಲಯಗಳನ್ನು (Fast Track Courts) ಸಕ್ರಿಯಗೊಳಿಸಬೇಕು. S.C/S.T ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ದಾಖಲಾಗುವ ದೂರುಗಳ ತನಿಖೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು. ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿಗಳು ನಿಯಮಿತವಾಗಿ ಸಭೆ ನಡೆಸಿ, ಸಂತ್ರಸ್ತ ಕುಟುಂಬಗಳಿಗೆ ರಕ್ಷಣೆ ಹಾಗೂ ಕಾನೂನು ನೆರವು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ: ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಾನ್ಯ ಸಚಿವರಿಂದ ನಂತರ ಉತ್ತರವನ್ನು ಕೊಡಿಸಲಾಗುವುದು.

**ಇ) ವಿಷಯ:- ಶಿಕ್ಷಕರ ಹುದ್ದೆಗಳ ನೇಮಕಾತಿಯಲ್ಲಿ ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳ ಸೇರ್ಪಡೆ ಹಾಗೂ ಅಧಿಸೂಚನೆ ಪರಿಷ್ಕರಣೆ ಕುರಿತು.**

- - - - -

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಶಿಕ್ಷಕರ ಹುದ್ದೆಗಳ ನೇಮಕಾತಿಯಲ್ಲಿ ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳ ನಿರ್ಲಕ್ಷ್ಯ" ಎಂಬ ಸಾರ್ವಜನಿಕರ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

ಕರ್ನಾಟಕ ಸರಕಾರವು ಆಗಸ್ಟ್ ಹತ್ತರಂದು ರಾಜ್ಯಾದ್ಯಂತ 15,000 ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿದೆ. ಬಹುಕಾಲದಿಂದ ನಿರೀಕ್ಷಿಸಲಾಗುತ್ತಿದ್ದ ಈ ಆದೇಶ ಸ್ವಾಗತಾರ್ಹವಾಗಿದೆ. ಆದರೆ ಈ ನೇಮಕಾತಿ ಮುಖ್ಯವಾಗಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಮಾತ್ರ ಸೀಮಿತವಾಗಿರುವುದು ಇದೀಗ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

2022ರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಮಾದರಿಯಲ್ಲೇ ಇತ್ತೀಚಿನ ಅಧಿಸೂಚನೆಯಲ್ಲಿ 8,500 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು (ಕನ್ನಡ ಮಾಧ್ಯಮ) ಸೇರಿದಂತೆ ವಿವಿಧ ವರ್ಗಗಳ ಹುದ್ದೆಗಳನ್ನು ಪ್ರಕಟಿಸಲಾಗಿದೆ.

ಆದರೆ, ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉರ್ದು, ಮರಾಠಿ, ತಮಿಳು, ತೆಲುಗು, ಹಿಂದಿ ಮುಂತಾದ ಇತರ ಮಾಧ್ಯಮದ ಶಾಲೆಗಳಿಗೆ ಪ್ರತ್ಯೇಕ ನೇಮಕಾತಿ ಅಥವಾ ಹುದ್ದೆಗಳ ಹಂಚಿಕೆ ಮಾಡಲಾಗಿಲ್ಲ. ಈ ಶಾಲೆಗಳಲ್ಲಿಯೂ ಶಿಕ್ಷಕರ ಕೊರತೆ ತೀವ್ರವಾಗಿದ್ದು, ನೇಮಕಾತಿಗಾಗಿ ಹಲವು ವರ್ಷಗಳಿಂದ ಕಾಯುತ್ತಿರುವ ಅಭ್ಯರ್ಥಿಗಳ ನಿರೀಕ್ಷೆ ಮತ್ತೊಮ್ಮೆ ಹುಸಿಯಾಗಿದೆ.

ಕರ್ನಾಟಕದಲ್ಲಿ ಕನ್ನಡ ಮಾಧ್ಯಮದ 41,735 ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮದ 4,352 ಶಾಲೆಗಳ ನಂತರ, 3,947 ಉರ್ದು ಮಾಧ್ಯಮ ಶಾಲೆಗಳು ಇದ್ದು, ಅವುಗಳಲ್ಲಿ ಸುಮಾರು 2,73,573 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇದರ ಜೊತೆಗೆ 881 ಮರಾಠಿ ಮಾಧ್ಯಮ ಶಾಲೆಗಳು, 53 ತಮಿಳು ಮಾಧ್ಯಮ ಶಾಲೆಗಳು, 53 ತೆಲುಗು ಮಾಧ್ಯಮ ಶಾಲೆಗಳು ಹಾಗೂ 5 ಹಿಂದಿ ಮಾಧ್ಯಮ ಶಾಲೆಗಳು ಕೂಡ ಕಾರ್ಯನಿರ್ವಹಿಸುತ್ತಿವೆ.

ಈ ಶಾಲೆಗಳಲ್ಲಿಯೂ ಕೂಡ ಶಿಕ್ಷಕರ ಹುದ್ದೆಗಳು ಗಣನೀಯ ಪ್ರಮಾಣದಲ್ಲಿ ಖಾಲಿ ಇವೆ. ಉರ್ದು ಮಾಧ್ಯಮದಲ್ಲೇ ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ಪ್ರೌಢಶಾಲಾ ಶಿಕ್ಷಕರ ಸುಮಾರು ಐದು ಸಾವಿರ ಹುದ್ದೆಗಳು ಖಾಲಿ ಇರುವುದಾಗಿ ತಿಳಿದುಬಂದಿದೆ. ಅನೇಕ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳು ಬಹುತೇಕ ಅತಿಥಿ ಶಿಕ್ಷಕರ ಮೇಲೆ ಅವಲಂಬಿತವಾಗಿವೆ. ಇಂತಹ ಸಂದರ್ಭದಲ್ಲಿ ಬಹು ನಿರೀಕ್ಷಿತ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಶಾಲೆಗಳ ಸಮಸ್ಯೆಗಳಿಗೆ ಯಾವುದೇ ಸ್ಪಷ್ಟ ಉಲ್ಲೇಖವಿಲ್ಲದಿರುವುದು, ಅಲ್ಪಸಂಖ್ಯಾತರ ಶಾಲೆಗಳನ್ನೂ ಹಾಗೂ ಆ ಭಾಷೆಗಳಲ್ಲಿ ಅರ್ಹತೆ ಪಡೆದಿರುವ ಶಿಕ್ಷಕ ಅಭ್ಯರ್ಥಿಗಳನ್ನೂ ಕಡೆಗಣಿಸಿದಂತಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ವಿಚಾರವನ್ನು ತೀವ್ರವಾಗಿ ಪರಿಗಣಿಸಿ, ಶಿಕ್ಷಕರ ಹುದ್ದೆಗಳ ನೇಮಕಾತಿಯಲ್ಲಿ ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳನ್ನು ಸೇರ್ಪಡಿಸಿ, ಶಿಕ್ಷಕ ಅಭ್ಯರ್ಥಿಗಳಿಗೆ ನ್ಯಾಯಯುತವಾಗಿ ಅವಕಾಶ ಕಲ್ಪಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಮುಂದು)

(755)18.8.2026/3.50/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 17.8.2026ರಂದು ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ 'ವಾರ್ತಾ ಭಾರತಿ' ದಿನಪತ್ರಿಕೆಯಲ್ಲಿ ಕರ್ನಾಟಕದಲ್ಲಿ ಶಿಕ್ಷಕರ ನೇಮಕಾತಿ – ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳನ್ನು ನಿರ್ಲಕ್ಷ್ಯಿಸಿದ ಸರ್ಕಾರ ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿದೆ.

ರಾಜ್ಯ ಸರ್ಕಾರವು ದಿನಾಂಕ 10.8.2026ರಂದು ರಾಜ್ಯಾದ್ಯಂತ 1,50,000 ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿದ್ದು, ಈ ನೇಮಕಾತಿ ಆದೇಶ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಶಾಲೆಗಳಿಗೆ ಮಾತ್ರ ಸೀಮಿತವಾಗಿರುವುದು ಇದೀಗ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉರ್ದು, ಮರಾಠಿ, ತಮಿಳು, ತೆಲುಗು, ಹಿಂದಿ ಮುಂತಾದ ಇತರ ಮಾಧ್ಯಮದ ಶಾಲೆಗಳಿಗೆ ಪ್ರತ್ಯೇಕ ನೇಮಕಾತಿ ಅಥವಾ ಹುದ್ದೆಗಳ ಹಂಚಿಕೆ ಮಾಡಿರುವುದಿಲ್ಲ. ರಾಜ್ಯದಲ್ಲಿ 3947 ಉರ್ದು ಮಾಧ್ಯಮ ಶಾಲೆಗಳು ಇದ್ದು, ಸುಮಾರು 2,73,573 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇದರ ಜೊತೆಗೆ 881 ಮರಾಠಿ, 53 ತಮಿಳು, 53 ತೆಲುಗು ಹಾಗೂ 05 ಹಿಂದಿ ಮಾಧ್ಯಮ ಶಾಲೆಗಳು ಕೂಡ ಕಾರ್ಯನಿರ್ವಹಿಸುತ್ತಿವೆ.

ಈ ಶಾಲೆಗಳಲ್ಲಿಯು ಸುಮಾರು 5000 ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಭಾಷಾ ಅಲ್ಪಸಂಖ್ಯಾತರ ಶಾಲೆಗಳನ್ನೂ ಹಾಗೂ ಆ ಭಾಷೆಗಳಲ್ಲಿ ಅರ್ಹತೆ ಪಡೆದಿರುವ ಶಿಕ್ಷಕ ಅಭ್ಯರ್ಥಿಗಳನ್ನೂ ಅನಿಶ್ಚಿತತೆಯಲ್ಲಿಟ್ಟಿದೆ. 2009ರ ಶಿಕ್ಷಣದ ಹಕ್ಕು ಕಾಯ್ದೆಯ (R.T.E Act) ಪ್ರಕಾರ ಶಿಕ್ಷಕರ ಖಾಲಿ ಹುದ್ದೆಗಳನ್ನು ಸಮಯೋಚಿತವಾಗಿ ಭರ್ತಿ ಮಾಡುವ ಅಗತ್ಯವನ್ನು ಒತ್ತಿ ಹೇಳುತ್ತವೆ. ಅದೇ ರೀತಿ, ಈ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ತಮ್ಮ ಮಾತೃಭಾಷೆಯಲ್ಲಿ ಇತರ ವಿದ್ಯಾರ್ಥಿಗಳಂತೆ ಗುಣಮಟ್ಟದ ಶಿಕ್ಷಣ ಪಡೆಯುವ ಸಮಾನ ಅವಕಾಶವೂ ಇರಬೇಕು. ಇನ್ನೊಂದು ಪ್ರಮುಖ ಅಂಶವೆಂದರೆ, ಕಲಬುರಗಿ, ಬೀದರ್, ಬೆಳಗಾವಿ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಭಾಷಾ ಅಲ್ಪಸಂಖ್ಯಾತ ಮಾಧ್ಯಮದ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಹಲವು ಜಿಲ್ಲೆಗಳು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿವೆ.

ಆದರೆ ಈ ಬಾರಿ ಮಾಧ್ಯಮವಾರು ರೀತಿಯಲ್ಲಿ ಮಾಡಲಾಗಿರುವ ವರ್ಗೀಕರಣವು ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದೆ, ನೇಮಕಾತಿ ಪರೀಕ್ಷೆಯಲ್ಲಿ ಭಾಷಾ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಮಾನ್ಯತೆ ಪಡೆದ ಭಾಷೆಗಳಲ್ಲಿ

ಪರೀಕ್ಷೆ ಬರೆಯುವ ಅವಕಾಶ ಕಲ್ಪಿಸಬೇಕು. ರಾಜ್ಯದ ವಿವಿಧ ಜಿಲ್ಲೆ ಹಾಗೂ ವಿಭಾಗಗಳಲ್ಲಿ ಲಭ್ಯವಿರುವ ಹೈಸ್ಕೂಲ್ ಗಣಿತ ಶಿಕ್ಷಕರ ಖಾಲಿ ಹುದ್ದೆಗಳನ್ನೂ ನೇಮಕಾತಿ ಅಧಿಸೂಚನೆಯಲ್ಲಿ ಸೇರಿಸಬೇಕು ಹಾಗೂ ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರೆಯುವಂತೆ ಇಲಾಖೆಯು ಭಾಷಾ ಅಲ್ಪಸಂಖ್ಯಾತರ ಶಿಕ್ಷಕರ ಜೊತೆಯಲ್ಲಿ ಗಣಿತ, ವಿಜ್ಞಾನ ಹಾಗೂ ಸಮಾಜ ವಿಷಯಗಳ ಶಿಕ್ಷಕರ ಖಾಲಿ ಹುದ್ದೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಈಗಾಗಲೇ ಸರ್ಕಾರವು ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಿ, ಹೊಸ ಅಧಿಸೂಚನೆಯನ್ನು ಪ್ರಕಟಿಸಬೇಕು ಎಂದು ಮಾನ್ಯ ಶಾಲಾ ಶಿಕ್ಷಣ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಡಾ॥ ಯತೀಂದ್ರ. ಎಸ್.(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:- ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹ ಪಿಂಚಣಿದಾರರ ಪಿಂಚಣಿ ತಡೆಹಿಡಿದಿರುವುದು ಹಾಗೂ ದಾಖಲೆ ಸಲ್ಲಿಸಲು ಕಾಲಾವಕಾಶ ವಿಸ್ತರಿಸುವ ಕುರಿತು.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸೂಕ್ತ ದಾಖಲೆಗಳನ್ನು ಸಲ್ಲಿಸದ 17.97 ಲಕ್ಷಕ್ಕೂ ಅಧಿಕ ಪಿಂಚಣಿದಾರರಿಗೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಆಯುಕ್ತಾಲಯವು ನೋಟಿಸ್ ಜಾರಿಗೊಳಿಸಿದ್ದು, ಎಸ್.ಎಂ.ಎಸ್ ಮೂಲಕವೂ ಎಚ್ಚರಿಕೆ ನೀಡಿದೆ. ಸುಳ್ಳು ದಾಖಲೆಗಳು ಮತ್ತು ವ್ಯತ್ಯಾಸಗಳನ್ನು ಸರಿಪಡಿಸಲು ಸರ್ಕಾರ ಈ ಕ್ರಮ ಕೈಗೊಂಡಿದ್ದರೂ, ಇತ್ತ ಅರ್ಹ ಫಲಾನುಭವಿಗಳು ಅಲೆದಾಟದಿಂದ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ.

ಪಿಂಚಣಿ ಪಡೆಯುತ್ತಿದ್ದ ಒಟ್ಟು 83,12,411 ಮಂದಿಯ ಕುಟುಂಬದ ಡೇಟಾಬೇಸ್ ಅನ್ನು ಬಿ.ಎಂ.ಎಸ್ ತಂತ್ರಾಂಶದೊಂದಿಗೆ ತಾಳೆ ಮಾಡಿದಾಗ 23,14,450 ಮಂದಿಯ ಮಾಹಿತಿ ಸಂದೇಹಾಸ್ಪದವಾಗಿ ಕಂಡು ಬಂದಿದೆ. ಹೀಗಾಗಿ ಇವರಿಗೆ ತಾತ್ಕಾಲಿಕವಾಗಿ ಪಿಂಚಣಿ ತಡೆ ಹಿಡಿಯಲಾಗಿದ್ದು, ಮತ್ತೊಮ್ಮೆ ದಾಖಲೆಗಳನ್ನು ಸಲ್ಲಿಸಿ ದೃಢೀಕರಿಸಿಕೊಳ್ಳುವಂತೆ ತಿಳಿಸಲಾಗಿತ್ತು. ಈ ಪೈಕಿ ಕಳೆದ ಐದು ತಿಂಗಳಿಂದೀಚೆಗೆ 5.17 ಲಕ್ಷಕ್ಕೂ ಅಧಿಕ ಮಂದಿ ದಾಖಲೆಗಳನ್ನು ನೀಡಿ ಪಿಂಚಣಿಗೆ ಅರ್ಹತೆ ಪಡೆದಿದ್ದಾರೆ. ಆದರೆ ಆಗಸ್ಟ್ ಮೊದಲ ವಾರದವರೆಗೆ 17,97,193 ಮಂದಿ ಪಿಂಚಣಿದಾರರು ದಾಖಲೆಗಳನ್ನು ಸಲ್ಲಿಸಿಲ್ಲ (ಸುಳ್ಳು ವಯಸ್ಸು, ತೆರಿಗೆ ಪಾವತಿ, ವಲಸೆ ಹೋದವರು, ವಿಳಾಸ ತಪ್ಪಾದವರು ಇತ್ಯಾದಿ). ಇವರಿಗೆ ದಾಖಲೆ ಸಲ್ಲಿಸಲು ಮತ್ತೊಮ್ಮೆ ಅವಕಾಶ ಕಲ್ಪಿಸಲಾಗಿದೆ ಎಂದು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಆಯುಕ್ತಾಲಯ ತಿಳಿಸಿದೆ.

ಶಂಕಾಸ್ಪದ ಫಲಾನುಭವಿಗಳ ಪೈಕಿ ಮಂಜೂರಾತಿ ಸಮಯದಲ್ಲಿ ವಯಸ್ಸಿನ ದೃಢೀಕರಣದ ಬಗ್ಗೆ ತಪ್ಪು ದಾಖಲೆಗಳನ್ನು ನೀಡಿ ಪಿಂಚಣಿ ಮಂಜೂರಾತಿ ಪಡೆಯುತ್ತಿದ್ದ 79,988 ಮಂದಿ ಪತ್ತೆಯಾಗಿದ್ದಾರೆ. ಇವರಿಗೆ ನೀಡುತ್ತಿದ್ದ ಪಿಂಚಣಿಯನ್ನು ರದ್ದುಗೊಳಿಸಲಾಗಿದೆ. ವಿಳಾಸದಲ್ಲಿ ಲಭ್ಯವಿಲ್ಲದ 2.53 ಲಕ್ಷಕ್ಕೂ ಅಧಿಕ ಮಂದಿ ಪತ್ತೆಯಾಗಿದ್ದಾರೆ. ಇವರು ತಮ್ಮ ವ್ಯಾಪ್ತಿಯ ತಹಸೀಲ್ದಾರರಿಗೆ ದಾಖಲೆಗಳನ್ನು ಸಲ್ಲಿಸಬಹುದು ಎಂದು ಇಲಾಖೆ ತಿಳಿಸಿದೆ.

ಗ್ರಾಮ ಆಡಳಿತ ಅಧಿಕಾರಿಗಳ ಪರಿಶೀಲನೆ ಸಮಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾದ, ವಿಳಾಸದಲ್ಲಿ ವಾಸವಿಲ್ಲದ, ಆದಾಯ ಪ್ರಮಾಣಪತ್ರ ಸಲ್ಲಿಸದ ಫಲಾನುಭವಿಗಳ ಸಂಖ್ಯೆ 17,97,193ರಷ್ಟಿದೆ. ಇವರಿಗೆ ತಹಸೀಲ್ದಾರರಿಂದ ನೋಟಿಸ್ ನೀಡಲಾಗಿದ್ದು, ಪ್ರತಿಕ್ರಿಯೆಗೆ 30 ದಿನಗಳ ಕಾಲಾವಕಾಶ ನೀಡಲಾಗಿದೆ. ಜೊತೆಗೆ ಅಂತಹವರ ಎಲೆಕ್ಟ್ರಾನಿಕ್ಸ್ ಡೆಲಿವರಿ ಆಫ್ ಸಿಟಿಜನ್ ಸರ್ವೀಸಸ್ (ಇ.ಡಿ.ಸಿ.ಎಸ್) ಮೂಲಕ ಎಸ್.ಎಂ.ಎಸ್ ಸಂದೇಶ ಕಳುಹಿಸಿ ಆದಾಯ ದೃಢೀಕರಣ ಪತ್ರ ಅಥವಾ ಇತರೆ ದಾಖಲಾತಿಗಳನ್ನು ಸಂಬಂಧಪಟ್ಟ ತಹಸೀಲ್ದಾರ್ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಆದುದರಿಂದ ಇವರುಗಳು ದಾಖಲೆಗಳನ್ನು ಇಲಾಖೆಗೆ ನೀಡಲು ಹೆಚ್ಚು ಕಾಲಾವಕಾಶ ನೀಡಿ, ಸ್ಥಗಿತಗೊಳಿಸಿರುವ ಪಿಂಚಣಿಯನ್ನು ಪುನಃ ನೀಡಲು ಕ್ರಮ ಕೈಗೊಳ್ಳುವಂತೆ ಈ ಸಾರ್ವಜನಿಕ ಮಹತ್ವದ ವಿಚಾರವನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಡಾ॥ ಯತೀಂದ್ರ. ಎಸ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ರಾಜ್ಯದ ಮಲೆನಾಡು ಪ್ರದೇಶಗಳಲ್ಲಿನ ಜನವಸತಿ ಪ್ರದೇಶಗಳಾದ ನೂರಾರು ಗ್ರಾಮೀಣ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳನ್ನಾಗಿ ಘೋಷಿಸಿರುವುದರಿಂದ ಗ್ರಾಮೀಣ ಭಾಗದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವ ಕುರಿತು.**

- - - - -

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ರಾಜ್ಯ ಸರ್ಕಾರವು ರಾಜ್ಯದ ಮಲೆನಾಡು ಪ್ರದೇಶಗಳ ಜಿಲ್ಲೆಗಳಲ್ಲಿನ ಜನವಸತಿ ಪ್ರದೇಶಗಳಾದ ನೂರಾರು ಗ್ರಾಮೀಣ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಘೋಷಿಸಿರುವುದು ಗ್ರಾಮೀಣ ಭಾಗದಲ್ಲಿ ಜೀವನ ಕಟ್ಟಿಕೊಂಡಿರುವ ಹಾಗೂ ಜೀವನ ಕಟ್ಟಿಕೊಳ್ಳಲು ಪರದಾಡುತ್ತಿರುವ ರೈತರಿಗೆ ಹಾಗೂ ಸಾರ್ವಜನಿಕರಿಗೆ ಬರಸಿಡಿಲು ಬಡಿದಂತಾಗಿದೆ. ವಿಶೇಷವಾಗಿ ಈ ಪಟ್ಟಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಹಲವು ಜನವಸತಿ ಗ್ರಾಮೀಣ ಪ್ರದೇಶಗಳೂ ಕೂಡ ಸೇರ್ಪಡೆಯಾಗಿದ್ದು, ಈ ಬಗ್ಗೆ ಹಲವು ಗ್ರಾಮಗಳ ರೈತ ಸಂಘಗಳು ಹತ್ತಾರು ಬಾರಿ ಆಕ್ಷೇಪಣೆ ಸಲ್ಲಿಸಿವೆ.

ಇವುಗಳ ಮಧ್ಯೆ ಈಗ ಮತ್ತೊಮ್ಮೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಜಿಲ್ಲೆಯ ಗ್ರಾಮಗಳನ್ನು ಅತಿ ಸೂಕ್ಷ್ಮ ಪ್ರದೇಶಗಳೆಂದು ಘೋಷಿಸಲು ಹೊರಟಿರುವುದು ಅವೈಜ್ಞಾನಿಕವಾದ ಹಾಗೂ ವಿಷಾದನೀಯ ಸಂಗತಿಯಾಗಿದೆ. ಈ ಹಿಂದೆ ಇಲ್ಲಿನ ಭೂಪ್ರದೇಶಗಳಲ್ಲಿ ಅಂದರೆ ಗ್ರಾಮಗಳಲ್ಲಿ ವಾಸಿಸುತ್ತಿರುವ ನೂರಾರು ಜನರಿಗೆ ನಿವೇಶನಗಳನ್ನು ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿರುತ್ತದೆ. ಅವೆಲ್ಲವೂ ಕೂಡ ತಮ್ಮ ಗಮನದಲ್ಲಿಯೇ ಇದೆ. ಅಲ್ಲದೆ ನಮೂನೆ 53, 52, 57 ಅರ್ಜಿಗಳನ್ನು ಕೊಟ್ಟಿರುವ ರೈತ ಕುಟುಂಬಗಳು ಹಕ್ಕುಪತ್ರಗಳಿಗಾಗಿ ಕಾಯುತ್ತಿವೆ. ಅಲ್ಲದೆ ಜಂಟಿ ಸರ್ವೆ ಕಾರ್ಯವು ಕೂಡ ನಡೆಯುತ್ತಿದೆ. ಈಗ ಇದರ ನಡುವೆ ಏಕಾಏಕಿಯಾಗಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಅತಿ ಸೂಕ್ಷ್ಮ ಪ್ರದೇಶವೆಂದು ಘೋಷಿಸಿರುವುದು ಮೂಲಭೂತ ಸೌಕರ್ಯಗಳ ಕನಸು ಕಾಣುತ್ತಿರುವ ಈ ಭಾಗದ ರೈತರ, ಕೂಲಿ ಕಾರ್ಮಿಕರ ಮತ್ತು ಬಡವರಿಗೆ ಅವರ ಜೀವನದ ಬಗ್ಗೆ ದಿಕ್ಕೇ ತೋಚದಂತಾಗಿದೆ.

ಆದ್ದರಿಂದ, ಇದೊಂದು ನಮ್ಮ ಜಿಲ್ಲೆಯ ಗ್ರಾಮೀಣ ಭಾಗದ ರೈತರ ಹಾಗೂ ಸಾರ್ವಜನಿಕರ ಜೀವನದ ಪ್ರಶ್ನೆಯಾಗಿರುವುದರಿಂದ ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ರಾಮಲಿಂಗೇಗೌಡ (ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ,

...

**(ಉತ್ತರವನ್ನು ಲಗತ್ತಿಸಿದೆ)**

(ಮುಂದು)

(756) 18-08-2026 4-00 KH/VK (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಯಾವುದೂ ದಾಖಲೆಗೆ ಹೋಗುವುದಿಲ್ಲ. ಪ್ರಶ್ನೋತ್ತರ ಅವಧಿ ಬಿಟ್ಟು ಬೇರೆ ಯಾವುದೂ ದಾಖಲೆಗೆ ಹೋಗಬಾರದು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ರವರೇ, ಶೂನ್ಯವೇಳೆ ತೆಗೆದುಕೊಂಡಿದ್ದೇನೆ.

**ಊ) ವಿಷಯ:- ಹುಬ್ಬಳ್ಳಿ ಮಹಾನಗರದ ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ನಡೆಯುತ್ತಿರುವ ಫ್ಲೈ ಓವರ್ ನಿರ್ಮಾಣ ಕಾಮಗಾರಿಯಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಉಂಟಾಗುತ್ತಿರುವ ತೊಂದರೆಗಳ ಕುರಿತು. - - - - -**

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ದಿನಾಂಕ:13-08-2026 ರಂದು 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ "ಹುಬ್ಬಳ್ಳಿ ಫ್ಲೈ ಓವರ್ ಕಾಮಗಾರಿ ತಂದ ನರಕ" ಎಂಬ ಶೀರ್ಷಿಕೆಯಡಿ ಪ್ರಕಟವಾದ ಪತ್ರಿಕಾ ವರದಿಯ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ಧನ್ಯವಾದಗಳು. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹುಬ್ಬಳ್ಳಿ ಮಹಾನಗರದ ಕಿತ್ತೂರು ಚೆನ್ನಮ್ಮ ಸರ್ಕಲ್ ದಾಟುವ ಮಧ್ಯೆ ರಾಷ್ಟ್ರೀಯ ಹೆದ್ದಾರಿಗೆ ಫ್ಲೈ ಓವರ್ ನಿರ್ಮಿಸಲಾಗುತ್ತಿದೆ. ಸದರಿ ಕಾಮಗಾರಿಯು ಒಂದೇ ವರ್ಷದಲ್ಲಿ ಮುಕ್ತಾಯವಾಗಬೇಕಾಗಿತ್ತು. ಆದರೆ, 5 ವರ್ಷಗಳಾದರೂ ಮುಗಿಯದೇ ಇರುವುದು ವಿಷಾದನೀಯ ಸಂಗತಿಯಾಗಿದೆ. ರಾಜ್ಯದ 2ನೇ ಮುಖ್ಯ ಮಹಾನಗರ ಎನಿಸಿಕೊಂಡಿರುವ ಹುಬ್ಬಳ್ಳಿ ನಗರದ ನಟ್ಟ ನಡುವೆ ರಾಷ್ಟ್ರೀಯ ಹೆದ್ದಾರಿ ಫ್ಲೈ ಓವರ್ ನಿರ್ಮಿಸಲಾಗುತ್ತಿದೆ. ಅದರ ಜೊತೆಗೆ ಸಾರ್ವಜನಿಕರ ಅನುಕೂಲ ಮತ್ತು ಸುರಕ್ಷತೆಯೂ ಅಷ್ಟೇ ಮುಖ್ಯ. ಸಾರ್ವಜನಿಕರ ತೆರಿಗೆ ಹಣದಿಂದ ನಡೆಯುವ ಕಾಮಗಾರಿಯು ಗುಣಮಟ್ಟ ಮತ್ತು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದರೆ, ನಿಗದಿತ ಅವಧಿ ಮುಗಿದರೂ ಸಹ ಕಾಮಗಾರಿಯು ಪೂರ್ಣಗೊಳ್ಳದೇ ಇರುವುದರಿಂದ, ಸಾರ್ವಜನಿಕರಿಗೆ ಸಂಚಾರ ದಟ್ಟಣೆ, ಧೂಳು, ಶಬ್ದ ಮಾಲಿನ್ಯ, ವಾಹನಗಳ ಸಂಚಾರಕ್ಕೆ ಅಡಚಣೆ ಹಾಗೂ ಸಮಯದ ವ್ಯರ್ಥ ಸೇರಿದಂತೆ ಹಲವು ರೀತಿಯ ತೊಂದರೆಯಾಗುತ್ತಿದೆ. ವಿಶೇಷವಾಗಿ ಕಚೇರಿಗೆ ತೆರಳುವ ನೌಕರರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು, ರೋಗಿಗಳು ಹಾಗೂ ತುರ್ತು ಸೇವೆಗಳನ್ನು ಪಡೆಯಬೇಕಾದ ಸಾರ್ವಜನಿಕರು ಪರ್ಯಾಯ ರಸ್ತೆ ಇಲ್ಲದೇ, ಪ್ರತಿದಿನ ಅದೇ ರಸ್ತೆಯಲ್ಲಿಯೇ ಓಡಾಡುವ ಸಾರ್ವಜನಿಕರು ಧೂಳು ಸೇವಿಸಿ ಅನಾರೋಗ್ಯಕ್ಕೆ ಕಾರಣರಾಗುತ್ತಿದ್ದಾರೆ.

ಸಾರ್ವಜನಿಕರು ಸಹಕರಿಸಿದಲ್ಲಿ ಮಾತ್ರ ಯಾವುದೇ ಅಭಿವೃದ್ಧಿ ಕಾರ್ಯ ಯಶಸ್ವಿಯಾಗುತ್ತದೆ. ಆದ್ದರಿಂದ, ಕನಿಷ್ಠ ತೊಂದರೆಯಾಗದ ರೀತಿಯಲ್ಲಿ ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿಯನ್ನು ಮುಗಿಸುವುದು ಸರ್ಕಾರಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ, ಸಾರ್ವಜನಿಕರ ಸಮಸ್ಯೆಗಳನ್ನು ನಿರ್ಲಕ್ಷಿಸದೇ ಅವರಿಗೆ ಮೂಲಭೂತ ಸೌಲಭ್ಯಗಳನ್ನು ನಿರ್ಲಕ್ಷಿಸದೇ ಶೀಘ್ರ ಪರಿಹಾರ ನೀಡುವ ಮೂಲಕ ಜನಪರ ಆಡಳಿತಕ್ಕೆ ಮತ್ತಷ್ಟು ಬಲ ನೀಡಬೇಕೆಂದು ಸಂಬಂಧಪಟ್ಟ ಸಚಿವರಿಂದ ಉತ್ತರ ಬಯಸಿದ್ದು, ಸದರಿ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಫ್.ಹೆಚ್. ಜಕ್ಕಪ್ಪನವರ್ ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಯಾವುದೂ ದಾಖಲೆಗೆ ಹೋಗುವುದಿಲ್ಲ. ಮೊದಲು ಶೂನ್ಯವೇಳೆ ಮುಗಿಯಲಿ. ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ.

7. <u>ಚುನಾವಣಾ ಪ್ರಸ್ತಾವಗಳು</u>

**ಅ) "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು."**

- - - -

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸಲು ಅನುಮತಿ ನೀಡಬೇಕೆಂದು ಪ್ರಸ್ತಾಪಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೇಂದರೆ;

**"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು."**

**<u>ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ಸದನದ ಅನುಮೋದನೆ ದೊರಕಿತು</u>**

**ಆ) "ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು."**

- - - -

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸಲು ಅನುಮತಿ ನೀಡಬೇಕೆಂದು ಪ್ರಸ್ತಾಪಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು."**

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ಸದನದ ಅನುಮೋದನೆ ದೊರಕಿತು**

## 9. ವಿಧೇಯಕವನ್ನು ಹಿಂಪಡೆಯುವ ಪ್ರಸ್ತಾವ

## "ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2018

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2018 ನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿ ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು: ಪ್ರಸ್ತಾವ ಏನೇಂದರೆ;**

**"2018ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿ ನೀಡುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

## ಪ್ರಸ್ತಾವದ ಅಂಗೀಕಾರ

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, 2018ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:- ಪ್ರಸ್ತಾವ ಏನೇಂದರೆ;**
**"ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಸದನದ ಅನುಮತಿಯನ್ನು ಕೋರುವುದು."**

**"ಕರ್ನಾಟಕ ವಿಧಾನಸಭೆ ಅನುಮತಿ ನೀಡಿರುವ 2018ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿ ನೀಡುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕವನ್ನು ಹಿಂದಕ್ಕೆ ಪಡೆಯಲು ಅನುಮತಿಸಲಾಯಿತು**

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆ . . .

**(ಗೊಂದಲ)**

**ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, (ಗೊಂದಲ) ದೇವರ ಹುಂಡಿಯ ದುಡ್ಡು ಎಲ್ಲಿಗೆ ಹೋಗಿದೆ ಎನ್ನುವ ಬಗ್ಗೆ ಒಬ್ಬೊಬ್ಬರೇ ಚರ್ಚೆಗೆ ಬನ್ನಿ. ಆ ಬೋರ್ಡ್ ಅನ್ನು ಕೆಳಗೆ ಇಟ್ಟು ಚರ್ಚೆಗೆ ಬನ್ನಿ. ಇವರು ಜನರ ದಿಕ್ಕನ್ನು ತಪ್ಪಿಸುತ್ತಾರೆ. ದೇವರ ಹುಂಡಿಯ ದುಡ್ಡು ಎಲ್ಲಿಗೆ ಹೋಗಿದೆ ಎನ್ನುವ ಬಗ್ಗೆ ಚರ್ಚೆಗೆ ಬನ್ನಿ. (ಗೊಂದಲ) ಮಂತ್ರಿಗಳು ಏಕೆ ರಾಜೀನಾಮೆ ಕೊಡಬಾರದು ಎಂದು ನಾವು ಹೇಳುತ್ತೇವೆ. ಇಲ್ಲಿ ಮಾನ್ಯ ರಾಹುಲ್ ಗಾಂಧಿಯವರ ಹೆಸರನ್ನು ತರುತ್ತಾರೆ. ಪೋಸ್ಟರ್ ಅನ್ನು ಕೆಳಗೆ ಇಟ್ಟು ಚರ್ಚೆಗೆ ಬನ್ನಿ.

**(ಗೊಂದಲ)**

(ಮುಂದು)

(757) 18.8.2026 4.10 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವನ್ನು 4 ಗಂಟೆ 12 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

**(758) 18.08.2026 04.40 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**(ಹತ್ತು ನಿಮಿಷಗಳ ಕಾಲ ಮುಂದೂಡಲ್ಪಟ್ಟಿದ್ದ ಸದನವು ಪುನಃ ಸಂಜೆ 04 ಗಂಟೆ 41 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**(ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ಸ್ಥಾನಗಳಲ್ಲಿ ನಿಂತು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೆ, ಅವರು ನೋಟಿಸ್ ಕೊಟ್ಟು ಚರ್ಚೆ ಮಾಡಲಿ.

**ಸಭಾಪತಿಯವರು:-** ಒಂದು ನಿಮಿಷ ಇರಿ... ಕೇಳುವುದಕ್ಕೆ ನಾನಿದ್ದೇನೆ. ನನ್ನ ಛೇಂಬರ್‌ಗೆ ತಮ್ಮನ್ನು ಕರೆದು ನಾನು ಚರ್ಚೆ ಮಾಡಿದ್ದೇನೆ. ನಾನು ತಮ್ಮಲ್ಲಿ ಮತ್ತೆ ಕೇಳಿಕೊಳ್ಳುತ್ತೇನೆ. ತಾವು ಒಂದು ನೋಟಿಸ್ ಕೊಡಿ. ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಇವತ್ತೂ ಕೂಡ ಹೇಳಿದ್ದಾರೆ.

**ಶ್ರೀ ಸಿ.ಟಿ.ರವಿ:-** ರಾಜೀನಾಮೆ ಕೊಡುವುದಕ್ಕೆ ತಯಾರಿದ್ದಾರೆಯೇ?

**ಸಭಾಪತಿಯವರು:-** ನೀವು ಚರ್ಚೆ ಮಾಡಿದ ನಂತರ ಉತ್ತರ ಕೊಡುವುದಕ್ಕೆ ತಯಾರಿದ್ದಾರೆ. ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಸದನ ನಡೆಯಬೇಕು. Calling Attention notices ಇವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಸದನದಲ್ಲಿ ಈ ಹಿಂದೆ ಚರ್ಚೆಯಾಗಿ ರೂ.187 ಕೋಟಿ ಲೂಟಿಯಾಗಿದೆ ಎಂಬುದನ್ನು ಒಪ್ಪಿಕೊಂಡು, ಆ ಆಧಾರದಲ್ಲಿಯೇ ರಾಜೀನಾಮೆ ತೆಗೆದುಕೊಂಡಿದ್ದು.

**ಶ್ರೀ ಐವನ್ ಡಿ'ಸೋಜ:-** ಅವರು ಏಕೆ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ನಮಗೆ ಹೇಳಿದರೆ, ನಾವೂ ಭಾಗಿಯಾಗುತ್ತೇವೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಹಾಗಾದರೆ ಆಗ ರಾಜೀನಾಮೆ ಪಡೆದಿದ್ದು ಯಾಕೆ? ಈಗ ನ್ಯಾಯಾಲಯ ನಿರ್ದೋಷಿ ಎಂದು ಹೇಳಿದೆಯೇ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:-** ಅವರು ಯಾವ ಕಾರಣಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ನಮಗೆ ತಿಳಿಸುವುದು ಬೇಡವೇ? ಅವರು ನೋಟಿಸ್ ಕೊಡದೆ ಏಕಾಏಕಿ ಹೀಗೆ ಮಾಡಿದರೆ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ.

You have not given any notice. ಯಾವುದೇ ನೋಟಿಸ್ ಕೊಟ್ಟಿಲ್ಲ. ನಮ್ಮ ಹಕ್ಕಿಗೆ ಚ್ಯುತಿಯಾಗುತ್ತಿದೆ. ನಮ್ಮ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೆ, ನಿಯಮಗಳ ವಿರುದ್ಧ ಯಾರು ಕೆಲಸ ಮಾಡುತ್ತಿದ್ದಾರೆಯೋ, ಅವರ ವಿರುದ್ಧ ತಾವು ಕ್ರಮ ಕೈಗೊಳ್ಳಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾವು ಸದನ ನಡೆಯಬೇಕು ಎನ್ನುವ ವಿಶ್ವಾಸದಿಂದಲೇ ಹೇಳಿದ್ದು. ಅದಕ್ಕೆ ನಮ್ಮ ವಿರೋಧವಿಲ್ಲ. ತಾವು ಪತ್ರ ಕೊಡಿ, ಚರ್ಚೆ ಮಾಡೋಣ ಎಂದು ಹೇಳಿದಿರಿ. ಆದರೆ ಈ ವಿಚಾರದಲ್ಲಿ ಅನೇಕ ರೀತಿಯ ಚರ್ಚೆಗಳಾಗಿ ರಾಜೀನಾಮೆ ಪಡೆದ ಮೇಲೆಯೂ ಕೂಡ ಯಾವುದೇ ವ್ಯತ್ಯಾಸವಾಗಿಲ್ಲ. ಇದರಲ್ಲಿ ನಾವು ಯಾವುದೇ ರೀತಿಯಾಗಿ ರಾಜಿಯಾಗುವುದಿಲ್ಲ. ಇದು ಚರ್ಚೆಯ ವಿಷಯವಲ್ಲ. ಇದು ಚರ್ಚೆಯಾಗಿರುವ ವಿಷಯ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:-** ನಿಯಮದ ಪ್ರಕಾರ ನೋಟಿಸ್ ಕೊಟ್ಟರೆ ನಾವು ಚರ್ಚೆಗೆ ಸಿದ್ಧರಿದ್ದೇವೆ. ನಾವೂ ಕೂಡ ಈ ಸದನದ ಸದಸ್ಯರು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ನಮ್ಮ ಸರ್ಕಾರದಲ್ಲಿ ಯಾರಾದರೂ ಒಂದು ರೂಪಾಯಿ ತೆಗೆದುಕೊಂಡರೆ ಅವರನ್ನು ಬಡಿದು ಹಾಕುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಹೇಳುವುದು ಒಂದು, ಮಾಡುವುದು ಇನ್ನೊಂದು.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರು ಘೋಷಣೆಗಳನ್ನು ಕೂಗ ತೊಡಗಿದರು)**

**(ಗೊಂದಲ)**

**ಶ್ರೀ ಈಶ್ವರ ಬಿ. ಖಂಡ್ರೆ:-** ಮಾನ್ಯ ಸಭಾಪತಿಯವರೇ, ಅವರು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಅವರಿಗೆಲ್ಲಾ ಸದನವನ್ನು ನಡೆಸುವ ಇಚ್ಛೆ ಇಲ್ಲವೆನಿಸುತ್ತದೆ.

**(ಗೊಂದಲ)**

**ಶ್ರೀ ಸಿ. ಪುಟ್ಟರಂಗಶೆಟ್ಟಿ:-** ರಾಜ್ಯದಲ್ಲಿ ಬರ ಉಂಟಾಗಿದೆ. ಬರದ ಬಗ್ಗೆ ಚರ್ಚೆ ಮಾಡಲಿ. ಕುಡಿಯುವುದಕ್ಕೆ ನೀರಿಲ್ಲ. ನೀರಿಗೆ ಹಾಹಾಕಾರ ಉಂಟಾಗಿದ್ದು, ಅದರ ಬಗ್ಗೆ ಚರ್ಚೆ ಮಾಡಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಬರದ ಬಗ್ಗೆ ಚರ್ಚೆ ಮಾಡಲಿ. ಬೆಳಕು ಚೆಲ್ಲಲಿ. ಅದು ಬಿಟ್ಟು, ಇದನ್ನು ಹಿಡಿದುಕೊಂಡಿದ್ದಾರಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿಯಾಗಿ ನಿಯಮಾವಳಿಗಳ ವಿರುದ್ಧವಾಗಿ ಮಾಡುವುದು ಸರಿಯಲ್ಲ. ನಿಯಮಾವಳಿಗಳ ಪ್ರಕಾರ ಅವರು ಚರ್ಚೆಗೆ ಬರಲಿ. ರಾಜೀನಾಮೆ ಕೊಡುವುದು ಬಿಡುವ ಬಗ್ಗೆ ಸರ್ಕಾರ ಹೇಳುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಎಸ್.ಸಿ., ಎಸ್.ಟಿ. ಹಣ ನುಂಗಿದ ಭ್ರಷ್ಟ ಸಚಿವನಿಗೆ ಧಿಕ್ಕಾರ, ಬಡವರ ಹಣ ನುಂಗಿದ ಭ್ರಷ್ಟ ಸಚಿವನಿಗೆ ಧಿಕ್ಕಾರ, ಧಿಕ್ಕಾರ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಇದರ ಮಧ್ಯೆ ಚರ್ಚೆಯಾಗಬೇಕಾದ ಸಾಕಷ್ಟು ವಿಷಯಗಳಿವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ವಿಷಯದಲ್ಲಿ ಇಡೀ ಪ್ರಪಂಚವೇ ನೋಡುವಂಥ ಕೆಲಸವನ್ನು ಇವರು ಮಾಡಿದ್ದಾರೆ.

**(ಗೊಂದಲ)**

ನಮ್ಮ ಪಕ್ಷದಲ್ಲಿ ಇಲಿ ಬಿದ್ದಿದೆ ಎಂದು ಹೇಳುತ್ತಿದ್ದಾರೆ. ಅವರ ಪಕ್ಷದಲ್ಲಿ ನಾಯಿ ಸತ್ತು ಬಿದ್ದಿದೆ. ಜಾಮೀನು ಪಡೆದವರು ಅವರಲ್ಲಿಲ್ಲವೆ?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಪುಟ್ಟಣ್ಣನವರು ಭ್ರಷ್ಟ ಸಚಿವರನ್ನು ಬೆಂಬಲಿಸುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಅವರು ಜೈಲಿಗೆ ಹೋದವರನ್ನು ಕರೆದುಕೊಂಡು ಬಂದು ಇಟ್ಟುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಪುಟ್ಟಣ್ಣನವರು ಭ್ರಷ್ಟರ ಬಗ್ಗೆ ಮಾತನಾಡಬಾರದು. ಅವರು ಒಳ್ಳೆಯವರು, ಅಂಥವರನ್ನು ಸಮರ್ಥಿಸಿಕೊಳ್ಳಬಾರದು.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಚರ್ಚೆಗೆ ಬರಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇದು ಚರ್ಚೆಯಾಗಿ ಹೋಗಿದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಈ ರೀತಿ ಮಾಡುತ್ತಿರುವುದು ಸರಿಯೇ? ಅವರ ತಟ್ಟೆಯಲ್ಲಿ ಹೆಗ್ಗಣ ಸತ್ತು ಬಿದ್ದಿದೆ. ಇವರಿಗೆ ಸದನ ನಡೆಯಬಾರದು, ಯಾವುದೇ ವಿಷಯ ಚರ್ಚೆಯಾಗಬಾರದು. ಸದನ ನಡೆಸಬಾರದು ಎನ್ನುವುದೇ ಇವರ ಉದ್ದೇಶ.

**(ಗೊಂದಲ)**

**ಶ್ರೀ ಎನ್. ಎಸ್. ಬೋಸ್‌ರಾಜು:-** ಈ ರೀತಿ ಕಾಲಹರಣ ಮಾಡುತ್ತಿದ್ದರೆ...

**(ಗೊಂದಲ)**

**ಶ್ರೀ ಯು.ಟಿ.ಖಾದರ್:-** ಮತ್ತೆ ಅದನ್ನು ಜನ ತೀರ್ಮಾನ ಮಾಡುತ್ತಾರೆ. ಚರ್ಚೆಯಾಗಬೇಕಾಗಿರುವ ವಿಷಯಗಳ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಕೇವಲ ರಾಜಕೀಯ ಮಾಡಿಕೊಂಡು ಕುಳಿತಿದ್ದಾರೆ. ಬರದ ಬಗ್ಗೆ ಚರ್ಚೆ ಮಾಡಿ, ಜನರ ಕಷ್ಟಗಳ ಬಗ್ಗೆ ಚರ್ಚೆ ಮಾಡಿ. ಅತಿವೃಷ್ಟಿ ಬಗ್ಗೆ ಚರ್ಚೆ ಮಾಡಿಲಿ. ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಲಿ. ಇದು ಯಾವುದೂ ಮಾಡದೆ ಕಾಲಹರಣ ಮಾಡುತ್ತಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ತಮ್ಮ ಸ್ಥಾನಗಳಲ್ಲಿ ನಿಂತು ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು. ಮಾಧ್ಯಮದವರು ಯಾವುದನ್ನೂ ವರದಿ ಮಾಡಬಾರದು.

(ಮುಂದು)

(759) 18-08-2026 (4.50) ಕೆಜಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ನಾಳೆ ಬೆಳಗ್ಗೆ 11:00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 4 ಗಂಟೆ 51 ನಿಮಿಷಗಳಿಗೆ ಮುಕ್ತಾಯಗೊಂಡು. ಪುನಃ ದಿನಾಂಕ 19ನೇ ಆಗಸ್ಟ್ ಮಾಹೆ 2026 ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**